ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBL

ದಿನಾಂಕ ೧೬ನೇ ಸೋಮವಾರ ಮಾರ್ಚ್ ೧೯೮೭ ಫಾಲ್ಗುಣ ೧೯, ೧೯೦೮

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಸದನವು ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್)ರವರು ಪೀಠವನ್ನು ಅಲಂಕರಿಸಿದ್ದರು].

ವಿತ್ತೀಯ ಕಾರ್ಯಕಲಾಪಗಳು

೧೯೮೭-೮೮ರ ಸಾಲಿನ ಕಂದಾಯ ಮಂತ್ರಿತರ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಕಾರ್ಯಕ್ರಮದ ಪಟ್ಟಿಯ ಪ್ರಕಾರ ವಿತ್ತೀಯ ಕಾರ್ಯಕಲಾಪಗಳು ೧೮ನೇ ತಾರೀಖಿಗೆ ಮುಗಿದು, ಫೈನಾನ್ಸ್ ಬಿಲ್, ಅಪ್ರೋಪ್ರಿಯೇಷನ್ ಬಿಲ್ ಪಾಸು ಮಾಡಬೇಕೆಂದು ಒಪ್ಪಿಕೊಂಡಿದ್ದೆವು. ಈಗ ನಾವು ಎರಡು ದಿನ ಹಿಂದೆ ಇದ್ದೇವೆ, ಇನ್ನು ಎರಡು ದಿನದ ಕಾರ್ಯಕಲಾಪಗಳನ್ನು ಗಿಲಿಟಿನ್ ಮಾಡಬೇಕಾಗುತ್ತೋ ಏನೋ. ಮಾನ್ಯ ಕಂದಾಯ ಮಂತ್ರಿಯವರು ಸಂಕ್ಷಿಪ್ತವಾಗಿ ಉತ್ತರ ಕೊಟ್ಟರೆ, ಮುಖ್ಯವಾದ ಇನ್ನು ಎರಡು ಬೇಡಿಕೆಗಳ ಮೇಲೆ ಚರ್ಚೆ ಮಾಡಿ, ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ಲಾನಿಂಗ್‌ಮೇಲೆ ಮಾತನಾಡುವುದು ಬೇಡವೇ ? ಅಲೋಕೇಷನ್‌ಮೇಲೆ ಮಾತನಾಡುವುದು ಬೇಡವೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಬರಗಾಲ ಪರಿಸ್ಥಿತಿ ಏನೂ ಸುಧಾರಿಸಿಲ್ಲ. ಉತ್ತರವನ್ನು ಕೂಡ ದೀರ್ಘವಾಗಿ ಕೊಡಲಿ. ಕ್ಲಾರಿಫಿಕೇಷನ್ ಕೇಳುವುದಕ್ಕೂ ಕೂಡ ತಾವು ಅವಕಾಶವನ್ನು ಮಾಡಿಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಸಹೋದ್ಯೋಗಿಯವರಾದ ಕಾನೂನು ಮಂತ್ರಿಗಳು ಕೊಟ್ಟ ಸೂಚನೆಯನ್ನು ಕೂಡ ಗಮನದಲ್ಲಿಟ್ಟುಕೊಂಡು ಉತ್ತರ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಕಂದಾಯ ಇಲಾಖೆ ಅಂದರೆ, ಬರೀ ಬರಗಾಲ ಮಾತ್ರವಲ್ಲ. ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಗಳನ್ನು ಕೂಡ ಗಮನಕ್ಕೆ ತೆಗೆದುಕೊಂಡು ಉತ್ತರ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಎರಡೂ ಇಲಾಖೆಗಳ ಬಗ್ಗೆ ಸಾಕಷ್ಟು ಸಮಯ ಸಿಗಲಿಲ್ಲ ಎನ್ನುವ ಬಗ್ಗೆ ಸಾಕಷ್ಟು ವಿಷಾದಿಸುತ್ತೇನೆ. ಮಹತ್ವದ ಇಲಾಖೆಗಳ ಬಗ್ಗೆ ಸಾಕಷ್ಟು ಚರ್ಚೆಯಾಗಬೇಕು, ಇದರಲ್ಲಿ ಮಾನ್ಯ ಸದಸ್ಯರುಗಳು ಪಾಲುಗೊಳ್ಳಬೇಕು. ಸರ್ಕಾರದ ಕಾರ್ಯಕಲಾಪಗಳ ಬಗ್ಗೆ ಬೆಳಕನ್ನು ಚೆಲ್ಲಬೇಕೆಂಬ ಆಸೆಯಾಗಿತ್ತು. ದುರ್ದೈವದಿಂದ ಕಳೆದ ಹಲವಾರು ದಿನಗಳಿಂದ ಜನಜೀವನಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಆಗಬೇಕಾದಂಥ ಆಳವಾದ ಅನುಭವದ ಹಿನ್ನಲೆಯಲ್ಲಿ ಚರ್ಚೆಯಾಗದೇ ಇದ್ದರೂ ಕೂಡ, ಚರ್ಚೆಯಲ್ಲಿ ಪಾಲುಗೊಂಡಂಥ ಮಾನ್ಯ ಸದಸ್ಯರುಗಳು ಅನೇಕ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಟೀಕೆಗಳನ್ನು ಕೂಡ ಮಾಡಿದ್ದಾರೆ ಅವುಗಳನ್ನು ನಾನು ಸ್ವಾಗತಿ ಮಾಡುತ್ತೇನೆ. ನಾನು ಹಿಂದಿನ ಸಲ ಮಾತನಾಡುವಾಗ ಯೋಜನಾ ಇಲಾಖೆಯ ಬಗ್ಗೆ

ಪ್ರಾರಂಭದಲ್ಲಿಯೇ ಪ್ರಸ್ತಾಪ ಮಾಡಿದ್ದೆ, ಇಂದೂ ಕೂಡ ಈ ಇಲಾಖೆಯ ಬಗ್ಗೆ ಪ್ರಥಮದಲ್ಲಿಯೇ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ರಾಷ್ಟ್ರದ ಮತ್ತು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಯೋಜನೆ ಇಲಾಖೆ ತನ್ನದೇ ಆದಂಥ ಮಹತ್ವದ ಪಾತ್ರವನ್ನು ಇತ್ತೀಚಿನ ದಿನಗಳಲ್ಲಿ ಮಾಡಿಕೊಂಡುಬರುತ್ತಿದೆ. ಅದು ರಾಷ್ಟ್ರಮಟ್ಟದಲ್ಲಿರಲಿ, ರಾಜ್ಯಮಟ್ಟದಲ್ಲಿರಲಿ, ಮೂಲಭೂತವಾದಂಥ ಸಮಸ್ಯೆಗಳಿಗೆ ಪರಿಹಾರ ಒದಗಿಸತಕ್ಕಂಥ ಚಿಂತನೆಯನ್ನು ಈ ಇಲಾಖೆ ಮಾಡುತ್ತಿದೆ. ಸಮಾಜದಲ್ಲಿ ಸಾವಿರಾರು ಜನ ಹಂತಕರು ಸಿಗಬಹುದು, ಒಬ್ಬ ಚಿಂತಕ ಸಿಗುವುದಿಲ್ಲವೆನ್ನುವ ಮಾತನ್ನು ಹಿಂದೆ ಕೂಡ ಹೇಳಿದ್ದೆ. ಈ ದೃಷ್ಟಿಯಿಂದ ಆಲೋಚನೆ ಮಾಡಿದಾಗ, ವಿಚಾರ ಮಾಡಿದಾಗ ಆ ಮಾತು ತಪ್ಪಾಗಲಾರದೆಂದು ಭಾವಿಸುತ್ತೇನೆ. ಅನಾದಿ ಕಾಲದಿಂದಲೂ ನಡೆದುಕೊಂಡು ಬಂದ ರೀತಿಯಂತೆ ಕಂದಾಯ ಇಲಾಖೆಯನ್ನು ತಾಯಿ ಇಲಾಖೆ ಎನ್ನುವಂಥ ಮಾತನ್ನು ಹೇಳುತ್ತಾ ಬಂದಿದ್ದೇವೆ ಇವತ್ತು ಕಾಲ ಬದಲಾವಣೆಯಾಗಿದೆ, ಅನೇಕ ರೀತಿಯ ಅಭಿವೃದ್ಧಿ ಇಲಾಖೆಗಳು ಇವತ್ತು ಅಸ್ತಿತ್ವದಲ್ಲಿ ಬಂದಿವೆ. ಸಿವಿಲ್, ಮುಲ್ಕಿ, ಫೌಜುದಾರ್ ಹೀಗೆ ಎರಡು ಇಲಾಖೆಗಳು ಮಾತ್ರ ರಾಜಮಹಾರಾಜರುಗಳಿದ್ದಾಗಲೂ ಇದ್ದವು. ಇವತ್ತು ಕಂದಾಯ ಇಲಾಖೆ ತಾಯಿ ಇಲಾಖೆ ಬದಲಿಗೆ ಅಜ್ಜಿ ಇಲಾಖೆಯಾಗಿದೆ ಎನ್ನುವಂಥ ಮಾತನ್ನು ಹೇಳಿದ್ದೇನೆ. ಮಗಳು ತಾಯಿಯಾಗುತ್ತಾಳೆ; ಅಮ್ಮ ಅಜ್ಜಿಯಾಗುತ್ತಿದ್ದಾಳೆ. ಕಾಲ ಬದಲಾವಣೆಯಾಗಿದೆ. ಇವತ್ತು ಯೋಜನಾ ಇಲಾಖೆ ತಾಯಿ ಇಲಾಖೆ ಅಂದರೆ ತಪ್ಪಾಗಲಾರದು, ಎಲ್ಲಾ ಇಲಾಖೆಗಳ ಗುರಿಯನ್ನು ಅನುಷ್ಠಾನಕ್ಕೆ ತರತಕ್ಕಂಥ ಪ್ರಯತ್ನ ಮತ್ತು ಸರ್ಕಾರದ ಎಲ್ಲ ಅಂಗ ಇಲಾಖೆಗಳಿಗೆ ಹೊಂದಾಣಿಕೆ ಮಾಡಿ ಮಾರ್ಗದರ್ಶನ ಮಾಡತಕ್ಕ ಕಾರ್ಯವನ್ನು ಯೋಜನಾ ಇಲಾಖೆ ಮಾಡಬೇಕಾಗಿದೆ. ಎಲ್ಲಿ ಯೋಜನೆ ಸರಿಯಾದ ರೀತಿಯಲ್ಲಿ ಆಗಿರುವುದಿಲ್ಲವೋ ಅಲ್ಲಿ ಅಭಿವೃದ್ಧಿ ಕೂಡ ಕುಂಠಿತವಾಗುತ್ತದೆ. ನಮ್ಮ ಗುರಿ ಕೂಡ ಸಾಧನೆಯಾಗುವುದಿಲ್ಲ. ಅಭಿವೃದ್ಧಿ ಇಲಾಖೆ ರಾಜ್ಯದ ಸಂಪನ್ಮೂಲಗಳ ಬಗ್ಗೆ ಅಧ್ಯಯನ ಮಾಡಿ, ಅದು ನೈಸರ್ಗಿಕ ಸಂಪನ್ಮೂಲಗಳು ಇರಬಹುದು, ಬೇರೆ ಬೇರೆ ರೀತಿಯಲ್ಲಿ ಹಣಕಾಸನ್ನು ಕ್ರೋಢೀಕರಿಸತಕ್ಕ ಸಂಪನ್ಮೂಲಗಳು ಇರಬಹುದು, ಅವುಗಳನ್ನು ಜೋಡಿಸಿ, ಹೊಂದಾಣಿಕೆ ಮಾಡಿ, ನ್ಯಾಯವಾದ ರೀತಿಯಲ್ಲಿ ಎಲ್ಲಾ ಇಲಾಖೆಗಳಿಗೂ ಹಂಚಿ ಯೋಜನಾ ಬದ್ಧವಾಗಿ ಆಡಳಿತ ಕಾರ್ಯ ಆಗಬೇಕು ಎನ್ನುವುದೇ ಮುಖ್ಯವಾದ ಗುರಿ. ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬರಿಗೂ, ಅದರಲ್ಲಿಯೂ ಬಡತನದ ರೇಖೆ ಕೆಳಗೆ ಇರತಕ್ಕ ಕಡು ಬಡವರಿಗೆ ಜೀವನ ಮಟ್ಟವನ್ನು ಸುಧಾರಿಸುವಂಥ ರೀತಿಯೂ ಯೋಜನೆಗಳನ್ನು ರೂಪಿಸುವುದು. ಈ ದಿಸೆಯಲ್ಲಿ ಯೋಜನಾ ಇಲಾಖೆ ತನ್ನ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡತಕ್ಕ ಪ್ರಯತ್ನ ಮಾಡಿದೆ ಅಂದರೆ ತಪ್ಪಾಗಲಾರದು, ಯೋಜನೆಯನ್ನು ತಯಾರು ಮಾಡುವಾಗ ರಾಷ್ಟ್ರದ ಮತ್ತು ರಾಜ್ಯದ ಆರ್ಥಿಕ ಪರಿಸರವನ್ನು ಹಿನ್ನಲೆಯಲ್ಲಿಟ್ಟುಕೊಂಡು ತಯಾರು ಮಾಡುವುದರಲ್ಲಿ ಕಳೆದ ಮೂರು ವರ್ಷಗಳಿಂದಲೂ ಹಿಂದೆ ಬಿದ್ದಿಲ್ಲ ಎನ್ನುವಂಥ ಮಾತನ್ನು ಹೇಳುತ್ತೇನೆ.

ಯೋಜನೆ ಮಾಡತಕ್ಕದ್ದು ಒಂದು ಭಾಗವಾದರೆ, ಆ ಯೋಜನೆಗಳು ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ಬಂದಿವೆಯೋ ಅಥವಾ ಇಲ್ಲವೇ ಎಂಬುದನ್ನು ವಿಮರ್ಶೆ ಮಾಡತಕ್ಕದ್ದು ಅಷ್ಟೇ ಮಹತ್ವ ಕಾರ್ಯ ಈ ಯೋಜನಾ ಇಲಾಖೆಗೆ ಇದೆ. ನಾವು ಕಾಲ ಕಾಲಕ್ಕೆ ಯೋಜನೆಯ ಅನುಷ್ಠಾನವನ್ನು ಪರಿಶೀಲಿಸಿ ಅದರಲ್ಲಿ ಗುರಿ ಸಾಧನೆ ಆಗಿದೆಯೋ ? ಒದಗಿಸಿ ಕೊಟ್ಟಂತಹ ಹಣ ಖರ್ಚಾಗಿದೆಯೇ ಎಂಬುದನ್ನು ನೋಡಬೇಕಾಗಿದೆ. ಆದರೆ ಜೊತೆಗೆ ಅದರ ಲಾಭ ಯಾರಿಗೆ ಮುಟ್ಟಬೇಕೋ ಅವರಿಗೆ ಮುಟ್ಟಿದೆಯೋ, ಮುಟ್ಟದಿದ್ದರೆ ಎಲ್ಲಿ ತಪ್ಪಿದೆ ಆ ತಪ್ಪನ್ನು ಕಂಡುಹಿಡಿದು ಅದನ್ನು ಸರಿಪಡಿಸತಕ್ಕ ಕಾರ್ಯದ ಬಗ್ಗೆ ಕೂಡ ಯೋಚನೆ ಮಾಡುತ್ತದೆ. We have taken corrective measures. ಇವು ಮೂಲಭೂತ ಯೋಜನಾ ಇಲಾಖೆಯ ಕಾರ್ಯಕ್ಷೇತ್ರಗಳು ಈ ದಿಸೆಯಲ್ಲಿ ಯೋಜನೆಯ ವಿಚಾರದಲ್ಲಿ ಹೇಳುವುದಾದರೆ ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ ಪರ್ ಕ್ಯಾಪಿಟಾ ಪ್ಲಾನ್ ಔಟ್‌ಲೇ ಏನೂ ಕಡಿಮೆ ಆಗಿಲ್ಲ. ರಿಸೋರ್ಸಸ್ ಮೋಬಲೈಸ್‌ಸನ್ ಅದು ಕೂಡ ಕಡಿಮೆಯಾಗಿಲ್ಲವೆಂದು ಹೇಳಬಯಸುತ್ತೇನೆ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳು ಕೂಡ ಕಡಿಮೆಯಾಗಿಲ್ಲ. ಸರ್ಕಾರ ಅನಾಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಖರ್ಚುಮಾಡಿದೆ ಎನ್ನುವ ಟೀಕೆ ಇದೆ. ಟೀಕೆಗೆ ಒಳಗಾಗಿರತಕ್ಕ ಕಾರ್ಯಕ್ರಮ ಕಡಿಮೆ ಬೆಲೆಯಲ್ಲಿ ಆಹಾರಧಾನ್ಯಗಳನ್ನು ಪೂರೈಸುವುದು. ಬಟ್ಟೆಬರೆ ಪೂರೈಸುವುದು, ಪಠ್ಯಪುಸ್ತಕ ಕೊಡತಕ್ಕದ್ದು ಇವು ಟೀಕೆಗೆ ಒಳಗಾಗತಕ್ಕದ್ದು ಸ್ವಾಭಾವಿಕ. ಹಣವನ್ನು ಖರ್ಚುಮಾಡಬೇಕಾದರೆ ನೀರಾವರಿ ಯೋಜನೆಗಳು, ವಿದ್ಯುತ್ ಇನ್ನಿತರ ಬೇರೆ ಬೇರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣವನ್ನು

ಕಡಿಮೆ ಖರ್ಚು ಮಾಡಲಾಗಿದೆ ಎನುವ ಟೀಕೆ ಇವೆ. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣವನ್ನು ಕಡಿಮೆ ಮಾಡಲಾಗಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಾವು ಪರಿಶೀಲನೆ ಮಾಡಿ ನೋಡಿದಾಗ ಅದ್ ಸರಿಯಲ್ಲವೆಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನೀವು ಹಣವನ್ನು ಖರ್ಚೇ ಮಾಡಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಖರ್ಚುಮಾಡಿದ್ದೇವೆ. ಅದನ್ನು ಹೇಳುತ್ತೇನೆ ಅದು ಈ ರೀತಿ ಇದೆ.

Per-capita Planned outlay.

1981-82 Karnataka	-	113	Other Major cities	-	101
1982-83 Karnataka	-	121	-do-	-	118
1983-84 Karnataka	-	139	-do-	-	135
1984-85 Karnataka	-	167	-do-	-	155
1985-86 Karnataka	-	193	Other major cities ;		181
1986-87 Karnataka	-	225	Other major cities :		215

The per-capita Planned Out lay has been increased during 1986-87 when compared to other major States.

Planned outlay - 5th Five year Plan - Karnataka 998 crores, Percentage-5.4, Karantaka stands in 10th place ;

In the 6th Five year Plan, it is 2765 crores, percentage : 4.8 Karnataka stands in 6th place ;

In the 7th Five Year Plan, it is 3500 crores, percentage : 4.5 Planned Outlay - Share of different States in Planned Outlay : Karnataka, in the 5th Plan - including Cauvery Basin projects ;

1980-81 - 418 crores, 1981-82 - 449.28 crores, 1982-83 514.99 crores,

Actual Average for the years is 460.75 crores ;

1983-84 — 619.31 crores, 1984—85 — 715.84 crores ;

1985-86 — 717.11 crores.

Annual Average works out to 684.09 crores ;

Per Capita Outlay — 1980—81 — 113 crores ; 1981—82 121 crores ;

1982-83 — 139 crores, Average : 124 crores,

1983-84 — 166 crores, 1984-85 — 193 crores, 1985-86 193 crores

Average works out to 184 crores :

Qutlay of Minimum Needs Programme : 1980-81 - 4[illegible].42 crores 1981-82 — 43.55 crores, 1982-83 — 80.64 crores.

Annual Average - 55.21 crores,

1983-84 — 87.45 crore 1984-85 - 114.87 crores, 1985-86 141.85 crores,

Annual Average - 114.63 crores,

Percapita Expenditure 1981 - 11 crores, 1982 - 12 crores, 1983 — 18 crores, 1983-84 — 3 crores, 1984—85 — 31 crores,

Development Expenditure: 1980—81 — 892.27 crores, 1981-82 — 1011.15 crores. 1982-83 - 1733.69 crores.

Annual Average - 1045.70 crores,

1983- 4 — 1364.29 crores, 1984-85 — 1740.11 crores, 1985—86 — 1901.38 crores,

Annual Average - 1668.58 crores,

Physical progress — Power Installed Capacity :

1980-81 — 13.5 M. Wts, 19 1-82 - 26.99 M. Wts.

1982-83 — 26.26 M. Wts,

Annual Average — 18.92 M. Wts.

1983—84 — 13.5 M. Wts., 1984—85 — 21 M. Wts., 1985 86 — 31 M. Wts.

Annual Average — 21.:3 M. Wts.

Rural Electrification - Number of villages — 1980—81 - 520 villages

೧೯೮೧-೮೨ರಲ್ಲಿ ೮೪೦ ಹಳ್ಳಿಗಳು. ೧೯೮೨-೮೩ರಲ್ಲಿ ೭೫೦ ಹಳ್ಳಿಗಳು. ಇದರಲ್ಲಿ ವಾರ್ಷಿಕ ಸರಾಸರಿ ವರ್ಷಕ್ಕೆ ೭೦೦ ಹಳ್ಳಿಗಳು. ೧೯೮೩-೮೪ರಲ್ಲಿ ೨೮೬೦ ಹಳ್ಳಿಗಳು. ೧೯೮೪-೮೫ರಲ್ಲಿ ೧೪೩೦ ಹಳ್ಳಿಗಳು. ೧೯೮೫-೮೬ರಲ್ಲಿ ೪೮೦ ಹಳ್ಳಿಗಳು. ವಾರ್ಷಿಕ ಸರಾಸರಿ ೧೭೬೦ ಹಳ್ಳಿಗಳು. ಇರಿಗೇಷನ್ ಪಂಪ್‌ಸೆಟ್ಸ್ ೧೯೮೦-೮೧ರಲ್ಲಿ ೧೯ ಲಕ್ಷ. ೧೯೮೧-೮೨ರಲ್ಲಿ ೨೩ ಲಕ್ಷ, ೧೯೮೨-೮೩ರಲ್ಲಿ ೨೬ ಲಕ್ಷ. ವಾರ್ಷಿಕ ಸರಾಸರಿ ೨೩ ಲಕ್ಷ. ೧೯೮೩-೮೪ರಲ್ಲಿ ೩೮ ಲಕ್ಷ. ೧೯೮೪-೮೫ರಲ್ಲಿ ೪೫ ಲಕ್ಷ. ೧೯೮೫-೮೬ರಲ್ಲಿ ೩೮ ಲಕ್ಷ ವಾರ್ಷಿಕ ಸರಾಸರಿ ೪೧ ಲಕ್ಷ. ನಂತರ ಇರಿಗೇಷನ್ ಅಡಿಷನಲ್ ಪೊಟೆನ್ಸಿಯಾಲಿಟಿ ಬಗ್ಗೆ ಹೇಳುವುದಾದರೆ, ೧೯೮೦-೮೧ರಲ್ಲಿ ೨೮ ಲಕ್ಷ ಹೆಕ್ಟೇರ್ಸ್. ೧೯೮೧-೮೨ರಲ್ಲಿ ೩೬ ಲಕ್ಷ ಹೆಕ್ಟೇರ್ಸ್. ೧೯೮೨-೮೩ರಲ್ಲಿ ೬೮ ಲಕ್ಷ ಹೆಕ್ಟೇರ್ಸ್. ವಾರ್ಷಿಕ ಸರಾಸರಿ ೪೯ ಲಕ್ಷ ಹೆಕ್ಟೇರ್ಸ್. ೧೯೮೩-೮೪ರಲ್ಲಿ ೬೮ ಲಕ್ಷ ಹೆಕ್ಟೇರ್ಸ್ ೧೯೮೪-೮೫ರಲ್ಲಿ ೭೦ ಲಕ್ಷ ಹೆಕ್ಟೇರ್ಸ್. ೧೯೮೫-೮೬ರಲ್ಲಿ ೯೨ ಲಕ್ಷ ಹೆಕ್ಟೇರ್ಸ್. ವಾರ್ಷಿಕ ಸರಾಸರಿ ೭೭ ಲಕ್ಷ ಹೆಕ್ಟೇರ್ಸ್. ಇಂಡಸ್ಟ್ರಿಯಲ್ ಎಸ್. ಎಸ್. ಐ. ಯೂನಿಟ್ಸ್ ಬಗ್ಗೆ ಹೇಳುವುದಾದರೆ ೧೯೮೦-೮೧ರಲ್ಲಿ ೨೭೭೬ ಯೂನಿಟ್ಸ್‌ಗಳು. ೧೯೮೧-೮೨ರಲ್ಲಿ ೩೩೯೬ ಯೂನಿಟ್‌ಗಳು. ೧೯೮೨-೮೩ರಲ್ಲಿ ೬೧೯೬ ಯೂನಿಟ್ಸ್‌ಗಳು, ವಾರ್ಷಿಕ ಸರಾಸರಿ ೪೦೮೯ ಯೂನಿಟ್‌ಗಳು. ೧೯೮೩-೮೪ರಲ್ಲಿ ೭೩೮೦ ಯೂನಿಟ್‌ಗಳು, ೧೯೮೪-೮೫ರಲ್ಲಿ ೧೧,೬೧೦ ಯೂನಿಟ್‌ಗಳು. ೧೯೮೫-೮೬ರಲ್ಲಿ ೧೧, ೬೭೦ ಯೂನಿಟ್‌ಗಳು, ವಾರ್ಷಿಕ ಸರಾಸರಿ ೧೦೩೯೭ ಯೂನಿಟ್‌ಗಳು., ನಂತರ ಎಂಪ್ಲಾಯಿಮೆಂಟ್ ಕ್ರಿಯೇಟೆಡ್ ಅಂಡರ್ ಎನ್.ಆರ್.ಇ.ಪಿ. ೧೯೮೦-೮೧ರಲ್ಲಿ ೧೬೧.೯೫ ಲಕ್ಷ ಮ್ಯಾಂಡೇಸ್. ೧೯೮೧-೮೨ರಲ್ಲಿ ೧೮೫.೪೫ ಲಕ್ಷ ಮ್ಯಾಂಡೇಸ್. ೧೯೮೨-೮೩ರಲ್ಲಿ ೨೩೮.೧೩ ಲಕ್ಷ ಮ್ಯಾಂಡೇಸ್. ನಂತರ ೧೯೮೩-೮೪ರಲ್ಲಿ ೨೩೪.೪೫ ಲಕ್ಷ ಮ್ಯಾಂಡೇಸ್. ೧೯೮೪-೮೫ರಲ್ಲಿ ೧೭೫.೦೫ ಲಕ್ಷ ಮ್ಯಾಂಡೇಸ್. ೧೯೮೫-೮೬ರಲ್ಲಿ ೧೫೭.೦೦ ಲಕ್ಷ ಮ್ಯಾಂಡೇಸ್. ವಾರ್ಷಿಕ ಸರಾಸರಿ ೨೬೯.೦೦

ಲಕ್ಷ ಮ್ಯಾಂಡೇಸ್. ನಾನು ಇದರ ಅಂಕಿ-ಸಂಖ್ಯೆಗಳನ್ನು ಉದಾಹರಿಸಿದ್ದು, ನಾವು ಬಡತನ ನಿವಾರಣೆಯ ಬಗ್ಗೆ, ಅದು ಆಹಾರ ವಿತರಣೆ ಕಾರ್ಯಕ್ರಮವಾಗಿರಬಹುದು, ಬಟ್ಟೆ ಹಂಚುವ ಕಾರ್ಯಕ್ರಮವಾಗಿರಬಹುದು. ಪಠ್ಯಪುಸ್ತಕವನ್ನು ಹಂಚುವ ಕಾರ್ಯಕ್ರಮವಾಗಿರಬಹುದು. ಮತ್ತು ಬರಗಾಲದ ಪರಿಸ್ಥಿತಿಯಲ್ಲೂ ಕೂಡ ಈ ಎಲ್ಲಾ ಕಾರ್ಯಗಳಲ್ಲೂ ಅಭಿವೃದ್ಧಿ ಕಾರ್ಯಗಳು ಹೆಚ್ಚೆಚ್ಚು ಆಗುತ್ತಾ ಹೋಗಿಯೇ ಹೊರತು ಕಡಿಮೆಯಾಗಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ. ನಮಗೆ ಹಣದುಬ್ಬರ ಜಾಸ್ತಿಯಾದಷ್ಟೂ ರೂಪಾಯಿಯ ಬೆಲೆ ಕಡಿಮೆಯಾಗುತ್ತದೆ, ಆದರೂ ಕೂಡ ನಾವು ಮಾಡಿರುವಂತಹ ಸಾಧನೆಯ ಲೆಕ್ಕವನ್ನು ತೆಗೆದುಕೊಂಡರೆ ಅದರಲ್ಲೂ ಫಿಜಿಕಲ್ ಅಚೀವ್‌ಮೆಂಟ್ ವಿಚಾರದಲ್ಲಿ ನೀರಾವರಿ ಇರಬಹುದು, ವಿದ್ಯುಚ್ಛಕ್ತಿ ಇರಬಹುದು, ಕೈಗಾರಿಕೆ ಇರಬಹುದು. ಹೆಚ್ಚು ಸಾಧನೆಯನ್ನು ಮಾಡಿದ್ದೇವೆ. ಮಿನಿಮಮ್ ನೀಡ್ ಪ್ರೋಗ್ರಾಂನಲ್ಲೂ ಕೂಡ ನಾವು ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಿದ್ದೇವೆ. ರಾಜ್ಯ ಅನೇಕ ರೀತಿಯ ಮುಗ್ಗಟ್ಟುಗಳನ್ನು ಎದುರಿಸುತ್ತಿರುವಾಗಲೂ ಸರ್ಕಾರ ಯಾವುದೇ ರೀತಿಯ ಅಗ್ಗದ ಜನಪ್ರಿಯತೆಗಾಗಿ ಹಾಗೂ ರಾಜ್ಯದ ಆರ್ಥಿಕ ಹಿತಾಸಕ್ತಿಯನ್ನು ಕೈಬಿಟ್ಟಿದ್ದೇವೆಂದು ಹೇಳಿರುವುದರಿಂದ ಹುರುಳಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಈ ರಾಜ್ಯದಲ್ಲಿ ಯೋಜನಾ ಇಲಾಖೆ ತನ್ನದೇ ಆದ ರೀತಿಯಲ್ಲಿ ಈ ಕಾರ್ಯಕ್ರಮಗಳನ್ನು ಪರಿಶೀಲನೆ ಮಾಡುತ್ತಿದೆ. ಸಲಹೆಗಳನ್ನು ಕೂಡ ಕೊಟ್ಟಿದೆ ಎನ್ನುವ ವಿಚಾರವನ್ನು ನಾನು ಹೇಳಬಯಸುತ್ತೇನೆ. ಇದರ ಜೊತೆಗೆ ನಾನು ಹೋದ ಸಲ ಹೇಳಿದಂತೆ ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರತಕ್ಕಂತಹದ್ದರಲ್ಲಿ ಯಾವ ರೀತಿ ಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಪರಿಶೀಲನೆ ಮಾಡತಕ್ಕಂತಹ ವಿಚಾರವನ್ನು ಹೇಳಿದ್ದೆ, ಅದನ್ನು ಈ ಇಲಾಖೆ ಮಾಡಿದೆ. ನಾನು ಈ ವಿಚಾರದಲ್ಲಿ ಕೆಲವು ವಿಷಯಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತಿಳಿಸಬಯಸುತ್ತೇನೆ. ಕಾರಣವೇನೆಂದರೆ, ಈ ಯೋಜನಾ ಇಲಾಖೆಯ ಬಗ್ಗೆ ನಮಗೆ ಇರತಕ್ಕಂತಹ ಆಸಕ್ತಿ ಅಷ್ಟಾಗಿ ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ. ಸದಸ್ಯರು ಇರಬಹುದು. ಸರ್ಕಾರವೇ ಇರಬಹುದು. ಈ ಇಲಾಖೆಯ ಮಹತ್ವವನ್ನು ಈ ಇಲಾಖೆಯ ಚಟುವಟಿಕೆಗಳನ್ನು ಬಹಳ ಚೆನ್ನಾಗಿ ಅಧ್ಯಯನ ಮಾಡತಕ್ಕಂಥದು ಬಹಳ ಅವಶ್ಯಕ. ಸದಸ್ಯರಿಗೆ ಸರಿಯಾಗಿ ಸೂಕ್ತ ತಿಳುವಳಿಕೆಯನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ಈ ಇಲಾಖೆ ಹಾಕಿಕೊಂಡಿದೆ. ಅನೇಕ ಪ್ರಕಟಣೆಗಳನ್ನೂ ಕೂಡ ಹೊರತರುತ್ತಿದೆ. ಎಕಾನಮಿಕ್ ಸರ್ವೇ ಇರಬಹುದು. ಬೇರೆ ಬೇರೆ ಸಾಹಿತ್ಯಗಳನ್ನು ಒದಗಿಸುತ್ತಿದೆ. ಅವುಗಳನ್ನು ಓದತಕ್ಕಂತಹದ್ದು, ವಿಷಯಗಳನ್ನು ತಿಳಿದುಕೊಂಡು ಅದರ ಆಧಾರದ ಮೇಲೆ ಈ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಳೆಯತಕ್ಕಂತಹ ಒಂದು ಮನೋಭೂಮಿಕೆಯನ್ನು ತಯಾರು ಮಾಡಬೇಕಾಗಿದೆ. ಬರೀ ಶಾಸಕರಿಗಷ್ಟೇ ಅಲ್ಲ. ಅಧಿಕಾರ ವರ್ಗದವರಲ್ಲೂ ಇದರ ಅವಶ್ಯಕತೆ ಇದೆ. ಇದರ ಜೊತೆಗೆ ಜನತೆಯ ಮನಸ್ಸಿನಲ್ಲೂ ಕೂಡ ಇದರ ಅರಿವಿನ ಬಗ್ಗೆ ಆಕಾಂಕ್ಷೆ ಮೂಡಬೇಕಾಗುತ್ತದೆ. ಪೀಪಲ್ಸ್ ಪಾರ್ಟಿಸಿಪೇಷನ್‌ನ ಅವಶ್ಯಕತೆ ಬಹಳವಾಗಿದೆ. ಅವರ ಮುಂದೆ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳು ಬಂದಾಗ ಅವುಗಳ ಬಗ್ಗೆ ತೀರ್ಮಾನ ಮಾಡತಕ್ಕಂತಹದ್ದಕ್ಕೆ ಅನುಕೂಲವಾಗುತ್ತದೆ. ಈ ಬಗ್ಗೆ ನಾವು ಹೋದ ಸಲ ಹೇಳಿದಂತೆ ಆ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ನಮ್ಮ ಇಲಾಖೆ ಹಾಕಿಕೊಂಡಿದೆ. ಈ ಬಗ್ಗೆ ನಾವು ೮ ಇಲಾಖೆಗಳನ್ನು ಅಧ್ಯಯನಕ್ಕಾಗಿ ತೆಗೆದುಕೊಂಡಿದ್ದೇವೆ. ಮತ್ತು ಇವ್ಯಾಲ್ಯುಯೇಷನ್ ಮಾಡತಕ್ಕಂತಹ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ಇದರಲ್ಲಿ ವಿಶೇಷವಾದ ಅಧ್ಯಯನವನ್ನು ಐ. ಆರ್. ಇ. ಪಿ. ಯಲ್ಲಿ ಮಾಡಿದ್ದೇವೆ, ಜಿಲ್ಲಾ ಆಸ್ಪತ್ರೆ, ತೀವ್ರ ಪಶು ಅಭಿವೃದ್ಧಿ ಯೋಜನೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ, ಪೌಷ್ಟಿಕ ಆಹಾರ ಯೋಜನೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು, ರಾಷ್ಟ್ರೀಯ ಬೀಜ ಅಭಿವೃದ್ಧಿ ಕಾರ್ಯಕ್ರಮ ಮತ್ತು ಬಡತನ ನಿರ್ಮೂಲನ ಕಾರ್ಯಕ್ರಮ. ಇವುಗಳ ಬಗ್ಗೆ ನಾವು ಸಮೀಕ್ಷೆ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಹೇಳುವಂತಹದ್ದು ಎಕನಾಮಿಕ್ ಸರ್ವೇಯಲ್ಲಿದೆ. ನಿಮ್ಮಲ್ಲಿರುವಂತಹ ಸುಮಾರು ೨೦ ಕಾರ್ಯಕ್ರಮಗಳಲ್ಲಿ ಬಡವರಿಗೆ ಸಾಮಾನ್ಯ ಜನರಿಗೆ ಅನುಕೂಲವಾಗತಕ್ಕಂತಹ ಕಾರ್ಯಕ್ರಮದಲ್ಲಿ ನಿಮ್ಮ ಸಾಧನೆ ೧೦೦ಕ್ಕೆ ನೂರರಷ್ಟು ಸೊನ್ನೆ. ಗೋಬರ್ ಗ್ಯಾಸ್. ಈ ರೀತಿಯ ೨-೩ ಕಾರ್ಯಕ್ರಮಗಳನ್ನು ಬಿಟ್ಟರೆ ಬಾಕಿ ಎಲ್ಲ ರೂರಲ್ ಹೌಸಿಂಗ್ ತೆಗೆದುಕೊಳ್ಳಿ ಬಾಂಡೆಡ್ ಲೇಬರ್ ತೆಗೆದುಕೊಳ್ಳಿ, ನಿಮ್ಮ ಸಾಧನೆ ಏನೇನೂ ಇಲ್ಲ; ಬೇಕಾದರೆ ಓದಿ ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನೇ ಹೇಳುತ್ತೇನೆ. ಸಮೀಕ್ಷೆ ಮತ್ತು ಅಧ್ಯಯನದ ಉದ್ದೇಶ ಏನಿದೆ ಅದು ಬಹಳ ಸ್ಪಷ್ಟವಾಗಿದೆ. ಅದಕ್ಕಾಗಿಯೇ ಹೇಳುತ್ತಿದ್ದೇನೆ. ಈ ಮೌಲ್ಯಮಾಪನ ಮತ್ತು ಅಧ್ಯಯನದ ಉದ್ದೇಶ ಯೋಜನೆ ಎಷ್ಟರಮಟ್ಟಿಗೆ ಸಫಲವಾಗಿದೆ. ಮತ್ತು ಎಷ್ಟು ಹಣ ಯೋಜನೆಗಾಗಿ ವಿನಿಯೋಗವಾಗಿದೆ ಎಂಬುದನ್ನು ತಿಳಿಯುವುದು. ಈ ಯೋಜನೆಯಿಂದ ಶೇಕಡ ಎಷ್ಟು ಮಂದಿ ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆ ಎಂಬುದನ್ನು ನೋಡಿ ಇರತಕ್ಕ ನ್ಯೂನ್ಯತೆಗಳನ್ನು ಸರಿಪಡಿಸಿ ಪರಿಹಾರ ನೀಡವುದು. ಇದನ್ನು ನೋಡಿದಾಗ ಕೆಲವು ವಿಚಾರ ಗಳನ್ನು ಒಪ್ಪಬೇಕಾಗುತ್ತದೆ. ಕೆಲವು ಕಡೆ ನಾವು ಏನು ಗುರಿ ಇಟ್ಟಿದ್ದೇವೆ ಅದಕ್ಕೆ ಮೀರಿ ಹಣ ಖರ್ಚಾಗಿದೆ. ಆದರೆ ಗುರಿ ಸಾಧನೆಯಲ್ಲಿ ಕಡಿಮೆಯಾಗಿದೆ. ಇವತ್ತು ಐ ಆರ್. ಡಿ. ಪಿ. ಒಂದನ್ನೇ ನೋಡಿದರೆ ಫಲಾನುಭವಿಗಳ ಸಂಖ್ಯೆ ಹೆಚ್ಚಾಗಿದೆ. ಹಣ ಖರ್ಚಾಗಿರುವುದನ್ನು ನೋಡಿದಾಗ ಫಲಾನುಭವಿಗಳ ಸಂಖ್ಯೆ ೩೦ ಪರ್ಸೆಂಟ್ ಇರಬೇಕಾದ ಜಾಗದಲ್ಲಿ ೨೪.೩ ಪರ್ಸೆಂಟ್ ಇದೆ. ಇದು ಹರಿಜನ ಗಿರಿಜನರಿಗೆ ಸಂಬಂಧಪಟ್ಟದ್ದಾದರೆ ಒಟ್ಟು ೬೮ ಪರ್ಸೆಂಟ್ ಫಲಾನುಭವಿಗಳು ಪಶು ಸಂಗೋಪನಾ ಕ್ಷೇತ್ರದಲ್ಲಿ ಪ್ರಯೋಜನಪಡೆದಿದ್ದಾರೆ. ಫಲಾನುಭವಿಗಳನ್ನು ಆಯ್ಕೆ ಮಾಡಿದಾಗ ಶೇಕಡ ೧೯.೬ರಷ್ಟು ಮಂದಿ ಬಡತನ ರೇಖೆಯಿಂದ ಮೇಲಿದ್ದರು. ಅರ್ಹರಲ್ಲದ ಜನರನ್ನು ಆರಿಸಿದ್ದಾರೆ. ಫಲಾನುಭವಿಗಳು ತೆಗೆದುಕೊಂಡ ಸಾಲವನ್ನು ಇದುವರೆಗೆ ಹಿಂದಿರುಗಿಸುವುದಕ್ಕೆ ಸಾಧ್ಯವಾಗಿಲ್ಲ. ಕಾರಣ ಸರಿಯಾದ ತಿಳುವಳಿಕೆ ಶಕ್ತಿ ಇಲ್ಲದೆ ಯೋಜನೆಯ ಲಾಭ ಪಡೆದು ಆರ್ಥಿಕ ಉನ್ನತಿಯನ್ನು ಮಾಡಿಕೊಳ್ಳುವುದು ಸಾಧ್ಯವಾಗಿಲ್ಲ. ಒಟ್ಟು ಜನರಲ್ಲಿ ಬಡತನ ರೇಖೆಯಿಂದ ಮೇಲೆದ್ದವರು ಶೇಕಡ ೨೮ ಮಾತ್ರ. ನಮ್ಮ ಗುರಿ ನೂರು ಜನ ಆಗಬೇಕೆಂದರೆ ೨೮ ಜನ ಮಾತ್ರ ಆಗಿದ್ದಾರೆ. ಐ. ಆರ್. ಡಿ ಪಿ. ಯಲ್ಲಿ ಅನೇಕರು ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆ. ಈ ಸಮೀಕ್ಷೆಯ ಪರಿಣಾಮವಾಗಿ ಯಾರಿಗೆ ಈ ಯೋಜನೆಯ ಲಾಭ ತಟ್ಟಬೇಕು ಅವರಿಗೆ ಸಂಪೂರ್ಣವಾಗಿ ತಟ್ಟಿಲ್ಲ ಅನಿಸುತ್ತದೆ. ಈ ಯೋಜನೆಯನ್ನು ಕಾರ್ಯಗತ ಮಾಡುವಾಗ, ಫಲಾನುಭವಿಗಳನ್ನು ಆಯ್ಕೆ ಮಾಡುವುದರಲ್ಲಿ ತಪ್ಪಿವೆ. ಆದರ ಜೊತೆಗೆ ಫಲಾನುಭವಿಗಳಿಗೆ ಯೋಗ್ಯ ಮಾರ್ಗದರ್ಶನ ನೀಡತಕ್ಕದ್ದು, ಅವರಿಗೆ ಈ ಯೋಜನೆಯಿಂದ ಕೊಟ್ಟಂಥ ಹಣ ಸಹಾಯದಿಂದ ತಮ್ಮ ಆದಾಯ ಹೆಚ್ಚು ಮಾಡಿಕೊಳ್ಳತಕ್ಕದ್ದರ ಬಗ್ಗೆ ತಿಳುವಳಿಕೆ ಕೊಡತಕ್ಕ ವಿಚಾರದಲ್ಲಿ ತಪ್ಪಿದೆ. ಇದು ಒಂದು ಉದಾಹರಣೆಯಾಗಿ ಕೊಡುತ್ತಿದ್ದೇನೆ. ಸಮೀಕ್ಷೆ ಮಾಡುವುದರಿಂದ ಈ ಯೋಜನೆಯ ಅನುಷ್ಠಾನ ದಲ್ಲಿರತಕ್ಕ ದೋಷಗಳನ್ನು ಕಂಡುಹಿಡಿಯಲಾಗಿದೆ. ಕಂಡುಹಿಡಿದಮೇಲೆ ಏನು ಮಾಡಿದ್ದೀರಿ ಎಂದು ಕೇಳಬಹುದು. ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮೀಕ್ಷೆ ಆದಮೇಲೆ ಇದನ್ನು ಸರಿಪಡಿಸತಕ್ಕ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೇವೆ. ಇದೇ ರೀತಿ ಬೇರೆ ಇಲಾಖೆಗಳಲ್ಲಿ ಅಧ್ಯಯನ ಮಾಡಿ ಈ ಯೋಜನೆಗಳು ಸರಿಯಾದ ರೀತಿಯಲ್ಲಿ ಗುರಿಯನ್ನು ಮುಟ್ಟತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಯೋಜನಾ ಇಲಾಖೆ ತನ್ನದೇ ಆದ ರೀತಿಯಲ್ಲಿ ನೀತಿಯನ್ನು ರೂಪಿಸಿದೆ. ಅದನ್ನು ಕಾರ್ಯಾಚರಣೆಗೆ ತರತಕ್ಕ ಭರವಸೆ ಕೊಡುತ್ತೇನೆ. ಐ. ಆರ್. ಡಿ. ಪಿ. ಒಂದರಲ್ಲೇ ರೀತಿ ಆಗಿದೆ. ಅದೇ ರೀತಿ, ನೀವು ಹೇಳಿದಹಾಗೆ ಬೇರೆ ಬೇರೆ ಇಲಾಖೆಗಳಲ್ಲೂ ಈ ರೀತಿ ಆಗಿದೆ, ಈ ಸಮೀಕ್ಷೆ ನಡೆದಿರುವುದು ೧೯೮೦ ರಿಂದ ೧೯೮೫ರವರೆಗೆ. ಈ ತಪ್ಪು ಹಿಂದಿನಿಂದ ನಡೆದುಕೊಂಡು ಬಂದಿದೆ ಎಲ್ಲಿ ತಪ್ಪಿದೆ, ಯಾರು ತಪ್ಪಿದ್ದಾರೆ, ಕಾರಣ ಏನು ಎಂಬುದನ್ನು ನೋಡಲು ಈ ಪರೀಕ್ಷೆಯಿಂದ ಕಂಡುಬಂದಂತಹ ವಿಚಾರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಕಾರ್ಯಕ್ರಮ ಜರುಗಿಸುತ್ತಿದ್ದೇವೆ. ಯೋಜನೆಗಳ ವಿಕೇಂದ್ರೀಕರಣದ ಬಗ್ಗೆ ಹಿಂದಿನ ಸಾರಿಯೇ ಹೇಳಿದ್ದೆ. ವಿಕೇಂದ್ರೀಕರಣದ ಬಗ್ಗೆ ನಾವು ಈಗಾಗಲೇ ಆಲೋಚಿಸಿದ್ದೇವೆ. ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಯೋಜನೆಗಳು ಸಿದ್ಧವಾಗಬೇಕು. ಯೋಜನೆಗಳು ಸಿದ್ಧವಾಗುವಾಗ ಜನತಾ ಪ್ರತಿನಿಧಿಗಳು ಮತ್ತು ಜನತೆಯ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬುದನ್ನು ಕೂಡ ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಇಲ್ಲಿ ಅವಶ್ಯಕ ಇರತಕ್ಕ ಸಿಬ್ಬಂದಿಯನ್ನು ಕೊಡಲಿಕ್ಕೆ ಆಲೋಚಿಸಿದ್ದೇವೆ. ಆ ವಿವರಗಳನ್ನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಜಿಲ್ಲೆಯಲ್ಲಿ ಒಬ್ಬರು ಮುಖ್ಯ ಅಧಿಕಾರಿ ಗಳು ಮತ್ತು ಅವರಿಗೆ ಬೇಕಾದ ಸಿಬ್ಬಂದಿ ವರ್ಗವನ್ನು ಮುಂದಿನ ವರ್ಷದಿಂದ ಕೊಡುತ್ತಿದ್ದೇವೆ. ಇಷ್ಟರಲ್ಲೇ ಜಿಲ್ಲಾ ಪರಿಷತ್ತಿನ ಚುನಾವಣೆಗಳು ನಡೆಯುತ್ತಿವೆ. ಅವು ಅಧಿಕಾರಕ್ಕೆ ಬಂದಮೇಲೆ ಚುನಾಯಿತ ಪ್ರತಿನಿಧಿಗಳು ಬರುತ್ತಾರೆ. ಯೋಜನೆ ಒಂದೇ ಅಲ್ಲ ಎಲ್ಲಾ ಹಂತಗಳಲ್ಲೂ ವಿಕೇಂದ್ರಿಕರಣ

ಮಾಡುವುದರ ಬಗ್ಗೆ ಯೋಜನಾ ಇಲಾಖೆ ಕಾರ್ಯಕ್ರಮವನ್ನು ಕೈಕೊಂಡಿದೆ. ನಮ್ಮ ಯೋಜನೆ ಯೋಜನೇತರ ಅನೇಕ ಕಾರ್ಯಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಡುವುದಾಗಿದೆ. ಹಣಕಾಸು ಕೂಡ ವರ್ಗಾವಣೆ ಆಗಿದೆ. ಈ ವರ್ಗಾವಣೆ ಬಗ್ಗೆ ಸೂಕ್ತ ಮುಂಜಾಗರೂಕತಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಸ್ವಲ್ಪದರಲ್ಲೇ ಹೇಳಬಯಸುತ್ತೇನೆ. ಇನ್ನು ಯೋಜನೆ ವಿಚಾರದಲ್ಲಿ ಹೆಚ್ಚು ವಿಚಾರಗಳನ್ನು, ಹೇಳಿದೆ ೨೦೦೧ ಇಸವಿಯವರೆಗೆ ಅಂದರೆ ಮುಂದಿನ ೧೫ ವರ್ಷಗಳಲ್ಲಿ ಮಾಡುವ ವಿಚಾರವನ್ನು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇಲಾಖೆ ಕ್ರಮ ತೆಗೆದುಕೊಂಡಿದೆ. ಒಂದು ವಿಚಾರವನ್ನು ಖರ್ಗೆಯವರು ಹೇಳಿದರು. ಅವರು ಹೇಳುವಾಗ ರೀಜನಲ್ ಇಂಬ್ಯಾಲೆನ್ಸ್ ಆಗಿದೆ ಎಂದು ಅಂಕಿ-ಸಂಖ್ಯೆಗಳನ್ನು ಆಧರಿಸಿ ಹೇಳಿದರು. ಮೇಜರ್, ಮೀಡಿಯಂ ಮತ್ತು ಮೈನರ್ ಇರಿಗೇಷನ್ ಹಾಗೂ ಸ್ಕೇರಿಸಿಟಿ ವಿಚಾರ ಕೂಡ ಹೇಳಿವರು. ಸ್ಕೇರಿಸಿಟಿ ಬಗ್ಗೆ ಆಮೇಲೆ ಉತ್ತರಿಸು ವಾಗ ಹೇಳುತ್ತೇನೆ. ಅಲ್ಲಿ ಹಣ ಖರ್ಚು ಮಾಡತಕ್ಕ ವಿಚಾರದಲ್ಲಿ ವಿವರ ಕೊಡುತ್ತೇನೆ. ಇಲ್ಲಿ ರೀಜನಲ್ ಇಂಬ್ಯಾಲೆನ್ಸ್ ಆಗಿದೆ ಎಂದು ಹೇಳಿದ್ದೀರಿ. ಈ ಬಗ್ಗೆ ತಮಗೆ ಕೆಲವು ವಿವರಗಳನ್ನು ಕೊಡ ಬಯಸುತ್ತೇನೆ. ಕೃಷ್ಣಾ ಮತ್ತು ಕಾವೇರಿ ಬೇಸಿನ್ ವಿಚಾರದಲ್ಲಿ ಹೇಳುವಾಗ ತಾವು ಇರಲಿಲ್ಲವೆಂದು ಕಾಣುತ್ತದೆ. ದುರ್ದೈವದಿಂದ, ಯಾರೇ ಅಧಿಕಾರದಲ್ಲಿರಬಹುದು—ಕೃಷ್ಣ ಮತ್ತು ಕಾವೇರಿ ಬೇಸಿನ್‌ಗೆ ಎಷ್ಟು ಆದ್ಯತೆ ಕೊಡಬೇಕಾಗಿತ್ತೋ, ಎಷ್ಟು ಹಣವನ್ನು ಒದಗಿಸಿಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ. ರಾಜ್ಯ ಪುನರ್ವಿಂಗಡನೆ ಆದಮೇಲೆ ನಾವು ನೋಡಿದಹಾಗೆ ಎಲ್ಲೋ ತಪ್ಪಿದ್ದಾರೆ. ಅದರ ಬಗ್ಗೆ ಯಾರನ್ನೂ ದೂಷಿಸುವುದಕ್ಕೆ ಹೋಗುವುದಿಲ್ಲ. ಆಗ ಬೇಕಾದುದು ಆಗಿಲ್ಲ. ಹಿಂದೆ ಆದುದನ್ನು ಮಾತನಾಡುತ್ತಾ ಕುಳಿತರೆ ಆಗುವುದಿಲ್ಲ. ಮುಂದಾದರೂ ಸರಿಯಾಗಬೇಕೆಂಬ ದೃಷ್ಟಿ ಯಿಂದ ಮೇಜರ್ ಮತ್ತು ಮೈನರ್ ಇರಿಗೇಷನ್ ವಿಚಾರದಲ್ಲಿ, ಕಾವೇರಿ ಬೇಸಿನ್ ಕೆಲಸವನ್ನು ಆದಷ್ಟು ಬೇಗ ಮುಕ್ತಾಯ ಮಾಡಬೇಕು. ತಮಗೆಲ್ಲ ಗೊತ್ತಿರುವ ಹಾಗೆ, ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಇರುವ ನೀರಿನ ವಿವಾದವನ್ನು ಗಮನದಲ್ಲಿಟ್ಟುಕೊಂಡಾಗ ಎಷ್ಟು ಬೇಗ ನಾವು ಕಾವೇರಿ ನದಿ ನೀರನ್ನು ಉಪಯೋಗಿಸುತ್ತೇವೆಯೋ ಅಷ್ಟೂ ನಮ್ಮ ರಾಜ್ಯಕ್ಕೇ ಲಾಭ. ನಮ್ಮ ನಮ್ಮ ಪಾಲಿಗೆ ಬಂದಂತಹ ಎಲ್ಲ ನೀರನ್ನು ೨೦೦೦ ಇಸ್ವಿ ಅಂತ್ಯದೊಳಗೆ ಉಪಯೋಗಿಸಬೇಕಾಗುತ್ತದೆ. ಈ ಎರಡು ನದಿಗಳು ರಾಜ್ಯದ ಜೀವನಾಳಗಳು. ಅವುಗಳ ಸಂಪೂರ್ಣ ನೀರನ್ನು ಉಪಯೋಗಿಸಬೇಕೆಂದರೆ ಕಾವೇರಿ ಬೇಸನ್ನಿಗೆ ೪೦೦ ಕೋಟಿ ರೂಪಾಯಿ ಮತ್ತು ಕೃಷ್ಣ ಬೇಸನ್ನಿಗೆ ೨೦೦೦ ಕೋಟಿ ರೂಪಾಯಿ ಬೇಕಾಗುತ್ತದೆ. ಈ ಹಣವನ್ನು ೨೦೦೦ ಇಸವಿಯ ಅಂತ್ಯದೊಳಗೆ ಖರ್ಚು ಮಾಡಬೇಕಾಗುತ್ತದೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಗೆ ಹಣ ಕೊಡತಕ್ಕ ವ್ಯವಸ್ಥೆ ಆಗಬೇಕಾಗಿದೆ.

ಈ ವರ್ಷ ನಾವು ಮೇಜರ್ ಮತ್ತು ಮೈನರ್ ಇರಿಗೇಷನ್‌ಗೆ ಒಟ್ಟು ೧೯೮೬–೮೭ರಲ್ಲಿ ಒದಗಿಸಿ ದಂಥ ಹಣ ೧೮೫.೪ ಕೋಟಿ ರೂಪಾಯಿಗಳು, ಇದು ಹಿಂದಿನ ಯಾವುದೇ ವರ್ಷಕ್ಕಿಂತ ಹೆಚ್ಚಾಗಿದೆ. ಅದರಲ್ಲಿ ಕೃಷ್ಣ ಬೇಸಿನ್ ಯೋಜನೆಗಳಿಗೆ ೧೧೪.೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕೃಷ್ಣ ಬೇಸಿನ್‌ಗೆ ಈಗ ಕೊಟ್ಟಷ್ಟು ಹಣ ಸಾಲದು, ಇನ್ನೂ ಹೆಚ್ಚು ಹಣವನ್ನು ಕೊಡದಿದ್ದರೆ ನಮ್ಮ ಹಕ್ಕಿಗೆ ಚ್ಯುತಿ ಬರುತ್ತದೆ. ಮಾನ್ಯ ಖರ್ಗೆಯವರಿಗೆ ಮತ್ತು ಈ ಸದನಕ್ಕೆ, ರಾಜ್ಯದ ಜನತೆಗೆ ಭರವಸೆ ಕೊಡುತ್ತಿದ್ದೇನೆ. ಮುಂದಿನ ವರ್ಷದಿಂದ ಈ ಏಳನೇ ಯೋಜನೆಯಲ್ಲಿ ಅಪ್ಪರ್ ಕೃಷ್ಣ ಒಂದಕ್ಕೆ ೪೦೦ ಕೋಟಿ ರೂಪಾಯಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಅಲ್ಲದೇ ಉಳಿದ ಕೃಷ್ಣ ಬೇಸಿನ್ ಯೋಜನೆಗಳಿಗೆ ಕೂಡ ಕನಿಷ್ಟ ಪಕ್ಷ ಪ್ರತಿ ವರ್ಷ ಈ ಅಪ್ಪರ್ ಕೃಷ್ಣ ಯೋಜನೆಯನ್ನು ಬಿಟ್ಟು ಹೆಚ್ಚು ಹಣ ಕೊಡತಕ್ಕಂಥದ್ದು ಕೂಡಾ ಈಗಾಗಲೇ ನಾವು ಈ ದಿಶೆಯಲ್ಲಿ ಆಲೋಚನೆ ಮಾಡಿದ್ದೇವೆ. ಬೇರೆ ಬೇರೆ ವಿಶ್ವ ಸಂಸ್ಥೆಗಳ ಜೊತೆಗೆ, ಕೇಂದ್ರ ಸಂಸ್ಥೆಗಳ ಜೊತೆಗೆ ಚರ್ಚೆ ಮಾಡುತ್ತಿದ್ದೇವೆ. ನನಗಂತೂ ತುಂಬಾ ಭರವಸೆ ಇದೆ ಬರುವ ವರ್ಷದಲ್ಲಿ ಈ ಯೋಜನೆಗಳಿಗೆ ಅವಶ್ಯಕತೆ ಇರತಕ್ಕಂಥ ಹಣವನ್ನು ಕೊಟ್ಟು ನಮ್ಮ ಹಕ್ಕಿನ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ.

ಇನ್ನು ಕೆಲವು ವಿಷಯಗಳನ್ನು ಹೇಳಿದ್ದಾರೆ. ಮೈನರ್ ಇರಿಗೇಷನ್ ಮತ್ತು ಬೇರೆ ಬೇರೆ ವಿಚಾರಗಳಲ್ಲಿ ರೀಜನಲ್ ಇಂಬ್ಯಾಲೆನ್ಸ್ ಆಗಿದೆ ಎಂಬ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಅವರಿಗೆ ಭರವಸೆಯನ್ನು ಕೊಡುತ್ತೇನೆ. ಇದರ ಬಗ್ಗೆ ಯೋಜನಾ ಇಲಾಖೆ ಒಂದು ಸಬ್ಜೆಕ್ಟನ್ನು ಸ್ಟಡಿ ಮಾಡು ತ್ತದೆ. ಅದು ಯಾವುದೇ ಇಲಾಖೆಯ ಕಾರ್ಯಕ್ರಮ ಇರಲಿ, ಅದನ್ನು ಅಧ್ಯಯನ ಮಾಡಿ ಈ ಸದನ

ಮುಂದೆ ಸಭೆ ಸೇರಿದಾಗ ಆ ವರದಿಯನ್ನು ನಾನು ಒದಗಿಸಿಕೊಡುತ್ತೇನೆ. ಒಂದೊಂದು ಸಲ ಶ್ರೀ ಮಾನ್ ಖರ್ಗೆಯವರು ಮತ್ತು ಮೊಯಿಲಿಯವರು ಹೇಳತಕ್ಕಂಥದ್ದರಲ್ಲಿ ಸತ್ಯಾಂಶ ಇದೆ ಎನ್ನುವ ಮನವರಿಕೆ ಆದರೂ ಕೂಡ ಅದರ ಅಧ್ಯಯನ ಮಾಡುವುದು ಅವಶ್ಯಕತೆ ಇದೆ.

(ಉಪಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಂಥದ್ದು ಏನಾದರೂ ಇದ್ದರೆ ಅವನ್ನು ಸರಿಪಡಿಸತಕ್ಕಂಥ, ಕಾರ್ಯಕ್ರಮ ಮಾಡತಕ್ಕಂಥ ಭರವಸೆಯನ್ನು ಕೊಡುತ್ತೇನೆ. ಹೈದರಾಬಾದ್ ಕರ್ನಾಟಕದ ವಿಚಾರವಾಗಿ ನಾನು ಸುಮಾರು ಹತ್ತು ತಿಂಗಳ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ಮತ್ತು ಯೋಜನಾ ಆಯೋಗಕ್ಕೆ ಒಂದು ಪತ್ರವನ್ನು ಬರೆದಿದ್ದೇನೆ. ಹೈದರಾಬಾದ್, ಕರ್ನಾಟಕದ ಬಗ್ಗೆ ಬೋರ್ಡ್ ಮಾಡಿದರೆ ಅಥವಾ ಯಾವುದೇ ಒಂದು ಹೆಸರಿನಲ್ಲಿ ಡೆವಲಪ್‌ಮೆಂಟ್ ಅಥಾರಿಟಿ ಮಾಡಿದರೆ ಸಾಲದೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಒಂದು ವಿಶೇಷವಾದಂಥ ಬೋರ್ಡನ್ನು ಮಾಡಿದರೆ ಅದರ ಜೊತೆಗೆ ಹಣಕಾಸನ್ನು ಕೊಡತಕ್ಕಂಥ ಒಂದು ವ್ಯವಸ್ಥೆ ಮಾಡಿದೆವು. ಕೇಂದ್ರ ಸರ್ಕಾರ ೫೦ ಪರ್‌ಸೆಂಟ್. ರಾಜ್ಯ ಸರ್ಕಾರ ೫೦ ಪರ್‌ಸೆಂಟ್ ವಿಶೇಷವಾದಂಥ ವಂತಿಗೆಯನ್ನು ಕೊಡತಕ್ಕಂಥ ಒಂದು ವ್ಯವಸ್ಥೆ ಇತ್ತು. ಅದೇ ರೀತಿ ವೆಸ್ಟ್ ಬೆಂಗಾಲ್‌ನಲ್ಲೂ ಕೂಡ ಆಗಿದೆ. ನಾವು ಈ ಹಿಂದುಳಿದ ಭಾಗವನ್ನು ಉಳಿದ ಭಾಗಗಳ ಮಟ್ಟಿಗೆ ತರಬೇಕಾದರೆ ಒಂದು ವಿಶೇಷವಾದಂಥ ಕಾರ್ಯಕ್ರಮ ಬೇಕಾಗುತ್ತದೆ, ಅದಕ್ಕೆ ಸಾಕಷ್ಟು ಹಣಕಾಸಿನ ಒಂದು ವ್ಯವಸ್ಥೆಯಾಗಬೇಕಾಗುತ್ತದೆ, ಇನ್ನು ಯೋಜನಾ ಆಯೋಗದಿಂದ ಉತ್ತರ ಬಂದಿದೆ. ಅದು ಪರಿಶೀಲನೆಯಲ್ಲಿದೆ. ಆದಷ್ಟು ಬೇಗ ಅದರ ಬಗ್ಗೆ ಯೋಜನಾ ಆಯೋಗ ಒಪ್ಪಬಹುದು ಎಂದು ನಂಬಿದ್ದೇನೆ. ತಾವೂ ಕೂಡ ಈ ದಿಸೆಯಲ್ಲಿ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ರೀಜನಲ್ ಇಂಬ್ಯಾಲೆನ್ಸ್ ಕಡಿಮೆ ಮಾಡಬೇಕಾಗಿದೆ. ನಮ್ಮ ವಿಚಾರ ರೀಜನಲ್ ಪ್ಲಾನಿಂಗ್ ಮಾಡಬೇಕಾಗಿದೆ. ಆದರೆ ಹಿಂದುಳಿದ ಪ್ರದೇಶಗಳಿಗೆ ಅಲ್ಲಿಗೆ ಯಾವ ರೀತಿಯಿಂದ ಹಣ ಕೊಡಬಹುದು. ರಾಜ್ಯದಲ್ಲಿ ಸಮಗ್ರ ಯೋಜನೆ ಮಾಡುವಾಗ Regional Planning also will go a long way to help to reduce this imbalance if any...

ಇನ್ನು ಈ ವಿಚಾರದಲ್ಲಿ ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ರೀಜನಲ್ ಇಂಬ್ಯಾಲೆನ್ಸ್ ಕಡಿಮೆಯಾಗತಕ್ಕಂಥ ಒಂದ ವಿಚಾರದಲ್ಲಿ ಅಲ್ಲದೆ ಡಿಸೆಂಟ್ರಲೈಜೇಷನ್ ವಿಚಾರದಲ್ಲಿ ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ಯೋಜನೆಗೆ ನಾವು ಖರ್ಚು ಮಾಡತಕ್ಕಂಥ ಹಣ ಏನು ಇದೆ. ಎನ್.ಆರ್.ಇ.ಪಿ, ಆರ್.ಎಲ್.ಇ.ಜಿ.ಪಿ. ಮತ್ತು ಡಿ.ಪಿ.ಎ.ಪಿ. ಈ ಹಣವನ್ನು ನಾವು ಇಲ್ಲಿ ಇಲಾಖೆಯ ಮುಖ್ಯಸ್ಥರಿಗೆ ಬಿಡುಗಡೆ ಮಾಡಬೇಕು. ಅವರು ತಮ್ಮ ತಮ್ಮ ಇಲಾಖೆಗೆ ಹಂಚುತ್ತಿದ್ದರು, ಎಲ್ಲಾ ಹಣವನ್ನು ಬಿಡುಗಡೆ ಮಾಡತಕ್ಕಂಥ ಅಧಿಕಾರವನ್ನು ಡೆಪ್ಯುಟಿ ಕಮಿಷನರ್‌ರಿಗೆ ಕೊಟ್ಟಿದ್ದೇವೆ. ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ., ಡಿ.ಪಿ.ಎ.ಪಿ. ಆ ಜಿಲ್ಲೆಯ ಹಣ ಇವತ್ತು ಎಲ್ಲವೂ ಕೊಡತಕ್ಕಂಥ ಅಧಿಕಾರ ಕಳೆದ ಮೂರು ತಿಂಗಳಿಂದ ಪ್ರಾರಂಭ ಮಾಡಿದ್ದೇವೆ. ಆ ಹಣವನ್ನು ಜಿಲ್ಲಾಧಿಕಾರಿಯವರಿಗೆ ಕೊಡುತ್ತೇವೆ. ಅವರು ಬೇರೆ ಬೇರೆ ಇಲಾಖೆಗೆ ಕೊಡತಕ್ಕಂಥ ಒಂದು ವ್ಯವಸ್ಥೆ ಮಾಡಿದ್ದಾರೆ. ಅದೇ ರೀತಿ ವಿಕೇಂದ್ರೀಕರಣ ಮಾಡತಕ್ಕಂಥ ಒಂದು ಪ್ರಯತ್ನವನ್ನು ಇಲ್ಲಿ ಮಾಡುತ್ತೇವೆ, ಇನ್ನೊಂದು ವಿಚಾರವನ್ನು ಇಲ್ಲಿ ಹೇಳುವುದು ಅವಶ್ಯ, ಅದು ಕ್ರಾಪ್ ಇನ್‌ಸೂರೆನ್ಸ್ ಬಗ್ಗೆ ಇಲ್ಲಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ ಈಗ ಈ ಕ್ರಾಪ್ ಇನ್‌ಸೂರೆನ್ಸ್ ಕೆಲವು ಬೆಳೆಗಳಿಗೆ ನಾವು ಜಾರಿಮಾಡಿದ್ದೇವೆ. ನಾವು ಈಗ ಇರತಕ್ಕಂಥ ನಿಯಮಗಳಿಂದ ರೈತನಿಗೆ ಅದರ ಲಾಭ ಬರುವುದಿಲ್ಲ. ಪ್ರೀಮಿಯಮ್ ಕಟ್ಟತಕ್ಕಂಥ ನಿಯಮಗಳಿಂದ ರೈತನಿಗೆ ಅದರ ಲಾಭ ಬರುವುದಿಲ್ಲ ಪ್ರೀಮಿಯಮ್ ಕಟ್ಟತಕ್ಕಂಥದ್ದು ಕಡ್ಡಾಯವಾಗಿ ಮಾಡಿದ್ದಾರೆ. ಆದರೆ ಈಗ ಇರತಕ್ಕಂಥ ನಿಯಮಗಳ ಪ್ರಕಾರ ತಾಲ್ಲೂಕಿನ ಒಂದು ಬೆಳೆಯನ್ನು ಸರಾಸರಿಯಾಗಿ ತೆಗೆದುಕೊಳ್ಳತಕ್ಕಂಥ ಪದ್ಧತಿ ಇವೆ. ಇದರಿಂದ ನನ್ನ ಮಟ್ಟಿಗೆ ತಿಳಿದ ಹಾಗೆ ಯಾವ ರೈತನಿಗೂ ಲಾಭ ಸಿಕ್ಕಿಲ್ಲ. ಆದರೆ ಈ ವರ್ಷ ಭೀಕರ ಬರಗಾಲ ಇದೆ. ರಾಬಿಬೆಳೆಯ ಬಗ್ಗೆ ಸರ್ಕಾರಕ್ಕೆ ಈಗ ವಿವರಗಳು ಕೂಡಾ ಬರುತ್ತಿವೆ. ನಾವು ಈಗಾಗಲೇ ಸಲಹೆ ಮಾಡಿದ್ದೇವೆ. ಈಗಾಗಲೇ ಆವರೇಜ್ ಈಲ್ಡ್ ನೋಟಿಫಿಕೇಷನ್ ಏನು ಇದೆ. ಅದು ತಾಲ್ಲೂಕು ಮಟ್ಟದಲ್ಲಿ

ಹೋಬಳಿಯಲ್ಲಿ ಆಗಬೇಕು. ಹೋಬಳಿಯಲ್ಲಿ ಆದರೆ ಸರ್ವೆಸಾಧಾರಣವಾಗಿ ಸ್ವಲ್ಪ ಅನುಕೂಲವಾಗ ಬಹುದು. ಅದರ ಜೊತೆಗೆ ೮೦ರಷ್ಟು ಬೆಳೆಯನ್ನು ಗಣನೆಗೆ ತೆಗೆದುಕೊಂಡು ೫ ವರ್ಷದಲ್ಲಿ ಸೆಂಟ್ ಪರ್‌ಸೆಂಟ್ ತೆಗೆದುಕೊಳ್ಳಲಿಕ್ಕೆ ಕೂಡ ನಾವು ಈಗಾಗಲೇ ಸಲಹೆ ಕೊಟ್ಟಿದ್ದೇವೆ. ನಾನು ಈ ಮನೆಯ ಮುಖಾಂತರ ರಾಜ್ಯದ ರೈತ ಭಾಂದವರಲ್ಲಿ ಕೇಳಿಕೊಳ್ಳುತ್ತೇನೆ. ಈ ಖರೀಫ್ ವಿಚಾರದಲ್ಲಿ ಈಗಾಗಲೇ ರೆವಿಷನ್, ಸಸ್ಪೆನ್ಸನ್, ನೋಟೀಫಿಕೇಷನ್ ಮಾಡಿದ್ದೇವೆ. ರಾಬಿ ಬಗ್ಗೆ ಈ ತಿಂಗಳ ೨೫ರೊಳಗೆ ನೋಟೀಫಿಕೇಷನ್ ಮಾಡುತ್ತೇವೆ ಮತ್ತು ಆದಷ್ಟು ಬೇಗ ಈ ಇನ್‌ಸೂರೆನ್ಸ್ ಕಂಪನಿಗಳಿಗೆ ತಮ್ಮ ಬೇಡಿಕೆಗಳನ್ನು ಮಂಡಿಸಬೇಕು ಮತ್ತು ಈ ಯೋಜನೆಯ ಲಾಭವನ್ನು ಗೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಯೋಜನಾ ಇಲಾಖೆಯ ಬಗ್ಗೆ ಹೆಚ್ಚು ವಿಚಾರಗಳನ್ನು ನಾನು ಹೇಳಲಿಕ್ಕೆ ಬಯಸಿದರೂ ಕೂಡ ಸಮಯದ ಅಭಾವ ಇರುವುದರಿಂದ ಒಂದೇ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ಇವತ್ತು ರಾಜ್ಯದ ಯೋಜನೆಯಲ್ಲಿ ನಾವು ಎಷ್ಟು ಅಭಿವೃದ್ಧಿ ಕಾರ್ಯಗಳನ್ನು ಬಯಸುತ್ತೇವೆ ಅಷ್ಟು ಆಗದೇ ಇದ್ದರೂ ಕೂಡ ಹಿಂದಿನದಕ್ಕಿಂತ ಕಡಿಮೆಯಾಗಿಲ್ಲ. ಅಭಿವೃದ್ಧಿಯ ವೇಗವನ್ನು ಕಾಯ್ದುಕೊಂಡು ಬಂದಿದ್ದೇವೆ. ರಾಜ್ಯದಲ್ಲಿ ಅನೇಕ ಸಮಸ್ಯೆಗಳೂ ಇದ್ದರೂ ಕೂಡ ಅದು ಬರಗಾಲದ ಸಮಸ್ಯೆ ಇರಬಹುದು. ಬೇರೆ ಬೇರೆ ಸಮಸ್ಯೆಗಳು ಇರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ— ಅಭಿವೃದ್ಧಿಯ ಕಾರ್ಯದಲ್ಲಿ ಮುಂದೆ ಹೋಗಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ— ಹೆಚ್ಚಾಗಿದೆ, ವೇಗ ಕಾಯ್ದುಕೊಂಡು ಬಂದಿದ್ದೇವೆ. ವೇಗವನ್ನು ಹೆಚ್ಚು ಮಾಡಿದ್ದೇವೆ. ಫಿಸಿಕಲ್ ಅಚೀವ್‌ಮೆಂಟ್ ಕೂಡ ತಮಗೆ ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ— ಸ್ವಾಮಿ

ಉಪಾಧ್ಯಕ್ಷರು — ನೀವು ಈಗ ಬಂದಿದ್ದೀರಿ. ಅವರು ಏನು ಹೇಳಿದ್ದಾರೆ ಎಂಬುದನ್ನು ಕೇಳಲಿಲ್ಲ. ಆಗಲೇ ಶುರು ಮಾಡಿದರಲ್ಲ.

ಶ್ರೀ ಬಿ. ಬಸವಲಿಂಗಪ್ಪ— ಮನಸ್ಸು ಕೊಟ್ಟು ನೋಡಿ ಹೇಳಿದರೆ ಉತ್ತರ ಚೆನ್ನಾಗಿರುತ್ತದೆ. ಹುಬ್ಬಳ್ಳಿ ಅವರ ವಾಸ ಸ್ಥಳ ಹೆಡ್‌ಕ್ವಾರ್ಟಸ್ ಅವರದು ಹುಬ್ಬಳ್ಳಿ, ಬೆಂಗಳೂರಲ್ಲ. ಅಲ್ಲಿ ಅವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿದೆ. ಅವರು ಅಲ್ಲಿ ಏನು ಹೇಳಿದ್ದಾರೆಂದರೆ ಕೇಂದ್ರ ಸರ್ಕಾರದವರು ಬರಗಾಲಕ್ಕೆ ಹಣ ಕೊಡದೇ ಹೋದರೆ ೧೦೦ ಕೋಟಿ ರೂಪಾಯಿಗಳನ್ನು ಪ್ಲಾನ್‌ನಲ್ಲಿ ಏನು ಖರ್ಚಿಗೋಸ್ಕರ ಇಟ್ಟಿದ್ದೇವೆ. ಅದನ್ನು ಡೈವರ್ಟ್ ಮಾಡಿ ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಉತ್ತರ ಹೇಳಬೇಕು ಅಷ್ಟೆ.

ಶ್ರೀ ಎಸ್. ಆರ್. ಬೊಮ್ಮಾಯಿ— ಅದು ೧೦೦ ಕೋಟಿ ಅಲ್ಲ. ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ನಿಂದ ೧೨ ಕೋಟಿ ಮತ್ತು ಮೈನರ್ ಇರಿಗೇಷನ್‌ನಿಂದ ೫೫. ಕೋಟಿ. ಅದರ ಬಗ್ಗೆ ನಾನು ಹಿಂದೆ ಹೇಳಿಕೆ ಕೊಟ್ಟಿದ್ದೇನೆ. ಯೋಜನೆಗಳ ಹಣವನ್ನು ಜನರ ಕೆಲಸಕ್ಕಾಗಿ ಉಪಯೋಗ ಮಾಡಿದ್ದೇವೆಂದು ಹೇಳಿದ್ದೇನೆ, ವಿವರ ಕೊಟ್ಟಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ— ಕಾರಣ ಇಷ್ಟೆ. ಯೋಜನೆಗೆ ಸೀಮಿತವಾದ ಹಣವನ್ನು ಬೇರೆ ಕೆಲಸ ಕಾರ್ಯಗಳಿಗೆ ಖರ್ಚು ಮಾಡಿದರೆ ಕೇಂದ್ರ ಸರ್ಕಾರದವರು ಏನು ಹಣ ಕೊಡುತ್ತಿದ್ದಾರೆ ಅದರಲ್ಲಿ ಮುರಿದುಕೊಳ್ಳುತ್ತೇವೆಂದು ಕೇಂದ್ರದ ಹಣಕಾಸಿನ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ–– ಬೇರೆ ಕಡೆಗೆ ಉಪಯೋಗಿಸಿಲ್ಲ. ಮಲಪ್ರಭ ಯೋಜನೆಯಲ್ಲಿರತಕ್ಕ ಹಣವನ್ನು ಯಾವ ಕೆಲಸ ಕಾರ್ಯಕ್ಕೆ ಕೊಟ್ಟಿರುತ್ತಾರೋ ಅದಕ್ಕೇ ಖರ್ಚು ಮಾಡಿದ್ದೇವೆ. ಉದಾಹರಣೆಗೆ ಕಾಲುವೆ ಮಾಡುತ್ತಿದ್ದೇವೆ. ಮಲಪ್ರಭದಲ್ಲಿ, ಅಪ್ಪರ್ ಕೃಷ್ಣದಲ್ಲಿ, ಹೇಮಾವತಿಯಲ್ಲಿ ಅದನ್ನು ಮಾಡುತ್ತಿದ್ದೇವೆ. ಆ ಯೋಜನೆಯ ಹಣವನ್ನು ಅಲ್ಲಿಯ ಕೆಲಸಕ್ಕೆ ಖರ್ಚು ಮಾಡುತ್ತಿದ್ದೇವೆ. ಅದು ಡೈವರ್ಷನ್ ಅಲ್ಲ.

ಉಪಾಧ್ಯಕ್ಷರು–– ಅಡ್ವಾನ್ಸಾಗಿ ಖರ್ಚು ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ–– ತೋರಿಸುವುದು ಬರಗಾಲದಲ್ಲಿ.

ಶ್ರೀ ಎಸ್. ಆರ್. ಬೊಮ್ಮಾಯಿ-- ಮೀಡಿಯಂ ಮತ್ತು ಮೈನರ್ ಇರಿಗೇಷನ್‌ಗೆ ಮಾತ್ರ ೫.೫ ಕೋಟಿಗಿಂತ ಹೆಚ್ಚು ಕೊಟ್ಟಿದ್ದೇವೆ. ವಿವರಗಳನ್ನು ಈ ಮನೆಯಲ್ಲಿ ಕೊಟ್ಟಿದ್ದೇನೆ. ಈ ಯೋಜನಾ ಇಲಾಖೆ ಬಹಳ ಸಮರ್ಥವಾಗಿ ಕಾರ್ಯ ಮಾಡಿದೆ ಎಂದು ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಬಹುತೇಕ ಸದನದ ಎಲ್ಲ ಸದಸ್ಯರೂ ನನ್ನ ಮಾತಿಗೆ ಒಪ್ಪಿಗೆ ಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ನಮ್ಮ ಯೋಜನಾ ಇಲಾಖೆಯಲ್ಲಿರತಕ್ಕ ಹಿರಿಯ ಮತ್ತು ಕಿರಿಯ ಅಧಿಕಾರಿಗಳೇನಿದ್ದಾರೆ ಅವರು ಬಹಳ ನಿಷ್ಠೆಯಿಂದ...

ಶ್ರೀ ಎಂ. ವೀರಪ್ಪ ಮೊಯಿಲಿ-- ಸ್ವಾತಂತ್ರ್ಯ ಕೊಟ್ಟರೆ ತಾನೆ. ಥಿಂಕ್ ಟ್ಯಾಂಕ್ ಏನಾಯಿತು?

ಶ್ರೀ ಎಸ್. ಆರ್. ಬೊಮ್ಮಾಯಿ-- ಸ್ವಾತಂತ್ರ್ಯ ಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ-- ಅವರಿಗೆ ಸ್ವಾತಂತ್ರ್ಯ ಕೊಟ್ಟರೆ ಚೆನ್ನಾಗಿ ಕೆಲಸ ಮಾಡುತ್ತಾರೆ. ಥಿಂಕ್ ಟ್ಯಾಂಕ್, ಮತ್ತೊಂದು ಮಾಡಿ you have totally diluted that Planning Department with an authority which it should have. It was one of our best departments, but you have totally destroyed it.

ಶ್ರೀ ಎಸ್. ಆರ್. ಬೊಮ್ಮಾಯಿ-- ಮೊಯಿಲಿಯವರಿಗೆ ಭರವಸೆ ಕೊಡುತ್ತಿದ್ದೇನೆ, ಸಂಪೂರ್ಣವಾದ ಸ್ವಾತಂತ್ರ್ಯ ಯೋಜನೆ ಇಲಾಖೆಗಿದೆ, ಸಂಪೂರ್ಣವಾದ ಸ್ವಾತಂತ್ರ್ಯವನ್ನು ಅವರಿಗೆ ಕೊಟ್ಟಿದ್ದೇವೆ. ಒಂದು ಮಾತನ್ನು ನಾನು ಹೇಳುತ್ತೇನೆ. ಆ ಸ್ವಾತಂತ್ರ್ಯ ಮೊಟಕಾಗುತ್ತದೆಂದರೆ, ಮತ್ತು ಸ್ವಾತಂತ್ರ್ಯಕ್ಕೆ ಅಡ್ಡಿ ಬರುತ್ತದೆ ಎನ್ನುವುದಾದರೆ ನಾನೇ ಈ ಯೋಜನಾ ಮಂತ್ರಿಯಾಗಿರುವುದಿಲ್ಲ. ಅಷ್ಟು ಎಚ್ಚರಿಕೆ ವಹಿಸುತ್ತೇನೆ.

SRI, M. VEERAPPA MOILY— Don:t allow all departments to become empires for themselves. That is what is happening now. The reason for all these malady is the trtal destruction of your planning department, The planhing department should control the balance. But each department has become an empire by itself, an island by itself. I am making this charge with all responsibility at my command, not mixing any politics. There should be coordina tion and harmony among all ths departments. You kindly go back and thirk for yourself and act in the interrst of the State.

ಶ್ರೀ ಎಸ್. ಆರ್. ಬೊಮ್ಮಾಯಿ-- ನಾನು ಮೊಯಿಲಿಯವರಿಗೆ ಭರವಸೆ ಕೊಡುತ್ತಿದ್ದೇನೆ. ಈ ಇಲಾಖೆಯ ಸ್ವಾತಂತ್ರ್ಯ ಮೊಟಕಾಗಿಲ್ಲ. ಅದು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದೆ. ಉಚ್ಚ ಮಟ್ಟದಲ್ಲಿ ಕಾರ್ಯ ಮಾಡಿದೆ. ಅದಕ್ಕೆ ಅವಕಾಶ, ಮಾಡಿಕೊಡುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಮಗೆ ಅಷ್ಟು ಅಷ್ಯೂರೆನ್ಸ್ ಬೇಕು. ತಾವು ಹೇಳಿದ್ದೀರಿ, ಸಂತೋಷ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕ್ಷಮಿಸಬೇಕು, ನಾನು ಯೋಜನಾ ಇಲಾಖೆ ಬಗ್ಗೆ ಹೆಚ್ಚಿನ ವಿವರಗಳನ್ನು ನಿಮಗೆ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಹೋದಸಲ ನಾನು ಒಂದು ಮಾತು ಹೇಳಿದ್ದೆ. ಪ್ರೀ ಬಜೆಟ್ ಸ್ಕ್ರೂಟಿನಿ ಬಗ್ಗೆ ಹೇಳಿದ್ದೆ. ಅದನ್ನು ಈ ಸಲ ಹೆಚ್ಚಿನ ರೀತಿಯಲ್ಲಿ ಮಾಡುವುದಕ್ಕೆ ಆಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಷ್ಟು ಇಲಾಖೆಗೆ ಮಾಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಗೊತ್ತಿದ್ದಮಟ್ಟಿಗೆ ಪ್ಲಾನಿಂಗ್‌ನಲ್ಲಿ ಸ್ವಲ್ಪ ತಡೆಯಾಗಿದ್ದರಿಂದ ನ ಮಾಡುವುದಕ್ಕಾಗಲಿಲ್ಲ. ಮುಂದಿನ ಸಾರಿ ಕಂಪಲ್ಸರಿಯಾಗಿ ಮಾಡುತ್ತೇವೆ. ಮಾನ್ಯ ಸಭಾಧ್ಯಕ್ಷರೆ, ಕಂದಾಯ ಇಲಾಖೆ ಬಗ್ಗೆ ಕೆಲವು ವಿಚಾರಗಳನ್ನು ಪ್ರಾರಂಭದಲ್ಲಿ ಹೇಳಬಯಸುತ್ತಿದ್ದೇನೆ.

ಮೊಟ್ಟಮೊದಲಿಗೆ ಲ್ಯಾಂಡ್‌ರಿಫಾರ್ಮ್ಸ್ ಬಗ್ಗೆ ಮಾನ್ಯ ಖರ್ಗೆಯವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಹೋದ ಸಲ ನಾನು ಇದರ ಬಗ್ಗೆ ಹೇಳಿದ್ದೆ. ಅನೇಕ ಕೇಸ್‌ಗಳು ಹೈಕೋರ್ಟಿನಿಂದ ಮರಳಿ ಟ್ರಿಬ್ಯೂನಲ್‌ಗೆ ಹೋಗುತ್ತದೆ ಎಂಬ ವಿಚಾರದಲ್ಲಿ ತಿದ್ದುಪಡಿ ಮಾಡಿ ಜಿಲ್ಲಾಮಟ್ಟದಲ್ಲೇ ಟ್ರಿಬ್ಯೂನಲ್‌ಗಳನ್ನು ಮಾಡತಕ್ಕ ವಿಚಾರ ಹೇಳಿದ್ದೆ. ಆ ಬಗ್ಗೆ ಸರ್ಕಾರ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಅದನ್ನು ಜಾರಿಗೆ ಕೊಟ್ಟಿದೆ. ಸ್ವಲ್ಪ ದಿವಸದಲ್ಲಿ ಟ್ರಿಬ್ಯೂನಲ್‌ಗಳು ಜಿಲ್ಲಾ ಮಟ್ಟದಲ್ಲೇ ತಮ್ಮ ಕಾರ್ಯವನ್ನು ಪ್ರಾರಂಭ ಮಾಡುತ್ತದೆ. ಅನೇಕ ವರ್ಷಗಳಿಂದ ಭೂಮಿಯನ್ನು ಕಳೆದು ಕೊಂಡಿದ್ದ ಭೂ ಒಡೆಯನಿಗೆ ಹಣ ದೊರೆಯದೆ ತೊಂದರೆಗೆ ಈಡಾಗಿದ್ದ. ಈ ವಿಚಾರದಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದು. ೧೦ ವರ್ಷದ ಹಿಂದೆ ನಾವು ಏನು ಕಾಂಪೆನ್‌ಸೇಷನ್ ಫಿಕ್ಸ್ ಮಾಡಿದ್ದೇವೆ ಅದರ ಬೆಲೆ ಹೆಚ್ಚಾಗಿ, ಅಂದರೆ ರೂಪಾಯಿ ಬೆಲೆ ಕಡಿಮೆಯಾಗಿರುವುದರಿಂದ ಭೂ ಒಡೆಯನಿಗೆ ಆದಷ್ಟು ಜಾಗ್ರತೆ ಹಣ ಕೊಡಬೇಕೆಂಬ ದೃಷ್ಟಿಯಿಂದ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡತಕ್ಕ ಕಾನೂನನ್ನು ಪಾಸ್ ಮಾಡಿದ್ದೇವೆ. ಅದಕ್ಕೆ ಅಧ್ಯಕ್ಷರ ಸಮ್ಮತಿ ಸಿಕ್ಕಿದೆ. ಅದರ ಜೊತೆಗೆ ಹಣ ಕೊಡುವುದಕ್ಕೆ ಕೂಡ ವ್ಯವಸ್ಥೆ ಮಾಡಿದ್ದೇವೆ. ಆ ತಿದ್ದುಪಡಿ ಪ್ರಕಾರ ಪ್ರತಿಯೊಬ್ಬರಿಗೂ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡುತ್ತೇವೆ. ಬಡ್ಡಿಗೆ ಕೂಡ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡುತ್ತೇವೆ. ನಾನು ಒಂದು ಮನವಿ ಮಾಡಿಕೊಳ್ಳುತ್ತೇನೆ, ಭೂ ಒಡೆಯರು ಯಾರು ಎಲ್ಲೇ ಇರಲಿ, ಅವರು ಕರ್ನಾಟಕದಲಿರಲ್ಲಿ ಅಥವಾ ಕರ್ನಾಟಕದ ಹೊರಗಡೆ ಇರಲಿ ಕೂಡಲೇ ತಮ್ಮ ತಮ್ಮ ತಾಲೂಕಿನ ಅಧಿಕಾರಿಗಳನ್ನು ಸಂಪರ್ಕಿಸಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಕ್ಯಾಷ್ ಪೇಮೆಂಟನ್ನು ಚೆಕ್ ಮೂಲಕ ಕೊಡುವುದಕ್ಕೆ ನಿರ್ಣಯ ಮಾಡಿದರೆ ಅವರ ಅಡ್ರೆಸ್‌ಗೆ ಚೆಕ್ ಕಳುಹಿಸಿದರೆ ಅದು ವಾಪಸ್ ಬರುತ್ತಿದೆ. ಸಾವಿರಾರು ಚೆಕ್‌ಗಳು ವಾಪಸ್ ಬಂದಿವೆ. ಅಡ್ರೆಸ್ ಸಿಗುತ್ತಿಲ್ಲ. ಹೀಗಾಗಿ ತೊಂದರೆಯಾಗಿದೆ. ಪತ್ರಿಕೆಯಲ್ಲಿ ಜಾಹಿರಾತು ಕೊಟ್ಟರೂ ಬರುತ್ತಿಲ್ಲ. ನಮ್ಮ ಪತ್ರಿಕಾ ಪ್ರತಿನಿಧಿಗಳಿಗೆ ಕೇಳಿಕೊಳ್ಳುತ್ತಿದ್ದೇನೆ, ಇದಕ್ಕೆ ಸ್ವಲ್ಪ ಪ್ರಚಾರ ಚೆನ್ನಾಗಿ ಕೊಡಬೇಕು. ಭೂ ಒಡೆಯರು ಎಲ್ಲೇ ಇರಲಿ ಬೇಗನೆ ಸಂಪರ್ಕ ಮಾಡಿದರೆ ಅವರಿಗೆ ಕೊಡತಕ್ಕ ಪರಿಹಾರ ಧನ ಏನಿದೆ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಮೂಲಕ ಎಲ್ಲರಿಗೂ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಕೂಡಲೇ ಅಧಿಕಾರಿಗಳನ್ನು ಸಂಪರ್ಕ ಮಾಡಿ ಅದರ ಪ್ರಯೋಜನವನ್ನು ಪಡೆಯಬೇಕೆಂದು ಹೇಳುತ್ತಿದ್ದೇನೆ. ಇದೇರೀತಿ ಪ್ರೀಮಿಯಂ ೧೦ ಎಕರೆಗಿಂತ ಕಡಿಮೆ ಇರತಕ್ಕ ವಿಚಾರದಲ್ಲಿ ಕಾನೂನು ತಿದ್ದುಪಡಿ ಮಾಡಿ ಜಾರಿಗೆ ಕೊಟ್ಟಿದ್ದೇವೆ. ಸರ್ಪ್‌ಲಸ್ ಲ್ಯಾಂಡ್ ವಿಚಾರವಾಗಿ ಮಾನ್ಯ ಖರ್ಗೆಯವರು ಕೆಲವು ಸಮಸ್ಯೆಗಳನ್ನು ವ್ಯಕ್ತಮಾಡಿದರು. ೧೯೮೨ರಲ್ಲಿ ಒಟ್ಟು ಗುರುತಿಸಿದ್ದು ೨,೯೭,೭೮೮ ಎಕರೆಗಳು. ಇದರಲ್ಲಿ ಡಿಸ್ಟ್ರಿಬ್ಯೂಟ್ ಮಾಡಿದ್ದು ೧,೦೧,೪೪೮ ಎಕರೆಗಳು. ೧೯೮೩ರಲ್ಲಿ ೪ ಸಾವಿರ ಎಕರೆ, ೧೯೮೪ರಲ್ಲಿ ೬೦೭೩ ಎಕರೆ, ೧೯೮೫ರಲ್ಲಿ ೧,೦೮೫ ಎಕರೆ ಡಿಸ್ಟ್ರಿಬ್ಯೂಟ್ ಆಗಿದ್ದು ಇವತ್ತು ಸರ್‌ಪ್ಲಸ್ ಲ್ಯಾಂಡ್ ಒಂದು ಎಕರೆಯೂ ಇಲ್ಲ. ಹೈಕೋರ್ಟಿನಲ್ಲಿ ಸ್ಟೇ ಇರುವುದು ೧ ಲಕ್ಷ ೮೨ ಸಾವಿರ ಎಕರೆ. ಅದಕ್ಕಾಗಿ ವಿಶೇಷ ಪ್ರಯತ್ನ ಮಾಡಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೧೯೮೨-೮೩ರಲ್ಲಿ ೧ ಲಕ್ಷ ೪ ಸಾವಿರ ಎಕರೆ ಡಿಸ್ಟ್ರಿಬ್ಯೂಟ್ ಮಾಡಿದ್ದೀರಿ. ಆದಾದನಂತರ ಇಲ್ಲಿಯವರಗೆ ಡಿಸ್ಟ್ರಿಬ್ಯೂಟ್ ಮಾಡಿರುವುದು ೧ ಲಕ್ಷ ೧೪ ಸಾವಿರ ಎಕರೆ. ಅಂದರೆ ೧೦ ಸಾವಿರ ಎಕರೆ ಮಾತ್ರ ಡಿಸ್ಟ್ರಿಬ್ಯೂಟ್ ಮಾಡಿರುತ್ತೀರಿ. ಇದಕ್ಕೆ ಹೈಕೋರ್ಟಿನಲ್ಲಿ ಸ್ಟೇ ಇರಬಹುದು. ೨ ವರ್ಷಗಳಲ್ಲಿ ಎಷ್ಟು ಕೇಸ್ ವೆಕೇಟ್ ಆಯಿತು ? ಎಷ್ಟು ಡಿಸ್ಟ್ರಿಬ್ಯೂಷನ್ ಮಾಡಬೇಕು ಎನ್ನುವುದರ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದರೆ, ಇನ್ನೂ ಹೆಚ್ಚಿನ ರೀತಿಯಲ್ಲಿ ಇದು ಆಗುತ್ತಿತ್ತು. ಇವತ್ತು ಟ್ರಿಬ್ಯೂನಲ್‌ನಲ್ಲಿ ಕೇಸ್‌ಗಳು ಮ್ಯಾನುಪ್ಯುಲೇಟ್ ಆಗಿ, ಅಲ್ಲಿ ಏನಾದರೂ ಕೇಸ್ ರಿವರ್ಸ್ ಆದರೆ ಸಾವಿರಾರು ಎಕರೆ ಪುನಃ ಲ್ಯಾಂಡ್ ಲಾರ್ಡ್ಸ್‌ಗೆ ಹೋಗುವ ಅವಕಾಶ ಇದೆ. ೧೯೭೪ರಲ್ಲಿ ಒಬ್ಬನಿಗೆ ೧೨ ವರ್ಷದ ಮಗ ಇದ್ದರೆ ಈಗ ಅವನು ಮೇಜರ್ ಆಗಿರುತ್ತಾನೆ. ಆತ ಕೂಡಾ ಒಂದು ಶೇರ್ ಕ್ಲೈಮ್ ಮಾಡುತ್ತಾನೆ. ಇದನ್ನೆಲ್ಲಾ ಸರಿಯಾದ ರೀತಿಯಲ್ಲಿ ನೋಡಿ ಸ್ವಲ್ಪ ಸ್ಪೆಷಲ್ ಟಾರ್ಜೆಟ್ ಫಿಕ್ಸ್ ಮಾಡಿ, ಆಗಬೇಕಾದಂತಹ ತೀರ್ಮಾನವನ್ನು ಬೇಗನೇ ತೆಗೆದುಕೊಂಡರೆ ಅನುಕೂಲ ವಾಗುತ್ತದೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನೇ ನಾವು ಹೇಳಿದ್ದು. ಇವತ್ತು ಎಲ್ಲಾ ಕೇಸ್‌ಗಳೂ ಕೂಡಾ ಜಿಲ್ಲಾ ಮಟ್ಟದ ಅಪಲೇಟ್ ಟ್ರಿಬ್ಯೂನಲ್ಸ್‌ಗೆ ಹೋಗತಕ್ಕ ಒಂದು ವ್ಯವಸ್ಥೆ ಇದೆ. ಅಲ್ಲಿ ಸಿವಿಲ್

ಜಡ್ಜ್ ಇರುತ್ತಾರೆ. ಸ್ಪೆಷಲ್ ಡಿ. ಸಿ. ಇರುತ್ತಾರೆ. ಇದನ್ನು ಆದಷ್ಟು ಜಾಗ್ರತೆ ಇತ್ಯರ್ಥ ಮಾಡಬೇಕೆಂದು ಸರ್ಕಾರದ ಇಚ್ಛೆ. ರಿಟ್ ಪೆಂಡಿಂಗ್ ಇರತಕ್ಕದ್ದು ಬೇಗ ಆಗಬೇಕು. ಆದುದರಿಂದ ಈ ವ್ಯವಸ್ಥೆ ಮಾಡಿದ್ದೇವೆ. ೧೯೮೩ರಲ್ಲಿ ನಾಲ್ಕು ಸಾವಿರ ಎಕರೆ, ೧೯೮೪ರಲ್ಲಿ ೬ ಸಾವಿರ ಎಕರೆ ಆಗಿದೆ. ಇದರಲ್ಲಿ ಅತಿ ವಿಳಂಬ ಆಗಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಆದಷ್ಟು ಜಾಗ್ರತೆ ಸುಮಾರು ೧ ಲಕ್ಷ ೮೨ ಸಾವಿರ ಎಕರೆ ಜಮೀನನ್ನು ಹಂಚಿಕೆ ಮಾಡತಕ್ಕದರ ಬಗ್ಗೆ ಒಂದು ಪ್ರಯತ್ನವನ್ನು ಮಾಡಿದ್ದೇವೆ. ಇನ್ನೊಂದು ವಿಚಾರ ಏನೆಂದರೆ ಲ್ಯಾಂಡ್ ಗ್ರ್ಯಾಂಟ್ ವಿಚಾರ. ಇದನ್ನು ಹೋದ ಸಲ ಕೂಡಾ ಹೇಳಿದ್ದೇನೆ. ಈ ಸಲ ವಿವರವನ್ನು ಕೊಡುತ್ತೇನೆ. ರೆಗ್ಯುಲರೈಸೇಷನ್ ಆಫ್ ಅನ್‌ಆಥರೈಸ್ಡ್ ಕಲ್ಟಿವೇಷನ್ ಬಗ್ಗೆ ೨ ಆಜ್ಞೆಗಳು ಇವೆ. ಇದು ತಮಗೆ ಗೊತ್ತು. ಮೊದಲನೇ ಆಜ್ಞೆ ಪ್ರಕಾರ ೧೯೭೯ರವರೆಗೆ ಅಪ್ಲಿಕೇಷನ್ ಕೊಡುವುದಕ್ಕೆ ಅವಕಾಶ ಇದೆ. ತಾವು ಇದ್ದಾಗ ಅದನ್ನು ಮಾಡಿದ್ದೀರಿ. ಅದು ೧೯೮೨ರವರೆಗೆ ಇತ್ತು. ೧೯೮೧ರ ಜಿ. ಒ. ತೆಗೆದುಕೊಂಡರೆ ಎಸ್. ಸಿ. ಹಾಗೂ ಎಸ್. ಟಿ. ಯುವರಿಗೆ ದೊರಕಿದ ಭೂಮಿಯ ವಿಚಾರವಾಗಿ ಹೇಳುತ್ತಿದ್ದೇನೆ. ೧೯೮೧ರಲ್ಲಿ ಹಂಚಿಕೆಯಾದ ೧೬,೯೬೫ ಎಕರೆಯಲ್ಲಿ ೭,೫೦೦ ಜನರಿಗೂ, ೧೯೮೨ರಲ್ಲಿ ಹಂಚಿಕೆಯಾದ ೨೬,೫೮೧ ಎಕರೆಯಲ್ಲಿ ೧೧,೦೭೧ ಜನರಿಗೂ, ೧೯೮೩ರಲ್ಲಿ ಹಂಚಿಕೆಯಾದ ೧೧,೬೩೩ ಎಕರೆಯಲ್ಲಿ ೯,೩೪೯ ಜನರಿಗೂ. ೧೯೮೪ರಲ್ಲಿ ಹಂಚಿಕೆಯಾದ ೧೧,೭೬೫ ಎಕರೆಯಲ್ಲಿ ೫,೭೨೧ ಜನರಿಗೂ, ೧೯೮೫ರಲ್ಲಿ ೪,೧೪೭.೩೩ ಎಕರೆಯಲ್ಲಿ ೨,೭೨೯ ಜನರಿಗೂ ಭೂಮಿ ಸಿಕ್ಕಿದೆ. ಸರ್ವೇಸಾಧಾರಣವಾಗಿ ಅರ್ಜಿ ಕೊಟ್ಟಿರುವವರೆಲ್ಲರಿಗೂ ವಿಲೇವಾರಿ ಮಾಡಲಾಗಿದೆ. ಇನ್ನು ೧೯೭೯ರ ಕೆಳಗಿನ ವಿಷಯು ಜನರಲ್ಲಾಗಿದೆ. ಆದರಲ್ಲಿ ಎಸ್.ಸಿ. ಎಸ್.ಟಿ. ಹಾಗೂ ಜನರಲ್‌ನವರೂ ಬರುತ್ತಾರೆ. ಅಂಕಿಅಂಶಗಳನ್ನು ನೋಡಿ. ೧೯೮೦ರ ಎಕ್ಸ್‌ಟೆಂಷನ್ ಆಫ್ ಲ್ಯಾಂಡ್ ಗ್ರ್ಯಾಂಟ್‌ನಲ್ಲಿ ಈಗ ನನ್ನ ಹತ್ತಿರ ಇರುವ ಜಿ. ಒ. ಕೆಳಗೆ ಈ ರೀತಿ ಅಂಕಿಅಂಶಗಳನ್ನು ಕೊಡುತ್ತೇನೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಎಷ್ಟು ಎಕರೆ ಕೊಡಲಾಗಿದೆ ಎಂಬುದು ಇದರಿಂದ ತಿಳಿಯುತ್ತದೆ. ೧೯೮೦ರಲ್ಲಿ ೧೬,೭೨೮ ಎಕರೆಯಲ್ಲಿ ೩೪೧೭ ಎಕರೆಯನ್ನು, ೧೯೮೧ರಲ್ಲಿ ೩೨,೨೨೧ ಎಕರೆಯಲ್ಲಿ ೫,೭೦೨ ಎಕರೆಯನ್ನು, ೧೯೮೨ರಲ್ಲಿ ೩೫,೫೯೨ ಎಕರೆಯಲ್ಲಿ ೯,೮೭೯ ಎಕರೆಯನ್ನೂ, ೧೯೮೨ರಲ್ಲಿ ೨೫,೦೭೯ ಎಕರೆಯಲ್ಲಿ ೫,೨೭೯ ಎಕರೆಯನ್ನು, ೧೯೮೩ರಲ್ಲಿ ೨೫,೯೯೯ ಎಕರೆಯಲ್ಲಿ ೬,೧೩೨ ಎಕರೆಯನ್ನು, ೧೯೮೪ರಲ್ಲಿ ೨೫,೦೭೯ ಎಕರೆಯಲ್ಲಿ ೫,೨೭೯ ಎಕರೆಯನ್ನು, ೧೯೮೫ರಲ್ಲಿ ೬,೫೯೦ ಎಕರೆಯಲ್ಲಿ ೯೪೭ ಎಕರೆಯನ್ನೂ ಕೊಡಲಾಗಿದೆ. ಇದು ವರ್ಷೇ ವರ್ಷೇ ಕಡಿಮೆ ಆಗುತ್ತಿರುವುದಕ್ಕೆ ಕಾರಣ ಅರ್ಜಿಗಳು ಕೊಟ್ಟಿದಕ್ಕೆ ಆಗಲೇ ಫೈನಲ್ ಡಿಸಿಷನ್ ಆಗುತ್ತಾ ಇರುವುದು. ಹೀಗಾಗಿ ಡಿಸ್ಟ್ರಿಬ್ಯೂಷನ್ ಕಡಿಮೆಯಾಗಿದೆ. ಇವತ್ತು ಪರಿಶಿಷ್ಟಜಾತಿ ಹಾಗೂ ಪಂಗಡದವರಿಗೆ ಸಮಪಾಲು ಸಿಕ್ಕಿದೆ. ಇದರಲ್ಲಿ ಏನು ಇದೆ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.-- ನಾನು ಹೇಳಿದ್ದು, ೧೯೭೭ರ ಜಿ. ಒ. ಪ್ರಕಾರ ಅನೇಕ ಅನಾಥರೈಸ್ಡ್ ಕಲ್ಟಿವೇಟರ್ಸ್ ರೆಗ್ಯುಲರೈಸ್ ಮಾಡಿದರು. ಅದರಲ್ಲಿ ಬಹುಪಾಲು ಯಾರಿಗೆ ಇನ್‌ಫ್ಲುಯೆನ್ಸ್ ಇದೆ, ಯಾರು ರೆವಿನ್ಯೂ ಇನ್ಸ್‌ಪೆಕ್ಟರ್ಸ್, ವಿಲೇಜ್ ಅಕೌಂಟೆಂಟ್ಸ್ ಜೊತೆ ಕೊಲ್ಯೂಷನ್ ಆಗಿದ್ದಾರೆ ಅವರು ರೆಕಾರ್ಡ್ ಬಿಲ್ಡಪ್ ಮಾಡಿದ್ದಾರೆ. ಅಂತಹ ಜನರೇ ಜಾಸ್ತಿ ಮಾಡಿದ್ದಾರೆ. ಅದನ್ನು ಜಾರಿಗೆ ಕೊಡಬಾರದು ಎಂದು ಮಾನ್ಯ ಬಸವಲಿಂಗಪ್ಪನವರು ಇಷ್ಯೂ ಮಾಡಿದ್ದಾರೆ. ಇದರಿಂದ ಬಡವರಿಗೆ ಅನ್ಯಾಯವಾಗುತ್ತದೆಯಾದ್ದರಿಂದ ಅದನ್ನು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಡಿಸ್ಟ್ರಿಬ್ಯೂಷನ್ ಮಾಡೋಣ. So that the other weaker sections will get 60% and even poorer sections of other communities will get 40% according to land grant rules. ಇದರ ಒಳಗೆ ೧೯೭೭ರಲ್ಲಿ ಯಾರು ಈ ರೀತಿ ರೆಕಾರ್ಡ್ ಮಾಡಿದ್ದಾರೆ ಅವರಿಗೆಲ್ಲಾ ರೆಗ್ಯುಲರೈಸ್ ಮಾಡಿದ್ದಾರೆ. ಇದರಲ್ಲಿ ೩೦ ಪರ್ಸೆಂಟ್ ಬಂದಿದೆ. ನೀವು ಹೇಳಿದ ೩೦ ಪರ್ಸೆಂಟ್ ಬಂದಿದೆ. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಕೊಟ್ಟರೆ ೬೦ ಪರ್ಸೆಂಟ್ ಇವರಿಗೆ ಹಾಗೂ ೪೦ ಪರ್ಸೆಂಟ್ ಬೇರೆ ಹಿಂದುಳಿದ ಪಂಗಡಗಳವರಿಗೆ ಹೋಗುತ್ತದೆ. ಅದನ್ನು ಸರಿಮಾಡುವುದಕ್ಕೆ ಅದನ್ನು ನಾವು ವಿತ್‌ಡ್ರಾ ಮಾಡಿಕೊಂಡಿದ್ದು. ಆ ಪೀರಿಯಡ್‌ನಲ್ಲಿ ೮-೧೦ ಸಾವಿರ ಜನ ಎನ್‌ಕ್ರೋಚ್ ಮಾಡಿದ್ದಾರೆಂದು ಇತ್ತು. ಅಷ್ಟಕ್ಕೆ ರೆಗ್ಯುಲರೈಸ್ ಮಾಡಬೇಕೆಂದು ಮುಂದೆ ೧೯೮೧ರ ಜಿ. ಒ. ನಲ್ಲಿ ಪ್ರಾರಂಭ ಮಾಡಲಾಗಿದೆ. ನಿಜವಾಗಿಯೂ ವೀಕರ್ ಸೆಕ್ಷನ್ ಆಫ್ ದಿ ಪೀಪಲ್ಸ್‌ಗೆ ಸಹಾಯವಾಗಬೇಕೆಂದು ನಾವು ಮಾಡಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಸರ್ಕಾರ ಬಂದಮೇಲೆ ಅದಕ್ಕೆ ರಿಲ್ಯಾಕ್ಸೂ ಮಾಡಿಲ್ಲ, ತಿದ್ದುಪಡಿಯನ್ನೂ ಮಾಡಿಲ್ಲ. ಮೊದಲು ಇದ್ದ ಅಪ್ಲಿಕೇಷನ್ಸ್ ಬಗ್ಗೆ ವಿಚಾರಣೆ ಮಾಡಿ ಕೊನೆಗೆ ನಿರ್ಣಯ ಮಾಡಿದ್ದೇವೆ. ೧೯೮೫ರಲ್ಲಿ ೬ ಸಾವಿರ ಎಕರೆ ಇದೆ. ಎಲ್ಲಾ ಅಪ್ಲಿಕೇಷನ್ಸ್‌ನ್ನು ಡಿಸ್ಪೋಸ್ ಮಾಡಲಾಗಿದೆ. ನಾನು ಈ ಬಗ್ಗೆ ತಿದ್ದುಪಡಿ ತಂದಿದ್ದೇನೆ. ಆರೀತಿಯ ವಾದ ತಮ್ಮದು ಇದ್ದರೆ, ಬೇರೆ ಜನ ಬೇರೆ ರೀತಿಯ ವಾದವನ್ನೂ ಮಾಡಿದ್ದಾರೆ. ಹರಿಜನ ಗಿರಿಜನರಲ್ಲದ ಭೂಹೀನರೂ ಇದ್ದಾರೆ, ಅವರಿಗೂ ಅಷ್ಟೇ ಕಷ್ಟ ಇದೆ, ಅವರಿಗೂ ಅನ್ಯಾಯವಾಗಬಾರದೆಂಬ ವಾದ ಕೂಡಾ ಇದೆ. ಅದಕ್ಕೆ ಈ ಮಸೂದೆಯನ್ನು ತಂದಿದ್ದೇವೆ. ಇದು ಬಂದಾಗ ಎಲ್ಲರ ಅಭಿಪ್ರಾಯವನ್ನು ತೆಗೆದು ಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೧೯೫೨ ರಿಂದ ಇಲ್ಲಿಯವರೆಗೆ ಮಾನ್ಯ ಕಡಿದಾಳ್ ಮಂಜಪ್ಪನವರ ಕಾಲದಿಂದ ಹಿಡಿದು ಲೆಕ್ಕ ಹಾಕಿದರೂ ಆವರೇಜ್ ಲ್ಯಾಂಡ್ ಇವರಿಗೆ ಏನು ಸಿಗಬೇಕೋ ಅದು ಅವರಿಗೆ ಸಿಕ್ಕಿಲ್ಲ. ೧೯೮೧ರಲ್ಲಿ ಕನ್‌ಸೆಷನ್ಸ್‌ನ್ನು ನಾವು ಮಾಡಿದ್ದು. ಯಾವ ದುರುದ್ದೇಶದಿಂದಲೂ ನಾವು ಅದನ್ನು ಮಾಡಲಿಲ್ಲ. ಒಳ್ಳೆಯ ಉದ್ದೇಶದಿಂದಲೇ ನಾವು ಅದನ್ನು ಮಾಡಿದ್ದು. ಇವತ್ತು ಡಿಸ್ಟ್ರಿಬ್ಯೂಷನ್ ಬೇರೆ ಜನರಿಗೆ ಹಾಗೂ ಇವರಿಗೂ ಮಾಡಿರುವುದನ್ನು ತಾವು ಕಂಪೇರ್ ಮಾಡಿ ನೋಡಿ. ಈ ಬಗ್ಗೆ ಸ್ಟೇಟ್‌ಮೆಂಟ್ ತರಿಸಿ ನೋಡಿ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಎಷ್ಟು ಸಿಗಬೇಕೋ ಅದು ಸಿಕ್ಕಿಲ್ಲ ಎಂದು ತಿಳಿದು ಬಂದೇ ಅದನ್ನು ಕೊಟ್ಟಿರುವುದು. ಸ್ಪೆಷಲ್ ಕನ್‌ಸೆಷನ್ ಕೊಟ್ಟರೆ ಅನ್ಯಾಯವಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ವಾದವನ್ನು ನಾನು ಅಲ್ಲಗಳೆಯುತ್ತಿಲ್ಲ ಅನಂತರ ಇದನ್ನು ಆಲೋಚನೆ ಮಾಡೋಣವೆಂದು ನಾನು ಹೇಳುತ್ತಿದ್ದೇನೆ. ಹರಿಜನರಿಗೆ ಯಾವರೀತಿ ಅನುಕೂಲ ಮಾಡಿಕೊಡಬೇಕು, ಅದನ್ನು ಮಾಡುವಾಗ ಹರಿಜನರೇತರ ಕಡುಬಡವರಿಗೆ ಯಾವರೀತಿ ಅನುಕೂಲ ಮಾಡಿಕೊಡಬೇಕೆಂಬ ಉದೇಶವನ್ನು ನಾವು ಇಟ್ಟುಕೊಂಡಿರುವುದರಿಂದ ಮುಂದೆ ತಿದ್ದುಪಡಿಯನ್ನು ತಂದಾಗ ಇದನ್ನು ಪರಿಶೀಲಿಸೋಣವೆಂದು ನಾನು ಹೇಳಿದ್ದೆ, ನಮ್ಮ ಸರ್ಕಾರ ಬಂದಮೇಲೆ ಹರಿಜನರಿಗೆ ಯಾವುದೇ ರೀತಿಯಲ್ಲೂ ತೊಂದರೆಯಾಗದೆ ಅವರಿಗೆ ಎಲ್ಲ ಅನುಕೂಲಗಳೂ ಸಿಕ್ಕಿವೆ ಎನ್ನತಕ್ಕ ಮಾತನ್ನು ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅವರಿಗೆ ಅನಾನುಕೂಲ ವಾಗುವಂತೆ ನಾವೇನೂ ಮಾಡಿಲ್ಲ. ಈ ಕಾನೂನಿಗೆ ತಿದ್ದುಪಡಿಯನ್ನು ತರುವ ಮೊದಲು ದಲಿತ ಸಂಘರ್ಷ ಸಮಿತಿಯವರೂ ಮತ್ತು ಬೇರೆ ಬೇರೆಯವರು ಬಂದು ನನ್ನ ಹತ್ತಿರ ಏನು ಹೇಳಿದ್ದಾರೆಂದರೆ ನೀವು ಈ ಕಾನೂನು ಮಾಡುತ್ತಿರುವುದರಿಂದ ಹರಿಜನರಿಗೆ ಅಡ್ಡಿಬರುತ್ತದೆ, ಹಿಂದೆ ಹರಿಜನರು ಅರ್ಜಿ ಗಳನ್ನು ಸಲ್ಲಿಸಲು ಗೊತ್ತಾಗಲಿಲ್ಲ, ಆದ್ದರಿಂದ ಕಾಲಾವಕಾಶವನ್ನು ವಿಸ್ತರಿಸಬೇಕೆಂದು ಹೇಳಿದ್ದಾರೆ. ಅವರ ಮಾತುಗಳನ್ನು ನಾವು ಗಮನದಲ್ಲಿಟ್ಟುಕೊಂಡು ವಿರೋಧಪಕ್ಷದವರನ್ನು ಕರೆದು ಅವರೊಡನೆ ಚರ್ಚೆಮಾಡಿ ಈ ಒಂದು ಅಂಶವನ್ನು ತಂದಿದ್ದೇನೆಂದು ಹೇಳಬಯಸುತ್ತೇನೆ. ಈ ಲ್ಯಾಂಡ್‌ಗ್ರ್ಯಾಂಟ್ ವಿಚಾರದಲ್ಲಿ ನಾನು ಹೆಚ್ಚು ಹೇಳಬೇಕಾದ ಅವಶ್ಯಕತೆ ಇಲ್ಲವೆಂದು ಅನಿಸುತ್ತದೆ.

ಇನ್ನು ಲ್ಯಾಂಡ್ ಆಕ್ವಿಸಿಷನ್ ವಿಚಾರದಲ್ಲಿ ಹೇಳುವುದಾದರೆ ತಾವು ಹೇಳಿದ ಅನೇಕ ವಿಚಾರಗಳನ್ನು ನಾನು ಗಮನಿಸಿದ್ದೇನೆ. ಅನೇಕ ವರ್ಷಗಳಿಂದ ಭೂಸ್ವಾಧೀನ ಮಾಡತಕ್ಕ ಕಾರ್ಯದಲ್ಲಿ ವಿಳಂಬವಾಗಿದೆ, ಇದರಲ್ಲಿ ಅನೇಕ ಅವ್ಯವಹಾರಗಳಾಗಿವೆ. ಕಾನೂನಿಗೆ ವಿರುದ್ಧವಾದ ಕೆಲಸಗಳಾಗಿವೆ. ಎಲ್ಲೆಲ್ಲಿ ಹೊಸ ಹೊಸ ಯೋಜನೆಗಳು ಬಂದಿವೆ ಅಲ್ಲಿ ಸಾವಿರಾರು ಎಕರೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕ ಸಂದರ್ಭ ಬಂದಿದೆ ಅಂಥ ಕಡೆಗಳಿಗೆ ನಾವು ಪ್ರತ್ಯಕ್ಷವಾಗಿ ಹೋಗಿ ನೋಡಿದಾಗ ಸ್ಪಷ್ಟವಾಗಿ ಕಂಡು ಬಂದಿದೆ. ಇದೊಂದು ಅತ್ಯಂತ ಮಹತ್ವದ ಸಮಸ್ಯೆ, ಇದೊಂದು ಬಹಳ ಗಂಭೀರವಾದ ಸಮಸ್ಯೆ ಎಂಬುದು ತಿಳಿದುಬಂದಿದೆ. ನಾವು ಅಲ್ಲಿ, ಇಲ್ಲಿ ಕುಡಿಯುವ ನೀರಿಗೆ, ರಸ್ತೆಗಳ ನಿರ್ಮಾಣಕ್ಕೆ, ದುರಸ್ತಿಗೆ ೫೦ ಲಕ್ಷ, ೬೦ ಲಕ್ಷ ಅಥವಾ ಒಂದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕಾದರೆ ಸಾಕಷ್ಟು ಆಲೋಚನೆ ಮಾಡುತ್ತೇವೆ, ಆದರೆ ಈ ಭೂಸ್ವಾಧೀನದ ವಿಚಾರ ಸರ್ಕಾರದ ಮುಂದೆ ಬಂದಾಗ ನೂರಾರು ಕೋಟಿ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಿ ಯಾರ್ಯಾರು ಜಮೀನುಗಳನ್ನು ಕಳೆದುಕೊಂಡಿರುತ್ತಾರೆ ಅವರಿಗೆ ಕೂಡಲೇ ಹಣವನ್ನು ಒದಗಿಸಿಕೊಟ್ಟು, ಅವರಿಗೆ ತೊಂದರೆಯಾಗದಂತೆ

ನೋಡಿಕೊಳ್ಳಬೇಕೆಂದು ನಮ್ಮ ಅಧಿಕಾರಿಗಳಿಗೆ ಹೇಳಿದ್ದೇವೆ. ಪರಿಹಾರ ಹಣವನ್ನು ಕೊಡುವ ಸಂದರ್ಭದಲ್ಲಿ ತಡವಾಗಿ ಯೋಜನೆಯ ಕೆಲಸಕಾರ್ಯಗಳು ಸ್ವಲ್ಪಮಟ್ಟಿಗೆ ಕುಂಠಿತವಾಗಬಹುದು. ಆದರೆ ಅದಕ್ಕೆ ಅವಕಾಶ ಕೊಡಬಾರದು, ಯೋಜನೆಯ ಕೆಲಸ ಪ್ರಗತಿಪಥದಲ್ಲಿ ಹೋಗಬೇಕು, ಯಾವುದಾದರೂ ಒಂದೆರಡು ಪ್ರದೇಶಗಳನ್ನು ಸ್ವಾಧೀನ ಮಾಡಿಕೊಳ್ಳುವುದರಲ್ಲಿ ವಿಳಂಬವಾದರೂ ಇಡೀ ಯೋಜನೆಯ ಕೆಲಸವೇ ನಿಂತುಹೋಗುತ್ತದೆ. ಒಂದು ವರ್ಷದಲ್ಲಿ ಆಗಬೇಕಾದ ಕೆಲಸ ನಾಲ್ಕೈದು ವರ್ಷಕಾಲ ಮುಂದಕ್ಕೆ ಹೋಗುತ್ತದೆ, ೫ ಕೋಟಿ ರೂಪಾಯಿ ಖರ್ಚಾಗುವ ಅಂದಾಜು ಇದ್ದುದು ೫೦ ಕೋಟಿಯ ವರೆಗೂ ಏರುವ ಸಂದರ್ಭ ಬರಬಹುದು, ಇದಕ್ಕೆ ಸರ್ಕಾರ ಅವಕಾಶ ಕೊಡಬಾರದೆಂದು ಭೂಮಿಯನ್ನು ಬಿಟ್ಟುಕೊಟ್ಟವರಿಗೆ ಕೂಡಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ. ಆದರೆ ಅವಕಾಶವನ್ನು ಉಪಯೋಗ ಮಾಡಿಕೊಂಡ ಕಂದಾಯ ಇಲಾಖೆಯ ಅಧಿಕಾರಿಗಳು, ನ್ಯಾಯಾಂಗ ಇಲಾಖೆಯ ಅಧಿಕಾರಿಗಳು, ಸರ್ಕಾರೀ ವಕೀಲರು ಖಾಸಗೀ ವಕೀಲರು ಹಾಗೂ ರಾಜಕೀಯ ವ್ಯಕ್ತಿಗಳು ಹೀಗೆ ಎಲ್ಲರೂ ಸೇರಿ ಸರ್ಕಾರದಿಂದ ಕೊಟ್ಟ ಹಣವನ್ನು ಲೂಟಿ ಮಾಡಿದ್ದಾರೆ. ಈ ಮಾತನ್ನು ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನಾವು ನಿಗದಿ ಮಾಡಿದ ಹಣಕ್ಕಿಂತ ೧೦ ಪಟ್ಟು ಹೆಚ್ಚು ಹಣ ಖರ್ಚಾಗಿದೆ, ಭೂ ಸ್ವಾಧೀನ ಕಾರ್ಯದಲ್ಲಿ ಸರ್ಕಾರ ಬಹಳ ತೀವ್ರವಾದ ಕ್ರಮಗಳನ್ನು ಹಾಕಿಕೊಂಡಿದೆ. ಮುಂದೆಯೂ ಕೂಡ ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ. ಈ ದಿಸೆಯಲ್ಲಿ ಲ್ಯಾಂಡ್ ಅಕ್ವಿಸಿಷನ್ ಆ್ಯಕ್ಟ್‌ನಲ್ಲಿ ಸೂಕ್ತ ತಿದ್ದುಪಡಿಯನ್ನು ನಾವು ತರತ್ತಿದ್ದೇವೆ. ಭೂಮಿಯನ್ನು ಕಳೆದುಕೊಂಡ ವ್ಯಕ್ತಿಗಳಿಗೆ ಸೂಕ್ತ ಪರಿಹಾರವನ್ನು ಕೊಡುವ ದೃಷ್ಟಿಯಿಂದ ನಾವು ಇದನ್ನು ಮಾಡುತ್ತಿದ್ದೇವೆ. ಅವರು ನ್ಯಾಯಾಲಯಕ್ಕೆ ಹೋಗತಕ್ಕ ಪ್ರಮೇಯ ಬರುವುದಿಲ್ಲ. ಭೂಮಿಯನ್ನು ಕಳೆದುಕೊಂಡವರಿಗೆ ಸಂಬಂಧಪಟ್ಟ ಅಧಿಕಾರಿಗಳು ಬರಮಾಡಿಕೊಂಡು ಅವರಿಗೆ ನ್ಯಾಯವಾಗಿ ಎಷ್ಟು ಹಣವನ್ನು ಕೊಡಬೇಕೆಂಬುದನ್ನು ನಿಗದಿಮಾಡಿ ಕೂಡಲೇ ಅಷ್ಟು ಹಣವನ್ನು ಬಿಡುಗಡೆ ಮಾಡಲು ಆಜ್ಞೆ ಮಾಡಿ ಆ ಹಣವನ್ನು ಬಹಿರಂಗವಾಗಿ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ. ಈ ಕಾರ್ಯಕ್ರಮವನ್ನು ನೋಡುವುದಕ್ಕೆ ಒಂದು ವಿಶೇಷವಾದ ವ್ಯವಸ್ಥೆಯನ್ನು ನಮ್ಮ ಕಂದಾಯ ಇಲಾಖೆ ಮಾಡುತ್ತಿದೆ. ನಾನೂ ಮತ್ತು ಮಾನ್ಯ ಮುಖ್ಯಮಂತ್ರಿಯವರೂ ಇದರ ಬಗ್ಗೆ ಒಂದು ಸೂಕ್ತ ಆದೇಶವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಇನ್ನೂ ಹಲವಾರು ತೀವ್ರ ಕ್ರಮಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ನಾನು ಮಾನ್ಯ ವಿರೋಧ ಪಕ್ಷದ ಸದಸ್ಯರನ್ನು ಬರಮಾಡಿಕೊಂಡು ಅವರೊಡನೆ ಚರ್ಚೆಮಾಡಿ, ಅವರ ಅಮೂಲ್ಯ ಸಲಹೆಗಳನ್ನು ತೆಗೆದುಕೊಂಡು ಮುಂದುವರಿಯುತ್ತೇವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮುಜರಾಯಿ ಇಲಾಖೆಯ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ಮುಜರಾಯಿ ಮತ್ತು ನಾನ್ ಮುಜರಾಯಿ ಎಂದು ಇದೆ. ಇದರಲ್ಲಿ ಎಲ್ಲರಿಗೂ ಸಮಾನವಾಗಿ ಹಣ ಸಿಕ್ಕುವಂತೆ ಮಾಡಿದ್ದೇವೆ. ಅದು ಮುಜರಾಯಿ ಇರಬಹುದು ಅಥವಾ ನಾನ್-ಮುಜರಾಯಿ ಇರಬಹುದು. ಯಾರಿಗೂ ತಾರತಮ್ಯ ಇಲ್ಲದ ರೀತಿಯಲ್ಲಿ ಹಣವನ್ನು ಕೊಟ್ಟಿದ್ದೇವೆ. ಈ ವರ್ಷವೇ ಅದನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ, ಇದರ ಜೊತೆಗೆ ಎಲ್ಲಕ್ಕಿಂತಲೂ ಮುಖ್ಯವಾಗಿ ಕಳೆದ ಸಾರಿಯೇ ಹೇಳಿದ ಪ್ರಕಾರ ಕಾಮನ್ ಎಂಡೋಮೆಂಟ್ ಆ್ಯಕ್ಟ್‌ನ್ನು ಈ ಸಾರಿ ಇದೇ ಸದನದಲ್ಲಿ ಮಂಡಿಸುತ್ತೇನೆ. ಅದು ಜಾರಿಗೆ ಬಂದರೆ ಯಾರಿಗೂ ಯಾವುದೇ ತಾರತಮ್ಯ ಇಲ್ಲದೆ ಹಣ ಸಿಕ್ಕುತ್ತದೆ. ಇದಕ್ಕಿಂತ ಹೆಚ್ಚು ನಾನು ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಸಾವಿರಾರು ಕೋಟಿ ರೂಪಾಯಿ ಬೆಲೆಬಾಳುವ ಮುಜರಾಯಿ ಆಸ್ತಿಪಾಸ್ತಿಗಳಿವೆ. ಅದರಿಂದ ಬಂದ ಹಣವನ್ನು ವಿವಿಧ ಕ್ಷೇತ್ರಗಳಿಗೆ ವಿನಿಯೋಗ ಮಾಡಿದರೆ ಉತ್ತಮ ಸೇವೆಯನ್ನು ಸಲ್ಲಿಸಲು ಅನುಕೂಲವಾಗುತ್ತದೆ. ನಮ್ಮ ಸಮಾಜದಲ್ಲಿ ಈ ಮುಜರಾಯಿ ಸಂಸ್ಥೆಗಳು ಬಹಳ ಉತ್ತಮವಾದ ಸ್ಥಾನಮಾನಗಳನ್ನು ಪಡೆದಿವೆ. ಅವು ಸರಿಯಾಗಿ ಕೆಲಸ ಮಾಡಬೇಕೆಂಬ ಉದ್ದೇಶದಿಂದಲೇ ನಾವು ಈಗ ಕಾಮನ್ ಎಂಡೋಮೆಂಟ್ ಆ್ಯಕ್ಟ್‌ನ್ನು ಈ ಸದನದಲ್ಲಿ ಮಂಡಿಸಲಿದ್ದೇವೆ.

ಇನ್ನು ರೆಂಟ್ ಕಂಟ್ರೋಲ್ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಕಳೆದಸಾರಿ ನಾನು ಹೇಳಿದಂತೆ ಶ್ರೀಮತಿ ಪ್ರಮಿಳಾ ಸಮಿತಿಯವರು ಕೊಟ್ಟ ವರದಿಗೆ ಮಂತ್ರಿಮಂಡಲ ತನ್ನ ಒಪ್ಪಿಗೆಯನ್ನು ಕೊಟ್ಟಿದೆ. ಅದನ್ನೂ ಕೂಡ ಇದೇ ಸದನದಲ್ಲಿ ಇದೇ ಅಧಿವೇಶನದಲ್ಲಿ ಮಂಡಿಸುತ್ತೇವೆ. ಇದರಲ್ಲಿ ಸಮಗ್ರವಾದ ತಿದ್ದುಪಡಿ ಇದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಕಳೆದ ೨೦ ವರ್ಷದಿಂದಲೂ ಈ ಕಾನೂನಿಗೆ ತಿದ್ದುಪಡಿ ಆಗಿಲ್ಲ. ಈ ಕಾನೂನಿನಲ್ಲಿ ಮನೆಯ ಮಾಲೀಕರು ಮತ್ತು ಬಾಡಿಗೆದಾರರು

ಇವರಿಬ್ಬರ ಹಿತದೃಷ್ಟಿಯನ್ನೂ ಗಮನದಲ್ಲಿಟ್ಟುಕೊಂಡು ಅಗತ್ಯ ತಿದ್ದುಪಡಿಗಳನ್ನು ಒಳಗೊಂಡಂತೆ ಒಂದು ಮಸೂದೆಯನ್ನು ತರುತ್ತಿದ್ದೇವೆ. ಅದು ಬಂದಾಗ ಮಾನ್ಯ ಸಭೆಯು ಅನುಮೋದನೆ ನೀಡ ಬೇಕೆಂದು ಕೇಳಿಕೊಳ್ಳುತ್ತೇನೆ. ಈ ರೆಂಟ್ ಕಂಟ್ರೋಲ್ ಆಕ್ಟ್‌ನ್ನು ತಿದ್ದುಪಡಿ ಮಾಡುವುದರಿಂದ ಎಷ್ಟು ಅನುಕೂಲವಾಗುತ್ತದೆ, ಈಗ ಎಷ್ಟು ಅನಾನುಕೂಲವಿದೆ ಎಂಬುದಕ್ಕೆ ನಿದರ್ಶನವಾಗಿ ನಾನು ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ಕಳೆದ ತಿಂಗಳು ನಾನು ಊರಿಗೆ ಹೋಗಿದ್ದು ವಾಪಸ್ಸು ಬಂದ ಸಂದರ್ಭದಲ್ಲಿ ಬೆಂಗಳೂರಿನ ಅಕೌಂಟೆಂಟ್ ಜನರಲ್ ಆಫೀಸಿನಲ್ಲಿ ಕೆಲಸ ಮಾಡತಕ್ಕ ನೌಕರರೊಬ್ಬರು ತಮ್ಮ ಹೆಂಡತಿ ಮಕ್ಕಳು ಮತ್ತು ಮನೆಯ ಸಾಮಾನುಗಳನ್ನೆಲ್ಲಾ ತೆಗೆದುಕೊಂಡು ಬಂದು ನನ್ನ ಮನೆಯ ಕಾಂಪೌಂಡ್‌ನಲ್ಲಿ ಕೂತಿದ್ದರು. ಅವರು ಮೊದಲು ಇಪ್ಪತ್ತು ಮನೆಗೆ ೮ ವರ್ಷ ಗಳಿಂದಲೂ (ಆ ಮನೆಗೆ ಬಂದಾಗಿನಿಂದ) ಮನೆಯ ಬಾಡಿಗೆ ಹಣವನ್ನು ಕೊಡುತ್ತಾ ಬಂದಿದ್ದಾರೆ. ಅವರು ನನ್ನ ಹತ್ತಿರ ಏನು ಹೇಳಿದರು ಎಂದರೆ ಸ್ವಾಮಿ, ನಾನು ಕಳೆದ ೮ ವರ್ಷಗಳಿಂದಲೂ ಇಂಥ ಮನೆಯಲ್ಲಿ ವಾಸವಾಗಿದ್ದು ಬಾಡಿಗೆ ಹಣವನ್ನೂ ಕೂಡ ಪ್ರತಿ ತಿಂಗಳೂ ಕೊಡುತ್ತಾ ಬಂದಿದ್ದೇನೆ. ನನ್ನ ಹತ್ತಿರ ಹಣ ಕೊಟ್ಟಿದ್ದಕ್ಕೆ ರಸೀತಿ ಇದೆ. ಆದರೆ ಈಗ ಆ ಮನೆಯ ಮಾಲೀಕರು ನನ್ನನ್ನೂ ನನ್ನ ಹೆಂಡತಿ ಮಕ್ಕಳನ್ನೂ ಮತ್ತು ಸಾಮಾನುಗಳನ್ನೂ ಮನೆಯಿಂದ ಹೊರಗೆ ಹಾಕಿದ್ದಾರೆ, ನನಗೆ ಇರುವುದಕ್ಕೆ ಜಾಗ ಇಲ್ಲವೆಂದು ಗೋಳಿಟ್ಟರು. ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅವರ ಬಳಿ ಇದಂಥ ಬಾಡಿಗೆ ಹಣ ಕೊಟ್ಟಿದ್ದಕ್ಕೆ ಇದ್ದ ರಸೀತಿಯನ್ನು ನೋಡಿದೆ. ಅವರು ೮ ವರ್ಷದಿಂದಲೂ ಬಾಡಿಗೆಯನ್ನು ಕೊಡುತ್ತಾ ಬಂದಿದ್ದಾರೆ. ಇದನ್ನು ನೋಡಿ, ಮಾರನೆಯ ದಿವಸವೇ ಸಂಬಂಧಪಟ್ಟ ಅಧಿಕಾರಿಯನ್ನು ಕರೆದು ಆ ಮನೆಯ ಮಾಲೀಕ ಇವರಿಗೆ ಇಂಥ ಒಂದು ತೊಂದರೆ ಕೊಟ್ಟಿದ್ದಾರೆ, ಮೊದಲು ಇಪ್ಪತ್ತನಾಲ್ಕು ಗಂಟೆಯೊಳಗಾಗಿ ಇವರನ್ನು ಆ ಮನೆಗೆ ಸೇರಿಸಬೇಕು. ಇಲ್ಲದಿದ್ದರೆ ನಿನ್ನ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ತಿಳಿಸಿದೆ. ಅಲ್ಲಿ ಏನಾಗಿದೆ, ಸಂಬಂಧಪಟ್ಟ ಅಧಿಕಾರಿ ಮತ್ತು ರೆವಿನ್ಯೂ ಇನ್‌ಸ್ಪೆಕ್ಟರ್ ಇಬ್ಬರೂ ಮಾಲೀಕರಿಂದ ಹಣವನ್ನು ತೆಗೆದುಕೊಂಡು ಇವರನ್ನು ಮನೆಯಿಂದ ಹೊರಕ್ಕೆ ಹಾಕಿಸಿದ್ದಾರೆ. ಆ ಮನೆ ಬೇರೆಯವರಿಗೆ ಅಲಾಟ್ ಆಗಿತ್ತು. ಅಂಥ ಅವ್ಯವಹಾರವೆಲ್ಲಾ ನಡೆಯುತ್ತವೆ. ನಾನು ಸಂಬಂಧಪಟ್ಟ ಅಧಿಕಾರಿಗೆ ಸೂಕ್ತ ಆದೇಶ ಕೊಟ್ಟಮೇಲೆ ಈ ನೌಕರನಿಗೆ ಅದೇ ಮನೆಯನ್ನು ಅಲಾಟ್ ಮಾಡಿಕೊಟ್ಟಿದ್ದಾರೆ. ಈಗ ಅವರು ಆ ಮನೆಯಲ್ಲಿಯೇ ವಾಸವಾಗಿದ್ದಾರೆ.

ಅದಕ್ಕೆ ಸೂಕ್ತವಾದ ತಿದ್ದುಪಡಿ ಸೂಚನೆ ಇದೆ. ಅದು ಬಂದಾಗ ವಿವರಗಳನ್ನು ಚರ್ಚೆ ಮಾಡೋಣವೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ರೆವಿನ್ಯೂ ಇಲಾಖೆಯ ಒಂದು ಆಡಳಿತ ಸುಧಾರಣೆಯ ಬಗ್ಗೆ ನಾನು ಹೋದ ಸಲ ಹೇಳಿದ್ದೆ. ಈ ದಿಸೆಯಲ್ಲಿ ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಅದು ಮೊಟ್ಟಮೊದಲನೆಯದಾಗಿ ನಾಡ ಪದ್ಧತಿ. ಈ ನಾಡ ಪದ್ಧತಿಯಿಂದ ಸಾಮಾನ್ಯ ಜನರ ಅನೇಕ ಸಮಸ್ಯೆಗಳನ್ನು ತ್ವರಿತಗತಿಯಿಂದ ಪರಿಹರಿಸಲು ಕೈಗೊಂಡಿದ್ದೇವೆ. ನಾವು ಪ್ರಯೋಗವಾಗಿ ಮಾಡಿರ ತಕ್ಕಂಥ ಈ ಸಾಧನೆಯಿಂದ ಬಹಳ ಒಳ್ಳೆಯ ಫಲ ಸಿಕ್ಕಿದೆ. ಅದಕ್ಕಾಗಿ ನಾಡ ಪದ್ಧತಿಯಿಂದ ಮುಂದಿನ ವರ್ಷ ಪ್ರತಿಯೊಂದು ರೆವಿನ್ಯೂ ಸಬ್‌ಡಿವಿಜನ್‌ಗಳಲ್ಲಿಯೂ ಒಂದೊಂದು ಪ್ರಾರಂಭ ಮಾಡುತ್ತೇವೆ. ನಾವು ಇಟ್ಟುಕೊಂಡಿರತಕ್ಕಂಥ ಅಭಿಲಾಷೆಯಂತೆ ಆದಷ್ಟು ಜಾಗ್ರತೆ ಅಂದರೆ ಏಳನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗಾಗಿ ಸಾಧ್ಯವಾದರೆ ಮಾಡುತ್ತೇವೆ, ಇಲ್ಲದೆ ಹೋದರೆ ಬರುವ ಹತ್ತು ವರ್ಷಗಳಲ್ಲಿ ರಾಜ್ಯಾದ್ಯಂತ ಈ ನಾಡ ಪದ್ಧತಿಯನ್ನು ತರತಕ್ಕಂಥ ಆಲೋಚನೆ ಸರ್ಕಾರದ ಮುಂದೆ ಇದೆ. ಈ ವರ್ಷ ಮಾತ್ರ ಎಲ್ಲ ಸಬ್‌ಡಿವಿಜನ್‌ಗಳಲ್ಲೂ ನಾವು ಇದನ್ನು ಜಾರಿ ಮಾಡತಕ್ಕಂಥದ್ದು ಇದೆ. ಅದೇ ರೀತಿಯಲ್ಲಿ ಈಮತ್ತು ಸರ್ವೆ ಮತ್ತು ಸೆಟಲ್‌ಮೆಂಟ್ ಡಿಪಾರ್ಟ್‌ಮೆಂಟಿನಲ್ಲಿ ಈಗಾಗಲೇ ಕೆಲವು ಸಾಧನೆಗಳನ್ನು ಮಾಡಿದ್ದೇವೆ. ಇನ್ನೂ ಹೆಚ್ಚಿನ ಬದಲಾವಣೆಗಳನ್ನು ಮಾಡಬೇಕಾಗಿದೆ. ಅದರಲ್ಲೂ ಕೂಡ Maintenance of City Surve records ಬಗ್ಗೆ ಹೇಳುವುದಾದರೆ ಬಹಳವಾಗಿ ಎಲ್ಲವೂ ಕೂಡ ಹಾಳಾಗಿ ಹೋಗಿದೆ. ಅನೇಕ ವರ್ಷಗಳಿಂದ ಇರತಕ್ಕಂಥದ್ದಾಗಿರುತ್ತದೆ. ಇವುಗಳ ಬಗ್ಗೆ ಈಗಾಗಲೇ ಸರ್ಕಾರದವರು ಕೆಲವು ಹೆಜ್ಜೆಗಳನ್ನು ಇಟ್ಟಿದೆ. ಮತ್ತು ಅದಕ್ಕೆ ಬೇಕಾದಂಥ ಹಣವನ್ನು ಕೂಡ ಒದಗಿಸಿಕೊಟ್ಟಿದ್ದೇವೆ. ಮತ್ತೆ ಸಬ್‌ರಿಜಿಸ್ಟ್ರಾರ್ ಆಫೀಸ್‌ಗೆ ಕಾಪಿಯಿಂಗ್ ಮಿಷನ್ ಕೂಡ

ಕೊಡುತ್ತಿದ್ದೇವೆ. ಇದರ ಉದ್ದೇಶ ಆದಷ್ಟು ಬೇಗ ಯಾರೇ ಡಾಕ್ಯುಮೆಂಟ್ಸ್‌ನ್ನು ಕೇಳಿದರೂ ಸಿಕ್ಕಬೇಕು ಎನ್ನುವುದಾಗಿದೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕಳೆದ ಬಾರಿಯಿಂದಲೂ ಇದರ ಬಗ್ಗೆ ಹೇಳುತ್ತಲೇ ಇದ್ದೇವೆ. ಈ ಬಾರಿಯೂ ಹೇಳಿದ್ದೇವೆ. ವರ್ಷೇ ವರ್ಷೇ ಈ ರೀತಿಯಾಗಿ ಹೇಳಿಕೊಂಡು ಹೋಗುತ್ತಿರಬೇಕೇ?

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದೇ ಸಲ ಎಲ್ಲ ಕಡೆಗೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಂತ ಹಂತವಾಗಿ ಬರುವ ಮೂರು ವರ್ಷದಲ್ಲಿ ಎಲ್ಲ ಕಡೆಗೂ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಈಗಾಗಲೇ ಕೆಲವು ಕಡೆ ಕೊಟ್ಟಿರುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಇನ್ನು ಫ್ರಾಗ್‌ಮೆಂಟೇಷನ್ ಕಾನೂನು ಬಗ್ಗೆ ಮಾನ್ಯ ಯಡಿಯೂರಪ್ಪನವರು ಹೇಳಿದರು. ಸೌತ್ ಕೆನರ ಜಿಲ್ಲೆ ಮಾತ್ರವಲ್ಲ, ಎಲ್ಲ ಜಿಲ್ಲೆಗಳಿಗೂ ವಿನಾಯಿತಿಯನ್ನು ಕೊಡಬೇಕು ಎನ್ನುವ ಮಾತನ್ನು ಹೇಳಿದಕ್ಕೆ ಅಂದೇ ಉತ್ತರವನ್ನು ಕೊಡುತ್ತಾ ಹೇಳಿದ್ದೇನೆ. ಅಗ್ರಿಕಲ್ಚರ್ ಸೈನ್ಸ್ ವಿಶ್ವವಿದ್ಯಾನಿಲಯದವರಿಗೆ ಈ ಬಗ್ಗೆ ಒಂದು ರಿಪೋರ್ಟ್ ಕೊಡಲಿಕ್ಕೆ ಹೇಳಿದ್ದೇವೆ. ಅದು ಬಂದ ಮೇಲೆ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತದೆಂದು ಹೇಳುತ್ತೇನೆ.

ಇನ್ನು ಇಲಾಖೆಯ ಕಚೇರಿ ಸುಧಾರಣೆಯ ಬಗ್ಗೆ ಈಗಾಗಲೇ ೬ ಜಿಲ್ಲೆಗಳಲ್ಲಿ ಎಲ್ಲ ಕಚೇರಿಯ ನವೀಕರಣ ಕಾರ್ಯವನ್ನು ಮಾಡತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಬಿಜಾಪುರ, ಚಿಕ್ಕಮಗಳೂರು, ತುಮಕೂರು ಈ ಜಿಲ್ಲೆಗಳಲ್ಲಿ ಈಗಾಗಲೇ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿ ಜಿಲ್ಲೆ ಈ ಜಿಲ್ಲೆಗಳನ್ನು ಈ ವರ್ಷ ಕೈಗೆ ತೆಗೆದುಕೊಂಡಿದ್ದೇವೆ, ಮುಂದಿನ ವರ್ಷ ಧಾರವಾಡ, ಮೈಸೂರು, ಗುಲ್ಬರ್ಗಾ ಈ ಜಿಲ್ಲಾ ಕಚೇರಿಗಳನ್ನು ನವೀಕರಣ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದರ ಬಗ್ಗೆ ಸೂಕ್ತವಾದಂಥ ಕಾರ್ಯಕ್ರಮಗಳನ್ನು ಈಗಾಗಲೇ ಹಮ್ಮಿಕೊಂಡಿದ್ದೇವೆ.

ಇನ್ನು ಬೆಂಗಳೂರು ನಗರ ಮತ್ತು ಸುತ್ತಮುತ್ತಲು ಇರತಕ್ಕಂಥ ರೆವಿನ್ಯೂ ಸೈಟ್ಸ್‌ಗಳ ಬಗ್ಗೆ ಈಗಾಗಲೇ ತಮಗೆ ಗೊತ್ತಿದೆ. ಕಳೆದ ೭–೮ ವರ್ಷಗಳಿಂದ ಸರ್ಕಾರದ ಅಪ್ಪಣೆ ಇಲ್ಲದೆ ಅನೇಕ ಜನ ರೆವಿನ್ಯೂ ಜಮೀನುಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿ ಮಾರಾಟ ಮಾಡಿರತಕ್ಕಂಥ ಪ್ರಸಂಗಗಳು ಇರುತ್ತವೆ. ಮನೆಗಳನ್ನು ಪಡೆದುಕೊಂಡವರು ಸರ್ಕಾರಕ್ಕೆ ಕೊಡಬೇಕಾದಂಥ ಹಣ ಕೊಟ್ಟಿಲ್ಲ. ಸರ್ಕಾರಕ್ಕೆ ಮೋಸ ಮಾಡಿದ್ದಾರೆ. ಲಕ್ಷಾಂತರ ಜನರು ಇದಕ್ಕೆ ಬಲಿಯಾಗಿದ್ದಾರೆ. ಈ ವಿಚಾರದಲ್ಲಿ ನಾನು ಹೋದ ವರ್ಷವೇ ಹೇಳಿದ್ದೆ. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿ ಆದಮೇಲೆ ಒಂಭತ್ತು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇನೆ ಅವರು ಯಾವ ಮಟ್ಟಕ್ಕೆ ಹೋಗಿದ್ದರು ಎಂದರೆ ಮನೆಯನ್ನು ಮಾರಾಟ ಮಾಡಬೇಕಾದರೆ ಮನೆಗೆ ಅಗತ್ಯವಾಗಿ ಬೇಕಾದ ನಂಬರನ್ನೂ ಕೂಡ ಕೊಟ್ಟಿದ್ದಾರೆ. ಎಲ್ಲ ಡಾಕ್ಯುಮೆಂಟ್ಸ್ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಕೂಡ ಮಾಡಿಸಿದ್ದಾರೆ. ಇವತ್ತು ನಗರಾಭಿವೃದ್ಧಿ ಮಂತ್ರಿಗಳು ಹೇಳಿದ್ದಾರೆ. ಹಣ ಕೊಟ್ಟು ಜಮೀನನ್ನು ಪಡೆದುಕೊಂಡು ಮನೆಗಳನ್ನು ಕಟ್ಟಿರತಕ್ಕಂಥವರ ಪರಿಸ್ಥಿತಿಯನ್ನು ನೋಡಬೇಕಾಗಿದೆ. ಅದರ ಬಗ್ಗೆ ಸರ್ಕಾರದವರು ಆಲೋಚನೆ ಮಾಡಬೇಕಾಗಿದೆ. ಅದರಲ್ಲೂ ಬೆಂಗಳೂರು ನಗರದಲ್ಲಿ ಮಾತ್ರವಲ್ಲ ಬೇರೆ ಬೇರೆ ಸಿಟಿಗಳಲ್ಲಿ ಈ ರೀತಿ ಇರತಕ್ಕಂಥ ಸಂದರ್ಭದಲ್ಲಿ ಸರ್ಕಾರದವರು ವಿಚಾರ ಮಾಡಿ ಮುಂದೆ ಈ ರೀತಿಯಾಗಬಾರದೆಂದು ಒಂದು ಸ್ಪೆಷಲ್ ಸೆಲ್ ಮಾಡಿದ್ದೇವೆ. ಈಗಾಗಲೇ ಸರ್ಕಾರದ ಆಜ್ಞೆಯೂ ಕೂಡ ಹೊರಟಿದೆ, ಅವರಿಗೆ ವಿಜಿಲೆನ್ಸ್ ಸೆಲ್ ಎಂದು ಹೇಳಿ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದೇವೆ. ರೆವಿನ್ಯೂ ಇಲಾಖೆಯವರು ಎಲ್ಲಿಗೆ ಬೇಕಾದರೂ ಹೋಗಿ ತಪಾಸಣೆ ಮಾಡಬಹುದು. ಅವರಿಗೆ ಒಂದು ವಾಹನವನ್ನು ಕೂಡ ಕೊಟ್ಟಿದ್ದೇವೆ ಅಧಿಕಾರಿ ವರ್ಗದವರನ್ನು ಕೊಟ್ಟಿದ್ದೇವೆ. ಅಧಿಕಾರವನ್ನು ಕೊಟ್ಟಿದ್ದೇವೆ. ರಾಜ್ಯದಲ್ಲಿ ಯಾವುದೇ ಭಾಗಕ್ಕೆ ಹೋಗಿ ಪರಿಶಿಲನೆ ಮಾಡತಕ್ಕಂಥ ಅಧಿಕಾರವನ್ನು ಕೊಟ್ಟಿದ್ದೇವೆ. ಸಬ್‌ರಿಜಿಸ್ಟ್ರಾರ್ ಆಫೀಸ್ ಇರಬಹುದು, ತಹಸೀಲ್ದಾರರ ಆಫೀಸ್ ಇರಬಹುದು ಸಂಬಂಧಪಟ್ಟ ರೆವಿನ್ಯೂ ಇಲಾಖೆಗೆ ಎಲ್ಲಿ ಬೇಕಾದರೂ ಹೋಗಿ ತಪಾಸಣೆ ಮಾಡತಕ್ಕಂಥ ಅಧಿಕಾರವನ್ನು ಈ ಸೆಲ್‌ಗೆ ಕೊಟ್ಟಿದ್ದೇವೆ. ಆಡಳಿತ

ಸಂಧಾರಣೆಯನ್ನು ಮಾಡತಕ್ಕಂಥ ಕಾಲದಲ್ಲಿ ಇದು ಒಂದು ದಿಟ್ಟವಾದ ಹೆಜ್ಜೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮನೆಗಳನ್ನು ಒಡೆಯುವುದಕ್ಕೆ ಅವರಿಗೆ ಅನುಕೂಲ ಮಾಡಿಕೊಟ್ಟಿರುತ್ತೀರೋ ? ಅಥವಾ ಮನೆಗಳನ್ನು ಕೆಡುವದ ಹಾಗೆ ನೋಡಿಕೊಳ್ಳಲು ಈ ವಿಜಿಲೆನ್ಸ್ ಸೆಲ್‌ಗೆ ಅಧಿಕಾರವನ್ನು ಕೊಟ್ಟಿರುತ್ತೀರೋ ? ಬಡವರು ಮನೆಗಳನ್ನು ಕಟ್ಟಿಕೊಂಡಿದ್ದರೆ ಅವರಿಗೆ ಅನುಕೂಲ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರಲ್ಲಿ ಅನೇಕ ಜನ ಶ್ರೀಮಂತರು ದೊಡ್ಡ ದೊಡ್ಡ ಶಾಪ್ಸ್‌ಗಳನ್ನು ಕಟ್ಟಿಕೊಂಡಿರುತ್ತಾರೆ. ಅದನ್ನು ಬಿಟ್ಟುಬಿಡಿ ಎಂದು ಹೇಳುತ್ತೀರಾ ?

ಶ್ರೀ ಎಂ. ರಾಮಪ್ಪ.—ಅವರು ಕೋರ್ಟಿಗೆ ಹೋಗುತ್ತಾರೆ, ಅದರ ಬಗ್ಗೆಯೂ ಚಿಂತನೆ ಮಾಡಬೇಕೆಂದು ಹೇಳುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ಕೊನೆಯದಾಗಿ ಬರಗಾಲದ ವಿಚಾರದಲ್ಲಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇದರ ಬಗ್ಗೆ ಇಲ್ಲಿ ಅನೇಕ ಸಲ ಚರ್ಚೆಯಾಗಿದೆ. ಅದಕ್ಕೆ ಉತ್ತರ ಸಹ ಕೊಟ್ಟಿದ್ದೇವೆ. ನಾವು ನೀವು ಕೂಡ ಬರಗಾಲದ ವಿಚಾರದಲ್ಲಿ ಅನೇಕ ಪ್ರಯತ್ನಗಳನ್ನು ಕೂಡ ಮಾಡಿದ್ದೇವೆ. ನಾನು ಪುನಃ ಹೆಚ್ಚು ವಿವರಣೆಗಳನ್ನು ಹೇಳುತ್ತಾ ಹೋಗುವುದಿಲ್ಲ. ಒಂದೆರಡು ವಿಚಾರಗಳನ್ನು ಮಾತ್ರ ಹೇಳಬಯಸುತ್ತೇನೆ. ಹಿಂದೆ ಈ ವಿಚಾರದಲ್ಲಿ ಹೇಳಿದ್ದೆ. ಮೆಮೋರ್‍ಯಾಂಡಂ ಕೊಟ್ಟಮೇಲೆ ಕೇಂದ್ರ ಅಧ್ಯಯನ ಸಮಿತಿಯವರು ಬಂದಮೇಲೆ ೫೩.೫೧ ಕೋಟಿ ರೂಪಾಯಿಗಳ ಸೀಲಿಂಗನ್ನು ಫಿಕ್ಸ್ ಮಾಡಿದ್ದಾರೆ. ೫೧.೩೧ ಕೋಟಿ ರೂಪಾಯಿಗಳಲ್ಲಿ ೪೨ ಕೋಟಿ ಮಾತ್ರ ಬಿಡುಗಡೆ ಮಾಡಿದ್ದಾರೆ. ಈ ವಿಚಾರ ಕೂಡ ನಾನು ಹೇಳಿದ್ದೇನೆ, ಅದಕ್ಕಿಂತ ಹೆಚ್ಚಾಗಿ ಎರಡು ವಿಚಾರಗಳಲ್ಲಿ ನನಗೆ ವಿಷಾದವಾಗುತ್ತವೆ. ಮೊದಲನೇ ವಿಚಾರವೇನೆಂದರೆ, ಗವರ್ನಮೆಂಟ್ ಆಫ್ ಇಂಡಿಯಾದ ಎಕನಾಮಿಕ್ ಸರ್ವೆ ಪಬ್ಲಿಶ್ ಆಗಿದೆ. ಕೇಂದ್ರ ಸರ್ಕಾರದ ಅಧ್ಯಯನ ತಂಡಗಳು ಬಂದಿದ್ದವು. ಅವರು ಭೀಕರ ಬರಗಾಲ ಕರ್ನಾಟಕದಲ್ಲಿ ಮತ್ತು ರಾಜಸ್ಥಾನದಲ್ಲಿದೆ ಎಂಬ ಮಾತನ್ನು ಹೇಳಿದ್ದಾರೆ. ಪ್ರಧಾನ ಮಂತ್ರಿಗಳು ಕೂಡ ಇಲ್ಲಿ ಬಂದಿದ್ದಾಗ ಹೇಳಿದ್ದಾರೆ. ಮಾನ್ಯ ಕೇಂದ್ರ ಕೃಷಿ ಮಂತ್ರಿಗಳು ಕೂಡ ಈ ಮಾತನ್ನು ಮೊನ್ನೆ ಮೊನ್ನೆ ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಆದರೆ ಎಕನಾಮಿಕ್ ಸರ್ವೆ ಆಫ್ ಇಂಡಿಯಾದವರು ಫೆಬ್ರುವರಿ ೨೭ರಂದು ಪಬ್ಲಿಶ್ ಮಾಡಿದ್ದು ನೋಡಿದಾಗ ಮಾತ್ರ ನನಗೆ ಬಹಳ ವಿಷಾದವಾಯಿತು. ಅವರು ಅದರಲ್ಲಿ ಕೊಟ್ಟಿರತಕ್ಕಂಥ ವರದಿಯಲ್ಲಿ ಎರಡು ರಾಜ್ಯಗಳಲ್ಲಿ ಮಾತ್ರ ತೀವ್ರ ಬರಗಾಲ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ಅದು ಗುಜರಾತ್ ಮತ್ತು ರಾಜಸ್ಥಾನ. ಇದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ನಾನು ಇದನ್ನು ಓದಿದ್ದೇನೆ. ಕರ್ನಾಟಕದ ಬಗ್ಗೆ ಉಲ್ಲೇಖ ಹೀಗಿದೆ.—

"Gujarat and Rajasthan had very poor rainfall. In Gujarat the starting of monsoon rainfall was delayed by 4 weeks from middle of July to the third week of August. However, there was good rainfall actually after 3rd week of August. The Monsoon started in Rajastan was very similar to that of and Gujarat Monsoon period ended with an overall deficit of 44% in the western and 37% in the eastern parts of Rajasthan. The area outside the Rajasthan, Gujarat, parts of Maharashtra, Andhra Pradesh and Karnataka generally received normal monsoon rainfall."

ಇದು ಅವರು ಕೊಟ್ಟಿರತಕ್ಕಂಥ ವರದಿ,

"Areas outside the Rajasthan, Gujarat, parts of Maharashtra, Andhra Pradesh and Karnataka generally received normal rainfall..."

ಎಂದು ಈ ವರದಿ ಏನಿದೆ, ಗವರ್ನಮೆಂಟ್ ಆಫ್ ಇಂಡಿಯಾ—ಎಕನಾಮಿಕ್ ಸರ್ವೆಯವರು ಕೊಟ್ಟಂಥ ವರದಿ ಸರಿಯಾಗಿಲ್ಲ ಎನ್ನುವ ಮಾತನ್ನು ಹೇಳುತ್ತಾ, ಇಂತಹ ವರದಿಯನ್ನು ಕೊಡುವುದಕ್ಕೆ ಮೊದಲು ಪರಿಸ್ಥಿತಿಯನ್ನು ನೋಡಿ. ಅರ್ಥ ಮಾಡಿಕೊಂಡು ನೋಡುವುದು ಸೂಕ್ತ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇನ್ನೊಂದು ವಿಚಾರವೆಂದರೆ,

ಈ ಮನೆಗೆ ನಾನು ತಿಳಿಸಿರುವಂತೆ, ೫೩.೩೧ ಕೋಟಿ ರೂಪಾಯಿ ಸೀಲಿಂಗ್ ಫಿಕ್ಸ್ ಮಾಡಿ ೪೨ ಕೋಟಿ ಹಣ ಕೊಟ್ಟಿದ್ದಾರೆ. ಇದೇ ರೀತಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿದಂಥ ಹಣ ೭೬.೧೩ ಕೋಟಿ. ಇದು ಬೇರೆ ಬೇರೆ ಜಿಲ್ಲೆಗಳಿಗೆ ಬೇರೆಬೇರೆ ಇಲಾಖೆಗಳಿಗೆ ಸ್ಕೇರ್‌ಸಿಟಿ ಹೆಡ್‌ನಲ್ಲಿ ಕೊಟ್ಟಿರು ವಂತಹ ಹಣ ಹೋದ ವರ್ಷದ್ದು ೫೦ ಕೋಟಿ. ಇದು ಖರ್ಚಾಗಿರುವ ಬಗ್ಗೆ ಲೆಕ್ಕ ಬಂದಿದೆ, ಕೇಂದ್ರ ಸರ್ಕಾರಕ್ಕೆ ಕೊಟ್ಟಿದೆ. ಇವತ್ತು ೪೨ ಕೋಟಿ ಬಂದರೆ, ರಾಜ್ಯ ಸರ್ಕಾರ ಸುಮಾರು ೩೪ ಕೋಟಿ ಹೆಚ್ಚಿಗೆ ಬಿಡುಗಡೆ ಮಾಡಿದೆ. ನಮ್ಮ ಪಂಚವಾರ್ಷಿಕ ಯೋಜನೆಗಳು, ನೀರಾವರಿ ಯೋಜನೆಗಳ ಹಣ ಬಿಟ್ಟು ೩೪ ಕೋಟಿ ಹೆಚ್ಚಿಗೆ ಬಿಡುಗಡೆ ಮಾಡಿದ್ದೇವೆ. ಆದರೆ ಇವತ್ತು ಇದುವರೆಗೂ ನಮಗೆ ಹೆಚ್ಚಿನ ಹಣ ಬಂದಿಲ್ಲ. ಸೀಲಿಂಗ್ ಬಗ್ಗೆ ಹೇಳಿದ್ದೇನೆ. ಎಂಪ್ಲಾಯ್‌ಮೆಂಟ್ ಜನರೇಶನ್‌ಗೆ ೨೬ ಕೋಟಿ ಸೀಲಿಂಗ್ ಮಾಡಿದ್ದಾರೆ. ನಾವು ೩೪ ಕೋಟಿ ಖರ್ಚು ಮಾಡಿದ್ದೇವೆ. ಅರ್ಬನ್ ಡೆವಲಪ್‌ಮೆಂಟ್‌ಗೆ ಒಂದು ಕೋಟಿ ಸೀಲಿಂಗ್ ಫಿಕ್ಸ್ ಮಾಡಿದ್ದರೆ ನಾವು ೩ ಕೋಟಿ ಖರ್ಚು ಮಾಡಿದ್ದೇವೆ. ಆದರೆ ಇದು ವರೆಗೂ ಕೇಂದ್ರದಿಂದ ಬರತಕ್ಕಂಥ ಹಣ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊನ್ನೆ ಪತ್ರಿಕೆಯಲ್ಲಿ ನೋಡಿದೆ. ಧಾರವಾಡದ ಲೋಕ ಸಭಾ ಸದಸ್ಯರು ೧೫ ಕೋಟಿ ಬಿಡುಗಡೆ ಮಾಡಿದ್ದಾರೆ ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಧಾರವಾಡದ ಪೇಪರ್‌ನಲ್ಲಿ ಮಾತ್ರ ಬಂದಿದೆ. ನಾನು ಸಂಬಂಧಪಟ್ಟವರನ್ನು ಸಂಪರ್ಕಿಸಿದಾಗ ಏನೂ ಇಲ್ಲವೆಂದು ತಿಳಿದುಬಂತು. ರಾಜ್ಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಹಾನುಭೂತಿ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಮೊನ್ನೆ ಮೊನ್ನೆ ಕೂಡ ಮಾನ್ಯ ಕೇಂದ್ರ ಕೃಷಿ ಮಂತ್ರಿಗಳು ಏನು ಹೇಳಿದ್ದಾರೆ, ಎಂದರೆ ರಾಜಸ್ಥಾನ ಮತ್ತು ಕರ್ನಾಟಕಕ್ಕೆ ವಿಶೇಷವಾಗಿ ಸಹಾಯ ಮಾಡುತ್ತೇವೆ ಎಂದು. ಆದರೆ ಹಣ ಮಾತ್ರ ಬರುತ್ತಲೇ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ೧೨-೧೨-೮೫ರಂದು ಸಹ ಪತ್ರ ಬರೆದಿದ್ದಾರೆ. ನಾನು ಕೂಡ ಡೆಲ್ಲಿಯಲ್ಲಿ ಮಾನ್ಯ ಕೃಷಿ ಮಂತ್ರಿಗಳನ್ನು ಭೇಟಿ ಮಾಡಿ ಮೆಮೊರೆಂಡಮ್ ಕೊಟ್ಟು ಸಹಾಯ ಮಾಡಬೇಕೆಂದು ಹೇಳಿದ್ದೇನೆ. ೧೮-೧೨-೮೫ರಂದು ಮಾನ್ಯ ಮುಖ್ಯ ಮಂತ್ರಿಯವರು ಎಂ.ಪಿ.ಗಳ ಸಭೆಕರೆದು ಈ ಬಗ್ಗೆ ಕೇಂದ್ರಕ್ಕೆ ಒತ್ತಾಯ ಮಾಡಲು ವಿವರಗಳನ್ನು ಕೊಟ್ಟಿದ್ದಾರೆ. ೬-೧-೮೬ರಂದು ಪ್ರಧಾನ ಮಂತ್ರಿಗಳು ಬೆಂಗಳೂರಿಗೆ ಬಂದಾಗ ಒಂದು ಮನವಿಯನ್ನು ಕೊಟ್ಟು, ಕೂಡಲೇ ೫೦ ಕೋಟಿ ಬಿಡುಗಡೆ ಮಾಡಬೇಕೆಂದು ಹೇಳಿದ್ದೇವೆ. ೧೬-೧-೮೬ರಂದು ನಾನು ಕೂಡ ಪುನಃ ಸಂಬಂಧಪಟ್ಟ ಮಂತ್ರಿಗಳನ್ನು ಭೇಟ್ಟಿಯಾಗಿ ಕೇಳಿ ಕೊಂಡಿದ್ದೇನೆ. ೧೧-೨-೮೬ರಂದು ಮುಖ್ಯ ಮಂತ್ರಿಗಳು ಮತ್ತೊಮ್ಮೆ ಡೆಲ್ಲಿಯಲ್ಲಿ ಪಾರ್ಲಿಮೆಂಟ್ ಸದಸ್ಯರ ಸಭೆಕರೆದು ಒತ್ತಾಯ ಮಾಡಿದ್ದಾರೆ. ೨೧-೨-[illegible]೬ರಂದು ಸೆಂಟ್ರಲ್ ಟೀಮ್‌ನವರು ಬಂದು ಹೋಗಿದ್ದಾರೆ ಕ[illegible]ದ ನಾಲ್ಕು ತಿಂಗಳಿಂದ ಮೂರನೇ ಮನವಿಯನ್ನು ಕೊಟ್ಟರೂ ಕೂಡ ಬಿಡುಗಡೆ ಆಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದಷ್ಟು ಬೇಗ ಕೇಂದ್ರ ಸರ್ಕಾರ ದವರು ಈ ಬಗ್ಗೆ ತ್ವರಿತ ನಿರ್ಣಯ ತೆಗೆದುಕೊಂಡು ಈ ವಾರದಲ್ಲಿ ಹಣ ಬಿಡುಗಡೆ ಮಾಡದೇ ಹೋದರೆ ತುಂಬಾ ಕಷ್ಟವಾಗುತ್ತದೆ. ರಾಜ್ಯ ಸರ್ಕಾರದ ಸಂಪನ್ಮೂಲಗಳು ತಮಗೇ ಗೊತ್ತಿದೆ. ಈಗಾಗಲೇ ೩೪ ಕೋಟಿಗೂ ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ. ಮಧ್ಯಮ ನೀರಾವರಿಗೆ ಚಿಕ್ಕ ನೀರಾವರಿಗ[illegible] ಐದೂವರೆ ಕೋಟಿಯನ್ನು ವಿಶೇಷವಾಗಿ ಕೊಟ್ಟಿದ್ದೇವೆ. ಇವತ್ತು ಸರ್ಕಾರಕ್ಕೆ ಇರತಕ್ಕಂಥ ಇತಿಮಿತಿಯಲ್ಲಿ ಬಹಳ ತ್ವರಿತಗತಿಯಿಂದ ಕೆಲಸ ಮಾಡುವ ಬಗ್ಗೆ ತೊಂದರೆಯಾಗುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಆದಷ್ಟು ಬೇಗ ಈ ಹಣ ನಮಗೆ ದೊರೆಯಬಹುದು ಎಂದು ನಾನು ಆಸೆ ಮಾಡುತ್ತೇನೆ.

ಇನ್ನು ಬರಗಾಲದ ವಿಚಾರದಲ್ಲಿ ಹೆಚ್ಚಿನ ಚರ್ಚೆ ಸಮಯದ ಅಭಾವದಿಂದ ಆಗಲಿಲ್ಲ. ಆದರೂ ಕೂಡ ಇಲ್ಲಿ ಮಾತನಾಡಿದಂಥ ಸದಸ್ಯರು ಸ್ವಲ್ಪದರಲ್ಲಿ ಹೇಳಿದ್ದಾರೆ. ಒಂದೆರಡು ವಿಷಯಗಳನ್ನು ನಾನು ಹೇಳ ಬಯಸುತ್ತೇನೆ. ಮೊದಲನೆಯದಾಗಿ ಸರ್ಕಾರ ಮೇವು ಬೆಳೆಯುವ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಲಾಗಿದೆ. ಈ ಆಜ್ಞೆ ಹೊರಟ ಮೇಲೆ ಅನೇಕ ಜನ ರೈತರು ಮುಂದೆ ಬಂದಿದ್ದಾರೆ. ಆದರೆ ಕೆಲವು ಮಂದಿ ರೈತರಿಗೆ ಈ ಬಗ್ಗೆ ಸಂಶಯ ಬಂದಿದೆ. ಅದೇನೆಂದರೆ ಸರ್ಕಾರ ಎಲ್ಲಾ ಮೇವನ್ನು ಕೊಳ್ಳುವುದರ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ ಎಂದು, ನಾನು ಸರ್ಕಾರದ ಪರವಾಗಿ ಸ್ಪಷ್ಟವಾಗಿ ಹೇಳಿಕೆಕೊಟ್ಟಿದ್ದೇನೆ, ಆದರೂ ಕೂಡ ಇನ್ನೊಮ್ಮೆ ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಯಾವುದೇ ರೈತ ಮೇವು ಬೆಳೆದಿದ್ದರೆ. ಸರ್ಕಾರ ನಿಗದಿ ಮಾಡಿದ ಬೆಲೆಗೆ ಮೇ ೩೧ರೊಳಗೆ ಖರೀದಿ ಮಾಡುತ್ತದೆ. ಈ ಮೇವನ್ನು ತೆಗೆದುಕೊಳ್ಳುವಂತಹ ಕೇಂದ್ರಗಳನ್ನು ಪ್ರತಿ ತಾಲ್ಲೂಕಿನಲ್ಲೂ ಏಪ್ರಿಲ್ ಒಂದರಿಂದ ಪ್ರಾರಂಭ ಮಾಡುತ್ತೇವೆ. ಅವರು ತಮ್ಮ ಸಮೀಪದ ಕೇಂದ್ರಕ್ಕೆ ಹೋಗಿ ಮೇವನ್ನು ಮಾರಾಟ ಮಾಡಬೇಕು, ಮಾರಾಟ ಮಾಡುವಾಗ ಏನು ಸಾಲವನ್ನು ಕೊಟ್ಟಿದ್ದೇವೆ. ಸಹಕಾರ ಸಂಘಗಳ ಮೂಲಕ, ಡಿ.ಸಿ.ಸಿ ಬ್ಯಾಂಕ್ ಇರಬಹುದು, ಅದನ್ನು ಕೊಡತಕ್ಕದ್ದು ಕೂಡ ಅವಶ್ಯಕವೆಂದು ಹೇಳುತ್ತೇನೆ. ಇನ್ನೊಂದು ನಿರ್ಣಯವನ್ನು ಸರ್ಕಾರ ಮಾಡಿದೆ. ಏನೆಂದರೆ, ಗೋಶಾಲೆಗಳಿಗೆ ದನಗಳು ಬರತಕ್ಕಂಥ ವಿಚಾರದಲ್ಲಿ ನಿರೀಕ್ಷೆಗಿಂತ ಹೆಚ್ಚು ದನಗಳೇನೂ ಬಂದಿಲ್ಲ ಕಾರಣ ಏನೆಂದರೆ, ಇವತ್ತು ರೈತ ಎಷ್ಟೇ ಕಷ್ಟಬಂದರೂ ತನ್ನ ಜಾನುವಾರು ಸಂಪತ್ತನ್ನು ಮನೆಯಲ್ಲೇ ಇಟ್ಟುಕೊಂಡು ರಕ್ಷಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ, ಇದಕ್ಕಾಗಿ ಸರ್ಕಾರ ಏನು ನಿರ್ಣಯ ಮಾಡಿದೆ ಎಂದರೆ, ಏಪ್ರಿಲ್ ತಿಂಗಳಿಂದ ಪ್ರತಿಯೊಂದು ತಾಲ್ಲೂಕಿನಲ್ಲಿ ಮೇವನ್ನು ಮಾರಾಟ ಮಾಡುವಂತಹ ಕೇಂದ್ರಗಳನ್ನು ಪ್ರಾರಂಭ ಮಾಡುತ್ತೇವೆ. ಇದನ್ನು ಅರ್ಧ ಬೆಲೆಗೆ ಎಲ್ಲಾ ರೈತರಿಗೂ ಕೊಡುತ್ತೇವೆ. ನಾವು ಮೇವು ಖರೀದಿ ಮಾಡತಕ್ಕಂಥ ರೇಟನ್ನು ಹೇಳಿದ್ದೇನೆ. ಈಗ ಹಸಿಮೇವು ೨೫೦ ರೂಪಾಯಿ ಟನ್‌ಗೆ ಮತ್ತು ಒಣ ಮೇವು ೫೦೦ ರೂಪಾಯಿ ಟನ್‌ಗೆ ಇದೆ. ಇದನ್ನು ಅರ್ಧ ಬೆಲೆಗೆ ಎಲ್ಲಾ ರೈತರಿಗೂ ಕೊಡುತ್ತೇವೆ. ಈ ವಿಂದು ವಿಶೇಷವಾದಂಥ ರಿಯಾಯಿತಿ ಲಾಭವನ್ನು ರೈತರು ಪಡೆದುಕೊಳ್ಳಬೇಕು. ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಯಾರು ತಮಗೆ ಎಷ್ಟು ಅವಶ್ಯಕತೆ ಇದೆಯೋ, ಅದಕ್ಕಿಂತ ಹೆಚ್ಚಿಗೆ ಕೊಳ್ಳತಕ್ಕ ಪ್ರಯತ್ನ ಮಾಡಬಾರದು. ಏಕೆಂದರೆ ಇದು ಎಲ್ಲರಿಗೂ ಮುಟ್ಟಬೇಕು. ಈ ದೃಷ್ಟಿಯಿಂದ ರಾಜ್ಯಮಟ್ಟದಲ್ಲಿ ಈಗಾಗಲೇ ೧೧,೪೮೫ ಹೆಕ್ಟೇರ್ ಪ್ರದೇಶದಲ್ಲಿ ಮೇವು ಬೆಳೆದಿದೆ.

ಇದರಲ್ಲಿ ಸರ್ಕಾರದ ವಲಯದಲ್ಲಿ ೩೨೦೦ ಹೆಕ್ಟೇರ್ ಪ್ರದೇಶದಲ್ಲಿ ಮೇವನ್ನು ಬೆಳೆದಿದ್ದರೆ, ರೈತರು ಸುಮಾರು ೮೪೮೩ ಹೆಕ್ಟೇರ್‌ಗಳನ್ನು ತಮ್ಮ ಸ್ವಂತ ಜಮೀನುಗಳಲ್ಲಿ ಮೇವನ್ನು ಬೆಳೆದಿದ್ದಾರೆ. ಈ ರೀತಿ ಬೆಳೆದಂಥ ರೈತರಿಂದ ನಾವು ಕೊಂಡು ಕೊಂಡು ಅಗತ್ಯವಿರುವವರೆಗೆ ಅರ್ಧ ಬೆಲೆಯಲ್ಲಿ ಮಾರಾಟ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಇದು ಏಪ್ರಿಲ್ ಒಂದರಿಂದ ಜಾರಿಗೆ ಬರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಯಾವ ರೀತಿ ತೂಕ ಮಾಡಿ ಕೊಡುತ್ತೀರಿ ?

ಶ್ರೀ ಎಸ್. ಆರ್ ಬೊಮ್ಮಾಯಿ.—ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ತೂಕದ ಯಂತ್ರಗಳಿರುತ್ತವೆ. ಅಲ್ಲಿಯೇ ಕೊಳ್ಳುತ್ತೇವೆ ಮತ್ತು ಮಾರಾಟ ಮಾಡುತ್ತೇವೆ. ತೂಕದ ಮಿಷಿನ್‌ಗಳಿಗೆ ತೊಂದರೆ ಏನೂ ಆಗುವುದಿಲ್ಲ. ಒಂದು ಸಾವಿರ ರೂಪಾಯಿಗಳಿಗೆ ಒಂದು ಮಿಷಿನ್ ಸಿಗುತ್ತದೆ. ಬರ ಪರಿಹಾರ ಕೆಲಸಗಳಿಗೆ ನಾವು ಈ ತಿಂಗಳು ಸಾಕಷ್ಟು ಹಣ ಬಿಡುಗಡೆ ಮಾಡಿದ್ದೇವೆ. ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಕುಡಿಯುವ ನೀರನ್ನು ಒದಗಿಸಲು, ಹಳ್ಳಿಗಳಲ್ಲಿ ಜನರಿಗೆ ಕೆಲಸ ಒದಗಿಸಲು ಸಾಕಷ್ಟು ಹಣ ಬಿಡುಗಡೆ ಮಾಡಿದ್ದೇವೆ, ಆದರೆ ನಾವು ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೋ ಮತ್ತು ಎಷ್ಟು ಜನರಿಗೆ ಕೆಲಸ ಒದಗಿಸಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಆಗಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ದಿಶೆಯಲ್ಲಿ ಸರ್ಕಾರ ತನ್ನ ಶಕ್ತಿಮೀರಿ ಪ್ರಯತ್ನ ಮಾಡಿದೆ. ಕೇಂದ್ರ ಸರ್ಕಾರದ ಸಹಾಯ ಬಂದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಎಲ್ಲ ಬೇಡಿಕೆಗಳನ್ನು ತಾವೆಲ್ಲರೂ ಒಮ್ಮತದಿಂದ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ನ್ಯಾಚುರಲ್ ಕೆಲಾಮಿಟೀಸ್ ಬಗ್ಗೆ ತಾವು ಏನೂ ಹೇಳಲಿಲ್ಲ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಈಗಿರುವಂತಹ ನಿಯಮಗಳನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಸುಮಾರು ೩೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪಂಜಾಬಿನಿಂದ ಮೇವನ್ನು ತರಿಸಿದಿರಿ. ಇದರ ಬೆಲೆ ಟನ್ ಒಂದಕ್ಕೆ ೧೧ ನೂರು ರೂಪಾಯಿಗಳಾಗುತ್ತದೆ. ಆದರೆ ನಮ್ಮಲ್ಲಿಯೇ ಟನ್ ಒಂದಕ್ಕೆ ೧೨ ನೂರು ರೂಪಾಯಿಗಳ ಬೆಲೆಯಲ್ಲಿ ಕಾನ್‌ಸನ್‌ಟ್ರೇಟೆಡ್ ಫೀಡ್ ಸಿಗುವಾಗ ಅಲ್ಲಿಂದ ತರಿಸುವ ಅಗತ್ಯವೇನಿತ್ತು ? ಮತ್ತೆ ಹರಿಜನರಿಗೆ ಸೇರಿದ ಜಮೀನನ್ನು ಬೇರೆಯವರು ಖರೀದಿ ಮಾಡಬಾರದೆಂದು ಕಾನೂನು ಇದ್ದರೂ ಸಹ, ಮಾಗಡಿ ತಾಲ್ಲೂಕ್‌ನಲ್ಲಿ ಮತ್ತು ಶಿರಹಟ್ಟಿ ತಾಲ್ಲೂಕ್‌ನಲ್ಲಿ ಅಲ್ಲಿನ ಸಬ್-ರಿಜಿಸ್ಟ್ರಾರ್ ಅವರುಗಳು ಮತ್ತು ಅಲ್ಲಿನ ರೆವಿನ್ಯೂ ಆಫೀಸರ್‌ಗಳು ಈ ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡಿರುವುದನ್ನು ತಮ್ಮ ಗಮನಕ್ಕೆ ಈಗಾಗಲೇ ತಂದಿದ್ದರೂ ಸಹ ಇನ್ನೂ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ? ಇಂತಹ ಅನೇಕ ಪ್ರಕರಣಗಳು ಈ ರಾಜ್ಯದಲ್ಲಿ ನಡೆದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ರೈಲ್ವೆ ಸಾಗಣಿಕೆ ಖರ್ಚನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳುತ್ತೇವೆಂದು ಹೇಳಿದ್ದರಿಂದ ನಾವು ಪಂಜಾಬಿನಿಂದ ಮೇವನ್ನು ತರಿಸಿದೆವು. ಆಗ ಅಲ್ಲಿಂದ ತರಿಸುವಂತಹ ಅವಶ್ಯಕತೆ ಇದ್ದ ಕಾರಣದಿಂದ ನಾವು ತರಿಸಿದೆವು. ಈಗ ನಮ್ಮ ರೈತರೇ ಮೇವನ್ನು ಬೆಳೆದಿರುವುದರಿಂದ ಹೊರಗಡೆಯಿಂದ ತರಿಸುವ ಅವಶ್ಯಕತೆ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ಐ. ಆರ್. ಡಿ. ಪಿ. ಮೂಲಕ ಪ್ರತಿ ಪಂಚಾಯತಿ ಮಟ್ಟದಲ್ಲಿ ಎಲ್ಲರಿಗೂ ಸಾಲ ಸಿಗುತ್ತಿಲ್ಲ. ಶೇಕಡಾ ೬೦ ರಷ್ಟು ಜನರಿಗೆ ಮಾತ್ರ ಸಿಗುತ್ತದೆ. ಈ ಸಾಲ ಕೊಡುವಾಗ ವಾಪಸ್ ಮಾಡುವ ಶಕ್ತಿ ಯಾರಿಗೆ ಇದೆ ಎಂಬುದನ್ನು ಬ್ಯಾಂಕ್‌ನವರು ನೋಡುತ್ತಾರೆ. ಇದರಿಂದ ಸಾಲ ಉಳ್ಳವರಿಗೇ ಸಿಗುತ್ತಿದೆ. ಇದು ತಪ್ಪಬೇಕು. ಮತ್ತೆ ೧೦ ಸಾವಿರ ರೂಪಾಯಿಗಳ ಸಾಲ ಕೇಳಿದರೆ ಕೇವಲ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ತಾವು ಪ್ಲಾನಿಂಗ್ ಮಿನಿಸ್ಟರ್ ಆದ ಕಾರಣ ಇದನ್ನೆಲ್ಲಾ ಸಂಬಂಧಪಟ್ಟವರಿಗೆ ಹೇಳಿ ಸರಿಪಡಿಸಬೇಕು.

ಇನ್ನು ಕೆರೆಗಳ ಕೆಲಸವನ್ನು ತೆಗೆದುಕೊಳ್ಳುವಲ್ಲಿ ಬೇರೆ ಜಿಲ್ಲೆಗಳಿಗೂ ಮತ್ತು ನಮ್ಮ ಕೋಲಾರ ಜಿಲ್ಲೆಗೂ ತಾರತಮ್ಯವಾಗಿದೆ. ನಮ್ಮ ಜಿಲ್ಲೆಯಲ್ಲಿ ಒಂದು ಕೆಲಸವನ್ನೂ ತೆಗೆದುಕೊಂಡಿಲ್ಲ. ಈ ತಾರತಮ್ಯವನ್ನು ಹೋಗಲಾಡಿಸಬೇಕು. ಈಗ ಶಾನುಭೋಗರಿಗೆ ಪೆನ್‌ಷನ್ ಕೊಡುತ್ತಿದ್ದೀರಿ. ಆದರೆ ಟೆಂಪರ್ವರಿ ಪಟೇಲರಿಗೆ ಕೊಡಬಾರದೆಂದು ನಿಯಮ ಮಾಡಿರುವುದು ಸರಿಯಲ್ಲ, ಇವರಿಗೂ ಸಹ ಪೆನ್‌ಷನ್ ಕೊಡಬೇಕು. ಅನುವಂಶಿಕವಾಗಿ ಅವರು ಈ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಇವರಿಗೂ ಪೆನ್‌ಷನ್ ಕೊಡಬೇಕು. ಮತ್ತೆ ಪಿ. ಎಲ್. ಡಿ. ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡ ಬಡವರು ಏನಿದ್ದಾರೆ, ಅವರ ಸಾಲವನ್ನು ವಾಪಸ್ ಮಾಡುವುದಾಗಿ ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಆದರೆ ಇದಕ್ಕೂ ಮೊದಲು ಕೆಲವರು ಸಾಲ ವಾಪಸ್ ಏನೂ ಮಾಡಿದ್ದಾರೆ, ಅದನ್ನು ಅವರವರಿಗೆ ವಾಪಸ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಐ. ಆರ್. ಡಿ. ಪಿ. ಲೋನ್ ಬಗ್ಗೆ ಏನು ಸಲಹೆ ಮಾಡಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇವೆ. ಮತ್ತೆ ಹಾಸನ ಜಿಲ್ಲೆಯಲ್ಲಿ ಕೆರೆಗಳ ಕೆಲಸ ಬೇರೆ ಜಿಲ್ಲೆಗಳಿಗಿಂತ ಜಾಸ್ತಿ ಆಗಿದೆ ಎಂದು ಮಾನ್ಯ ಖರ್ಗೆ ಅವರು ಉದಾಹರಣೆ ಕೊಟ್ಟು ಹೇಳಿದ್ದಾರೆ. ಇಲ್ಲಿ ಕೆಲಸಗಳ ಸಂಖ್ಯೆ ಆಧಾರದ ಮೇಲೆ ಇದನ್ನು ನೋಡಬಾರದು. ಏಕೆಂದರೆ, ಕೆಲವು ಜಿಲ್ಲೆಗಳಲ್ಲಿ ಅನೇಕ ರಸ್ತೆ ಕೆಲಸಗಳನ್ನು ಒಂದೊಂದು ಕಿಲೋಮೀಟರ್ ಲೆಕ್ಕದಲ್ಲಿ ತೆಗೆದುಕೊಂಡಿರುತ್ತಾರೆ ಇದರಿಂದ ಹೆಚ್ಚಿನ ಕೆಲಸಗಳಾಗಿವೆ ಎಂದು ತಮಗೆ ಕಾಣಬಹುದು. ಆದರೆ ಹಣದ ಲೆಕ್ಕವನ್ನು ಸಹ ತಾವು ನೋಡಬೇಕಾಗುತ್ತದೆ. ಫೆಬ್ರುವರಿ ಕೊನೆಯವರೆಗೆ ಕೋಲಾರಕ್ಕೆ ೨ ಕೋಟಿ ೮೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರೆ, ಗುಲ್ಬರ್ಗಕ್ಕೆ ೩ ಕೋಟಿ ೧೨ ಲಕ್ಷ ರೂಪಾಯಿಗಳನ್ನು, ಬಿಜಾಪುರ ಜಿಲ್ಲೆಗೆ ೩ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಆದರೆ ಹಾಸನ ಜಿಲ್ಲೆಗೆ ಬಿಡುಗಡೆ ಮಾಡಿರುವುದು ಕೇವಲ ೨ ಕೋಟಿ ೩೭ ಲಕ್ಷ ರೂಪಾಯಿಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಹಣ ಬಿಡುಗಡೆ ಮಾಡುವಾಗ ಆಯಾ ಜಿಲ್ಲೆಯ ಜನಸಂಖ್ಯೆ, ವಿಸ್ತೀರ್ಣ ಮುಂತಾದವನ್ನು ಸಹ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಣ ಬಿಡುಗಡೆ ಮಾಡುವಾಗ ನಾವು ತಾರತಮ್ಯ ಮಾಡುವುದಿಲ್ಲ. ಹಾಸನ ಜಿಲ್ಲೆಯಲ್ಲಿ ಹೆಚ್ಚಿನ ಕೆರೆಗಳ ಕೆಲಸವನ್ನು ಮೈನರ್ ಇರಿಗೇಷನ್ ಕೆಳಗೆ ತೆಗೆದುಕೊಂಡಿರಬಹುದು. ಆದರೆ ಸಾಯಿಲ್‌ಕನ್ಸರ್‌ವೇಷನ್ ಕೆಲಸ ಗುಲ್ಬರ್ಗ ಜಿಲ್ಲೆಯಲ್ಲಿ ಹೆಚ್ಚು ನಡೆದಿದೆ ಹಾಸನ ಜಿಲ್ಲೆಯಲ್ಲಿ ಆಗಿಲ್ಲ. ಅದೇ ರೀತಿ...........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ತಮ್ಮ ಗಮನಕ್ಕೆ ತಂದಿದ್ದೇವೆ,

ಶ್ರೀ ಎಸ್. ಆರ್. ಬೊಮ್ಮಾಯಿ,—ತಾರತಮ್ಯ ಆಗಿಲ್ಲ. ಮತ್ತೆ ಗ್ರಾಮ ಸಹಾಯಕರ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳಿದ್ದಾರೆ. ಇವರಿಗೆ ಮೊದಲು ೭೫ ರೂಪಾಯಿಗಳನ್ನು ಕೊಡಲಾಗುತ್ತಿತ್ತು. ಆದರೆ ಎರಡು ವರ್ಷಗಳ ಹಿಂದೆ ಇದನ್ನು ೧೨೦ ರೂಪಾಯಿಗಳಿಗೆ ಹೆಚ್ಚು ಮಾಡಲಾಯಿತು. ಈ ಸ್ಟೈಫಂಡ್ ಬರುವ ಏಪ್ರಿಲ್ ಒಂದರಿಂದ ೧೫೦ ರೂಪಾಯಿಗಳಿಗೆ ಹೆಚ್ಚು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಸ್ಟೈಫಂಡ್‌ನ್ನು ಮಿನಿಮಮ್ ವೇಜಸ್ ಲೆಕ್ಕದಲ್ಲಿಯಾದರೂ ಹೆಚ್ಚು ಮಾಡಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮನ್ನು ಕ್ಲಾಸ್-ಡಿ ನೌಕರರೆಂದು ಪರಿಗಣಿಸಬೇಕೆಂದು ಅವರ ಬೇಡಿಕೆಯಾಗಿದೆ. ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೆಂಗಳೂರು ಸಿಟಿ, ದಾವಣಗೆರೆ, ಕೆ. ಜಿ. ಎಫ್. ತುಮಕೂರು ಮುಂತಾದ ಕಡೆ ೭ ಕೋಟಿ ರೂಪಾಯಿಗಳವರೆಗೆ ಹಣ ಖರ್ಚು ಮಾಡಿ ಸರ್ವೆ ಮಾಡಿಸಲಾಗಿದೆ. ಆದರೆ ಅದು ಇನ್ನೂ ಜಾರಿಗೆ ಕೊಟ್ಟಿಲ್ಲ. ಮತ್ತೆ ಬರಬಂದ ಕಡೆ ಬೋರ್‌ವೆಲ್‌ಗಳನ್ನು ತೆಗೆಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೀರಿ. ನಾವು ಇಂತಿಂಥ ಕಡೆ ಬೋರ್‌ವೆಲ್‌ಗಳನ್ನು ತೆಗೆಸಬೇಕೆಂದು ಪಟ್ಟಿ ಕೊಟ್ಟಿದ್ದೇವೆ. ಆದರೆ ಅವರು ತಮ್ಮ ಬಳಿ ಹಣ ಇಲ್ಲವೆಂದು, ಸರ್ಕಾರದವರು ಹಣ ಕೊಟ್ಟರೆ ಕೆಲಸ ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಜಾಗ್ರತೆ ತಾವು ಹಣ ಒದಗಿಸಿಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬೋರ್‌ವೆಲ್ ವಿಷಯದಲ್ಲಿ ಕೇಂದ್ರ ಸರ್ಕಾರದವರು ನಿಗದಿ ಮಾಡಿರುವುದು ೬ ಕೋಟಿ ರೂಪಾಯಿಗಳು ಮಾತ್ರ. ನಾವು ಖರ್ಚು ಮಾಡಿರುವುದು ೧೪ ಕೋಟಿ ರೂಪಾಯಿಗಳು. ಮತ್ತೆ ಇನ್ನಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಅದರ ಬಗ್ಗೆ ಸೂಚನೆಗಳನ್ನು ಜಿಲ್ಲಾಧಿಕಾರಿಯವರಿಗೂ ಕೊಟ್ಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೆಂಗಳೂರು ಸಿಟಿ ಸರ್ವೆ ಬಗ್ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಅದರ ಬಗ್ಗೆ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ನಾನು ನೋಡುತ್ತೇನೆ.

ಶ್ರೀ ಯು. ಭೂಪತಿ.—ನ್ಯಾಚುರಲ್ ಕೆಲಾಮಿಟಿ ಬಗ್ಗೆ ಏನೂ ಕೆಲಸವನ್ನು ಮಾಡಿಲ್ಲ. ಯಾವುದಾದರೂ ಪ್ರದೇಶದಲ್ಲಿ ಗುಡಿಸಲುಗಳು ಸುಟ್ಟರೆ, ಆ ಗುಡಿಸಲು ನಿವಾಸಿಗಳಿಗೆ ಒಂದು ಪೈಸೆಯೂ ಸಹ ಪರಿಹಾರವನ್ನು ಕೊಟ್ಟಿಲ್ಲ. ಇನ್ನು ವಿಲೇಜ್ ಅಕೌಂಟೆಂಟ್‌ಗಳು ತಿಂಗಳಲ್ಲಿ ೩-೪ ಮೀಟಿಂಗ್‌ಗಳಿಗೆ ಅಟೆಂಡ್ ಮಾಡುತ್ತಾರೆ, ಆದರೆ ಅವರಿಗೆ ಟಿ.ಎ.ಯನ್ನು ಕೊಡುವುದಿಲ್ಲ. ತಾಲ್ಲೂಕು ಕಛೇರಿಗಳಿಗೆ ಸರಿಯಾದ ಪ್ರಮಾಣದಲ್ಲಿ ಸ್ಟೇಷನರಿಗಳನ್ನು ಸಪ್ಲೈ ಮಾಡುತ್ತಿಲ್ಲ. ತಾಲ್ಲೂಕು ಕಛೇರಿಗಳಿಗೆ ರೈತರುಗಳು ಹೋದರೆ, ರೈತರುಗಳಿಗೇ ಒಂದು ಪೇಪರನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಸರಿಯಾದ ಪ್ರಮಾಣದಲ್ಲಿ ಸ್ಟೇಷನರಿಯನ್ನು ಬಿಡುಗಡೆ ಮಾಡುವುದಕ್ಕೆ ತಾವು ಏರ್ಪಾಡು ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿಲೇಜ್ ಅಕೌಂಟೆಂಟ್‌ಗಳು ಮೀಟಿಂಗ್‌ಗೆ ಹೋದರೆ ಅವರುಗಳಿಗೆ ಟಿ.ಎ.ಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಅದರ ಬಗ್ಗೆ ಸರ್ಕಾರ ಈಗಾಗಲೇ ನಿರ್ಣಯ ಮಾಡಿದೆ, ಹಾಗು ಹಣವನ್ನು ಒದಗಿಸುತ್ತೇವೆ. ನ್ಯಾಚುರಲ್ ಕೆಲಾಮಿಟಿ ಬಗ್ಗೆ ಹೇಳಿದ್ದೀರಿ, ನಾವು ಪರಿಹಾರವನ್ನು ಕೊಡುವುದಕ್ಕೆ ಡಿ.ಸಿ. ಯವರ ಹತ್ತಿರ ಹಣವನ್ನು ಕೊಟ್ಟಿರುತ್ತೇವೆ. ಅವರು ಅದರ ಬಗ್ಗೆ ಸೂಕ್ತವಾಗಿ ಪರಿಹಾರವನ್ನು ಕೊಡುತ್ತಾರೆ.

ಶ್ರೀ ಯು. ಭೂಪತಿ.—ನಮ್ಮ ಸಂಡೂರು ತಾಲ್ಲೂಕಿನಲ್ಲಿ ಸುಟ್ಟು ಹೋದ ಗುಡಿಸಲು ನಿವಾಸಿಗಳಿಗೆ ಒಂದು ಪೈಸೆ ಪರಿಹಾರವನ್ನೂ ಕೊಟ್ಟಿಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಅದನ್ನು ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ೩-೪ ವಿಷಯಗಳ ಬಗ್ಗೆ ಮಾನ್ಯ ಮಂತ್ರಿಯವರಿಗೆ ತಿಳಿಸಿದ್ದೆ, ಆದರೂ ಅದರ ಕಡೆ ಗಮನವನ್ನು ಮಾನ್ಯ ಸಚಿವರು ಕೊಟ್ಟಿಲ್ಲ. ತೋಟಿ ತಳವಾರರಿಗೆ ನಾವು ಪೆನ್‌ಷನ್ ಕೊಡಬೇಕೆಂದು ನಮ್ಮ ಸರ್ಕಾರ ಮೊದಲೇ ಆಜ್ಞೆ ಮಾಡಿತ್ತು, ಅನೇಕ ತಾಲ್ಲೂಕುಗಳಲ್ಲಿ ಈ ತೋಟಿ ತಳವಾರರಿಗೆ ಪೆನ್‌ಷನ್ ಅನ್ನು ಕೊಟ್ಟಿಲ್ಲ. ಅಧಿಕಾರವನ್ನು ಇದರ ಬಗ್ಗೆ ಕೇಳಿದರೆ, ನಮಗೆ ಹಣವನ್ನು ಸರ್ಕಾರವು ಮಂಜೂರು ಮಾಡಿಲ್ಲವೆಂದು ಹೇಳುತ್ತಾರೆ, ಇದರ ಬಗ್ಗೆ ಮಾನ್ಯ ಮಂತ್ರಿಯವರಿಗೆ ತಿಳಿಸಿದ್ದರೂ ನನಗೆ ಇನ್ನೂ ಉತ್ತರ ಬಂದಿಲ್ಲ. ಇನ್ನು ಎರಡನೆಯ ಪ್ರಶ್ನೆ ಏನೆಂದರೆ, ಡಿಸ್ಟ್ರಿಕ್ಟ್ ರೀ-ಆರ್ಗನೈಸೇಷನ್ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದೀರಿ, ಅದರ ಬಗ್ಗೆ ಏನಾಯಿತು ಹಾಗೆ ಅದರ ಕೆಲಸ ಕಾರ್ಯಗಳು ಎಲ್ಲಿಯವರೆಗೆ ಬಂದಿವೆ ಎನ್ನುವುದು ನಮಗೆ ಗೊತ್ತಿಲ್ಲ. ಏಕೆಂದರೆ, ಡಿಸ್ಟ್ರಿಕ್ಟ್ ರೀ-ಆರ್ಗನೈಸೇಷನ್ ಕಮಿಟಿಯವರು ಕೊಟ್ಟ ವರದಿ ಆಧಾರದ ಮೇಲೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ತಾಲ್ಲೂಕು ರೀ-ಆರ್ಗನೈಸೇಷನ್ ಕಮಿಟಿಯವರು ಯಾವಾಗ ಸರ್ಕಾರಕ್ಕೆ ರಿಪೋರ್ಟನ್ನು ಕೊಡುತ್ತಾರೆ ಎನ್ನುವ ಬಗ್ಗೆಯೂ ಹೇಳಬೇಕು. ಇನ್ನು ನಾಡಾ ಸಿಸ್ಟಮ್ ಬಗ್ಗೆ ಹೇಳಬೇಕಾದರೆ ಅವುಗಳನ್ನು ತಾವುಗಳು ಹೆಚ್ಚು ಹೆಚ್ಚು ಮಾಡಲಿಲ್ಲ. ಪ್ರತಿಯೊಂದು ಜಿಲ್ಲೆಯಲ್ಲಿ ರೆವಿನ್ಯೂ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಮಾಡುತ್ತೀರೋ ಅಥವಾ ಹಂತ ಹಂತವಾಗಿ ಎಲ್ಲಾ ಕಡೆಗಳಲ್ಲೂ ಈ ನಾಡಾ ಸಿಸ್ಟಮ್‌ನ್ನು ಜಾರಿ ಮಾಡುತ್ತೀರೋ? ಒಂದು ತಾಲ್ಲೂಕಿಗೆ ೪ ನಾಡಾ ಸಿಸ್ಟಮ್‌ಗಳು ಎಂದರೆ ೧೭೫ × ೪ = ಅಂದರೆ ೭೦೦ ನಾಡಾ ಸೆಂಟರ್‌ಗಳು ಆಗುತ್ತವೆ. ಇವುಗಳನ್ನು ಜಾರಿಗೆ ಮಾಡುವಲ್ಲಿ ಒಂದು ಸರಿಯಾದ ಸಿಸ್ಟಮ್‌ಗಳನ್ನು ಹಾಕಿ ಇನ್ನು ೫-೬ ವರ್ಷದೊಳಗೆ ಮಾಡಿ ಮುಗಿಸಬೇಕೆಂದು ಹೇಳುತ್ತೇನೆ. ಇನ್ನು ಮೂರನೆಯದು ಎಂದರೆ, ಪಾಸ್ ಬುಕ್‌ಗಳನ್ನು ರೈತರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಇದನ್ನು ಹೇಳಿ ಒಂದು ವರ್ಷವೇ ಆಗಿಹೋಯಿತು. ಅದರ ಬಗ್ಗೆ ನಾನು ಹೇಳುವುದು ಏನೆಂದರೆ, ಆದಷ್ಟು ಬೇಗ ಈ ಪಾಸ್ ಬುಕ್‌ಗಳನ್ನು ಕೊಡುವುದಕ್ಕೆ ಏರ್ಪಾಡನ್ನು ಮಾಡಬೇಕು. ಇನ್ನು ಕೃಷ್ಣ ಬೇಸಿನ್‌ಗೆ ಮುಂದಿನ ವರ್ಷ ಹೆಚ್ಚು ಹಣವನ್ನು ಕೊಡುತ್ತೇವೆಂದು ಹೇಳಿದ್ದೀರಿ, ಆದರೆ ಈ ವರ್ಷ ಮಾತ್ರ ಕಡಿಮೆ ಹಣವನ್ನು ಕೊಟ್ಟಿದ್ದೀರಿ, ಈ ರೀತಿ ಮಾಡಿರುವುದು ಸರಿಯಲ್ಲ. ಕೃಷ್ಣಾ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಂಧ್ರ ಪ್ರದೇಶದವರು ಮತ್ತು ತಮಿಳುನಾಡಿನವರು ಈಗಾಗಲೇ ಯೋಜನೆಗಳನ್ನು ಹಾಕಿ ಕೆಲಸಗಳನ್ನು ಪ್ರಾರಂಭ ಮಾಡಿಬಿಟ್ಟಿದ್ದಾರೆ. ಆದರೆ ನಮ್ಮ ಸರ್ಕಾರ ಮಾತ್ರ ಅತ್ತಕಡೆ ಗಮನವನ್ನೇ ಕೊಡುತ್ತಿಲ್ಲ. ಇದರ ಬಗ್ಗೆ ಏನು ಮಾಡುತ್ತೀರಿ. ಹೆಚ್ಚಿಗೆ ಹಣವನ್ನು ಇಡುತ್ತೀರೋ ಇಲ್ಲವೋ ಎಂಬುದನ್ನು ತಿಳಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಡಾ ಬಗ್ಗೆ ಈಗಾಗಲೇ ಹೇಳಿದ್ದೇವೆ. ಮುಂದಿನ ವರ್ಷ ಪ್ರತಿಯೊಂದು ರೆವಿನ್ಯೂ ಸಬ್ ಡಿವಿಷನ್‌ನಲ್ಲಿ ಒಂದೊಂದು ನಾಡಾ ಕೇಂದ್ರವನ್ನು ಪ್ರಾರಂಭ ಮಾಡುತ್ತೇವೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅದನ್ನು ಮಾಡುತ್ತೇವೆ. ಡಿಸ್ಟ್ರಿಕ್ಟ್ ರೀ-ಆರ್ಗನೈಸೇಷನ್ ಬಗ್ಗೆ ಈಗಾಗಲೇ ಒಂದು ಕಮಿಟಿಯನ್ನು ಮಾಡಿದ್ದೇವೆ. ಇನ್ನು ೨ ತಿಂಗಳೊಳಗೆ ರಿಪೋರ್ಟನ್ನು ಕೊಡಿ ಎಂದು ಕೇಳಿದ್ದೇವೆ. ರಿಪೋರ್ಟ್ ಬಂದ ಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇನ್ನೊಂದು ವಿಚಾರ, ಮಾನ್ಯ ಮುಖ್ಯಮಂತ್ರಿಯವರು ಕೃಷ್ಣ ಮತ್ತು ಕಾವೇರಿ ಈ ಎರಡು ನದಿಗಳಿಂದ ನಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡುವ ಬಗ್ಗೆ ಯಾವುದೇ ರೀತಿಯಲ್ಲೂ ಹಿಂದೆ ಬೀಳುವುದಿಲ್ಲವೆಂದು ಹೇಳಿದ್ದಾರೆ. ಈ ವರ್ಷ ಕಾವೇರಿ ಬೇಸಿನ್ ಳನೇ ಯೋಜನೆಗೆ ೧೧೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕೃಷ್ಣ ಬೇಸಿನ್‌ಗೆ ಮುಂದಿನ ವರ್ಷ ಹೆಚ್ಚು ಹಣವನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ. ಅಪ್ಪರ್ ಕೃಷ್ಣ, ಮಲಪ್ರಭಾ, ಘಟಪ್ರಭಾ ಈ ಎಲ್ಲಾ ಯೋಜನೆಗಳಿಗೂ ಹೆಚ್ಚು ಹಣವನ್ನು ಕೊಡುತ್ತೇವೆ.

ಶ್ರೀ ಹೆಚ್. ಸಿ. ಮಹದೇವಪ್ಪ.—ಮಾನ್ಯ ಅಧ್ಯಕ್ಷರೇ, ಗ್ರಾಮಸೇವಕರು, ಮತ್ತು ಗ್ರಾಮಲೆಕ್ಕಿಗರು ತಮ್ಮ ತಮ್ಮ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಇರುವಂತಹ ವ್ಯವಸ್ಥೆಯನ್ನು ಮಾಡಬೇಕು ಹಾಗೂ ಪ್ರತಿಯೊಂದು ಗ್ರಾಮದಲ್ಲೂ ಸರ್‌ಪ್ಲಸ್ ಲ್ಯಾಂಡ್‌ಗಳು ಬಂಜರಾಗಿ ಬಿದ್ದಿವೆ, ಅವುಗಳನ್ನು ಬಾಂಡೆಡ್ ಲೇಬರರ್‌ಗಳಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಪ್ರತಿಯೊಬ್ಬ ರೈತನಿಗೂ ಆಯಾ ವರ್ಷದ ಪಹಣಿಯನ್ನು ಆತನ ಮನೆಯ ಬಾಗಿಲಿಗೆ ಹೋಗಿ ಕೊಡುವಂತಹ ವ್ಯವಸ್ಥೆಯನ್ನು ಮಾಡುವ

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲೆಲ್ಲಿ ಬಾಂಡೆಡ್ ಲೇಬರರ್ಸ್‌ಗಳು ಇದ್ದಾರೋ ಅವರುಗಳಿಗೆ ಈ ಸರಪ್ಲಸ್ ಲ್ಯಾಂಡ್‌ಗಳನ್ನು ಕೊಡುವ ಬಗ್ಗೆ ವಿಚಾರ ಮಾಡುತ್ತೇನೆ, ಇನ್ನು ಪಹಣಿಗಳನ್ನು ಕೊಡುವ ಬಗ್ಗೆಯೂ ವಿಚಾರ ಮಾಡುತ್ತೇನೆ. ಮಾನ್ಯ ಖರ್ಗೆಯವರು ರೈತರುಗಳಿಗೆ ಪಾಸ್ ಬುಕ್‌ಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಪಾಸ್ ಬುಕ್‌ಗಳನ್ನು ಕೊಡುವ ಬಗ್ಗೆ ಒಂದು ಮಸೂದೆಯನ್ನು ಮಾಡಿ ರಾಷ್ಟ್ರಪತಿಯವರ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದೇವೆ. ಅದು ಬಂದ ತಕ್ಷಣ ಪಾಸ್ ಬುಕ್‌ಸ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಯೋಜನೆ ಇಲಾಖೆ ಬಗ್ಗೆ ಮಾತನಾಡಬೇಕೆಂದು ಇದ್ದೆ. ಆದರೆ ಸನ್ಮಾನ್ಯ ಮುಖ್ಯ ಮಂತ್ರಿಯವರ ಇಲಾಖೆ ಮೇಲೆ ನಾನು ಆಗಲೇ ಸಾಕಷ್ಟು ಮಾತನಾಡಿದ್ದೇನೆ, ತಾವು ಈಗ ಈ ಇಲಾಖೆ ಮೇಲೆ ಕೊಟ್ಟಿರುವ ಅಂಕಿ ಸಂಖ್ಯೆಗಳು ಏನು ಇವೆ, ಇವುಗಳು ಎಕನಾಮಿಕ್ ಸರ್ವೆ ಪ್ರಕಾರ ಸರಿಯಿಲ್ಲವೆಂದು ನನಗನ್ನಿಸುತ್ತದೆ, ೧೯೮೦–೮೧ರಲ್ಲಿ ಡೆವಲಪ್‌ಮೆಂಟ್ ಮತ್ತು ನಾನ್ ಡೆವೆಲಪ್‌ಮೆಂಟಿಗೆ ಖರ್ಚು ಮಾಡಿರುವುದು ೬೮೭ ಕೋಟಿ ರೂಪಾಯಿಂಗಳಾದರೆ, ೧೯೮೧–೮೨ರಲ್ಲಿ ೭೧೭ ಕೋಟಿ ರೂಪಾಯಿಗಳಾಗಿದೆ ೧೯೮೨–೮೩ರಲ್ಲಿ ೭೦೦ ಕೋಟಿಗೆ ಇಳಿದಿದೆ. ಆಮೇಲೆ ೧೯೮೪–೮೫ರಲ್ಲಿ ೭೨೯ ಕೋಟಿ ರೂಪಾಯಿ ಆಗಿದೆ. ನಾನು ಈಗ ಹೇಳಿರುವ ಅಂಕಿ ಸಂಖ್ಯೆಗಳೆಲ್ಲಾ ನೀವು ಕೊಟ್ಟಿರುವ ವರದಿಯಲ್ಲೇ ಇದೆ, ಇನ್ನು ಪರ್ ಕ್ಯಾಪಿಟಾ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ೩೪೩ ಇದೆ, ಪರ್‌ಸೆಂಟೇಜ್ ಆಫ್ ಇರಿಗೇಷನ್ ೬೫೩ ಇದೆ.

ಆಮೇಲೆ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ as percentage of total expenditure ಕೂಡಾ ಕಡಿಮೆಯಾಗಿದೆ. ೧೯೮೩–೮೪ ರಲ್ಲಿ ೬೯ ಪರ್ಸೆಂಟ್, ೧೯೮೪–೮೫ ರಲ್ಲಿ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ಶೇಕಡಾ ೬೫.೩೧ ಇದೆ. ಆದುದರಿಂದ ಡೆವಲಪ್‌ಮೆಂಟ್ ಎಕ್ಸ್‌ಪೇಂಡಿಚರ್‌ನ ಫಿಗರ್ಸ್‌ನ್ನು ಕೂಡಾ ತಾವು ನೋಡಿದರೆ ಅದು ಕಡಿಮೆಯಾಗಿದೆ. I don't agree with these figures. They have come down. ಕನ್ನಡಿ ತಮ್ಮ ಮುಂದೆ ಇದೆ. ಅದನ್ನು ತಾವು ನೋಡಿ. That means non-development expenditure has gone up.

ಇನ್ನು ಇರಿಗೇಶನ್ ಪ್ರಕಾರ ಕೂಡಾ ಪೇಜ್ ೯೨ ರಲ್ಲಿ ನೋಡಿದರೆ ಟೋಟಲ್ ೧೦.೨, ಇದರ ಪ್ರಕಾರ ಅಪ್ರಿಷಿಯಬಲ್ ಬದಲಾವಣೆಗಳು ಏನೂ ಇಲ್ಲ. Total area under irrigation ೧೯೮೨–೮೩ ರಲ್ಲಿ ೨೩.೫೬ ಲಕ್ಷ ಹೆಕ್ಟೇರ್‌ಗಳು, ೧೯೮೩–೮೪ ರಲ್ಲಿ ೨೪.೨೪ ಹೆಕ್ಟೇರ್ಸ್ ೧೯೮೪–೮೫ ರಲ್ಲಿ ೨೪.೯೪ ಹೆಕ್ಟೇರ್ಸ್. ಈಗ ಯಾವುದು ಟೇಕ್ ಆಫ್ ಆಗಬೇಕು particularly at the end of 6th Plan and at the beginning of the 7th Plan ಅದು ಕಾಣುತ್ತಾ ಇಲ್ಲ. ಆದುದರಿಂದ ಫೈನಲ್ ಟೇಕ್ ಆಫ್ ಪೀರಿಯಡ್‌ನಲ್ಲಿ ತಾವು ಫೈಲ್ ಆಗಿದ್ದೀರಿ. ಇನ್ನು ಪವರ್‌ನಲ್ಲಿಕೂಡಾ ೯೪ನೇ ಪೇಜನ್ನು ನೋಡಿದರೆ, ೧೯೮೦–೮೧ ರಲ್ಲಿ ೬೦.೬೮ ಕೋಟಿ, ೧೯೮೧–೮೨ ರಲ್ಲಿ ೮೧.೪೫ ಕೋಟಿ, ೧೯೮೨–೮೩ ರಲ್ಲಿ ೧೦೨.೫೩ ಕೋಟಿಇದ್ದರೆ ೧೯೮೩–೮೪ ರಲ್ಲಿ ೧೧೨ ಕೋಟಿ, ೧೯೮೪–೮೫ ರಲ್ಲಿ ೯೬ ಕೋಟಿಗಳು. ಇನ್‌ವೆಸ್ಟ್‌ಮೆಂಟ್ ಕಡಿಮೆ ಆಗಿದೆ, ನಿಮ್ಮ ಎಕನಾಮಿಕಲ್ ಸರ್ವೆನಲ್ಲಿ ೧೯೮೫–೮೬ ರಲ್ಲಿ ೮೬.೦೫ ಇದ್ದು ಇನ್ನೂ ಕಡಿಮೆಯಾಗಿದೆ. ತಮ್ಮ ಅಂಕಿಅಂಶಗಳನ್ನು ನೋಡಿದರೂ ಕೂಡಾ ಅದರಿಂದ ಏನೂ ಹೆಚ್ಚಿಗೆ ಬದಲಾವಣೆಗಳು ಕಾಣುವುದಿಲ್ಲ. ಇನ್ನು ಪರ್‌ಕ್ಯಾಪಿಟಾ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್, ನಿಮ್ಮ ೨೨ನೇ ಪೇಜ್‌ನಲ್ಲಿ ತಮ್ಮದೇಹೇಳಿಕೆ ಇದೆ. The growth rate has come down to 6.5% ಎಂದಿದೆ. ಅದರಲ್ಲಿಯೂ ಕೂಡಾ ಕಡಿಮೆಯಾಗಿದೆ. ಈಗ ಮತ್ತೊಂದು I have got tables. ಸಾಕಷ್ಟು ಚರ್ಚೆ ಆಗುತ್ತಾ ಇದೆ. ನನ್ನ ಹೇಳಿಕೆ ಕೂಡಾ ಅಂಕಿ ಅಂಶಗಳ ಆಧಾರದ ಮೇಲೆಯೇ ಇದೆ. I have got my tables prepared. ೬ನೇ ಮತ್ತು ೭ನೇ ಪ್ಲಾನ್ ಕ್ಯಾಪಿಟಲ್ ಔಟ್‌ಲೇ ನನ್ನ ಹತ್ತಿರ ಇದೆ. ಅದರ ಬಗ್ಗೆ ಬೇಕಾದರೆ ಅರ್ಧ ಗಂಟೆ ಚರ್ಚೆ ಮಾಡೋಣ. ಈ ಕುರಿತು ಬೇರೆ ಬೇರೆ ವಿಷಯಗಳು ಬರುತ್ತಿವೆ, ಅದಕ್ಕೆ ತಾವು ಒಂದು ಹೇಳುವುದು, ನಾವು ಒಂದು ಹೇಳುವುದು ಹೀಗಾಗಿ ಅದು ಅಲ್ಲಿಗೆ ನಿಲ್ಲುವುದು ಬೇಡ. A clear picture should emerge. I am prepared to submit all my tables, I have worked out. You should also furnish the tables o me and let us exchange notes and have a discussion on the floor of

the House. Let a clear picture come up so that you will also realise where we are. ಅದರಿಂದ ತಾವು ಏನು ಡೆವಲಪ್‌ಮೆಂಟ್ ಫಿಸಿಕಲ್ ಟಾರ್ಗೆಟ್ ಹೆಚ್ಚಿಗೆ ಆಗಿದೆ ಎಂದು ಹೇಳುತ್ತೀರಿ. ಅದಕ್ಕೆ ನಾವು ಪೂರ್ತಿಯಾದ ವಿವರ ಇಲ್ಲದೆ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ.

ಭೂಮಸೂದೆಯ ಬಗ್ಗೆ ಪಿ. ಎ. ಸಿ. ಯವರು ಒಂದು ವರದಿಯನ್ನು ಕೊಟ್ಟಿದ್ದಾರೆ, ಅದು ತಮಗೆ ಗೊತ್ತಿದೆ. ಪ್ರತಿವರ್ಷವೂ ಕೂಡಾ ೯–೧೦ ಕೋಟಿ ರೂಪಾಯಿಗಳು ಸರಾಸರಿ ಪರಿಹಾರದಲ್ಲಿ ಲ್ಯಾಪ್ಸ್ ಆಗುತ್ತಾ ಇದೆ. ಅಧಿಕಾರಿಗಳು ಭೂಮಾಲೀಕರು ಬರುವುದಿಲ್ಲ ಎಂದು ಹೇಳುತ್ತಾರೆ. ಈಗ ಕೊಡತಕ್ಕಂತಹ ೨ ಸಾವಿರ ರೂ.ಗಳನ್ನು ಕಡಿಮೆ ಅಂದರೆ ೧೦ ಸಾವಿರ ರೂ.ಗಳಿಗೆ ಏರಿಸಿದರೆ ಒಳ್ಳೆಯದು, ಏಕೆಂದರೆ ಪ್ರತಿವರ್ಷವೂ ಅಲಾಟ್ ಆದದ್ದು ಲ್ಯಾಪ್ಸ್ ಆಗುತ್ತದೆ. ಇದರ ಬದಲು ಯಾರ್‍ಯಾರು ಭೂಮಿಯನ್ನು ಕಳೆದುಕೊಂಡಿದ್ದಾರೆ ಅವರಿಗೆ ೨ ಸಾವಿರಕ್ಕೆ ಬದಲಾಗಿ ೧೦ ಸಾವಿರ ರೂ.ಗಳನ್ನು ಕೊಡುತ್ತಿದ್ದರೆ ಅದರಿಂದ ನಿಮ್ಮ ಬಜೆಟ್ ಯುಟಿಲೈಸೇಷನ್ನೂ ಆಗುತ್ತದೆ. ಭೂಮಾಲೀಕರಿಗೂ ಒಂದು ಪರಿಹಾರ ಸಿಕ್ಕಹಾಗೆ ಆಗುತ್ತದೆ. ಅದಕ್ಕಾಗಿ ಈ ವಿಚಾರದ ಬಗ್ಗೆ ಪಿ. ಎ. ಸಿ. ಕಮಿಟಿಯಲ್ಲಿ ನಾವು ಸೂಚನೆ ಮಾಡಿದ್ದೇವೆ. ಇದರ ಬಗ್ಗೆ ಕೂಡಾ ತಾವುಗಳು ಹೇಳಬೇಕು. ಕೊನೆಯದಾಗಿ ಭೂನ್ಯಾಯ ಮಂಡಳಿಗಳನ್ನು ತಾವು ರಚನೆ ಮಾಡಿದ್ದೀರಿ. ಅದರಲ್ಲಿ ಸಾಮಾನ್ಯವಾಗಿ ಹೆಚ್ಚಾಗಿ ಆಡಳಿತ ಪಕ್ಷದ ಸದಸ್ಯರನ್ನೇ ಹಾಕಬೇಕೆಂದು ಒಂದು ಧೋರಣೆ ಇದ್ದೇ ಇರುತ್ತದೆ. ಆದರೆ ಅಂತಹವರಲ್ಲಿ ಪ್ರಾಮಾಣಿಕರು ಇದ್ದರೆ ಖಂಡಿತವಾಗಿ ನಾನು ಸ್ವಾಗತ ಮಾಡುತ್ತೇನೆ. ನಮ್ಮಲ್ಲಿ ತಮ್ಮ ಪಕ್ಷದವರೊಬ್ಬರನ್ನು ಹಾಕಿದ್ದೀರಿ. ಅವರ ಫ್ಯಾಮಿಲಿಯದೇ ಸುಮಾರು ೩೦ ಕೇಸುಗಳು ಇದ್ದವು. ಹೀಗೆ ಆದಾಗ ಒಮ್ಮೆ ಅವರನ್ನು ತೆಗೆದು ಬೇರೆ ಮೈನಾರಿಟಿಯವರೊಬ್ಬರನ್ನು ಹಾಕಿದ್ದೀರಿ. ನಾನು ಯಾರು ಅಗ್ರೆಸಿವ್ ಭೂಮಾಲೀಕರು ಎನ್ನುತ್ತೇನೆ, ಯಾರದ್ದು ೩೦–೪೦ ಕೇಸ್‌ಗಳು ಭೂನ್ಯಾಯ ಮಂಡಳಿಯಲ್ಲಿ ಪೆಂಡಿಂಗ್ ಇವೆ, ಅಂತಹವರನ್ನೇ ಹಾಕಿದ್ದೀರಿ. ಇಂತಹ ಉದಾಹರಣೆಗಳು ಇಡೀ ಕರ್ನಾಟಕದಲ್ಲಿ ಇದೆ. ನಿಮ್ಮ ಪಕ್ಷದವರನ್ನು ಹಾಕಿ, ಆದರೆ ಒಂದು ನೀತಿನಿಯಮ, ಪ್ರಾಮಾಣಿಕತೆ ಇದ್ದವರನ್ನು ಹಾಕಿ, ಬೇಡ ಎಂದು ಹೇಳುವುದಿಲ್ಲ, ಮಾನ್ಯ ಜೆ. ಎಚ್. ಪಟೇಲ್‌ರವರು ಹೇಳುತ್ತಾ ಇರುತ್ತಾರೆ, ನಮ್ಮ ಪಕ್ಷದವರನ್ನೇ ಹಾಕುತ್ತೇವೆ ಎಂದು, ನಾನು ಅವರ ಮಾತನ್ನು ಒಪ್ಪುತ್ತೇನೆ. ಆದರೆ ನೇಮಕ ಮಾಡುವಾಗ ಆ ವ್ಯಕ್ತಿಯ ಬಯೋ ಡಾಟ, ಆತ ಭೂಮಾಲೀಕರ ಪರವಾಗಿ ಇದ್ದಾನೆಯೇ, ನಿಷ್ಠೆಯುಳ್ಳವನೂ, ನಿಷ್ಪಕ್ಷಪಾತದಿಂದ ನ್ಯಾಯಕೊಡತಕ್ಕವನೂ ಆಗಿದ್ದಾನೆಯೇ, ಆತನಿಗೆ ಈ ಮಸೂದೆಯಲ್ಲಿ ಇರತಕ್ಕಂತಹ ಆಸಕ್ತಿ ಏನು ಎಂಬಿತ್ಯಾದಿ ಎಲ್ಲಾ ವಿವರಗಳನ್ನು ತಿಳಿದುಕೊಂಡು, ಅದರ ಬಗ್ಗೆ ಒಂದು ವರದಿ ಪಡೆದುಕೊಂಡು ಪರಿಶೀಲಿಸಿ ನೇಮಕ ಮಾಡಿದರೆ ಅದು ಸೂಕ್ತವಾಗುತ್ತದೆ, ಆ ರೀತಿಯಲ್ಲಿ ನೇಮಕ ಮಾಡುತ್ತೀರಾ ? ಇದನ್ನು ಇಡೀ ಕರ್ನಾಟಕ ರಾಜ್ಯದಲ್ಲಿ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ತಾವುಗಳು ಭೂಮಾಲೀಕರಿಗೆ ಕೊಡತಕ್ಕಂತಹ ಹಣದ ಬಗ್ಗೆ ಹೇಳಿದ್ದೀರಿ. ಅದರಂತೆ ಈಗಾಗಲೇ ಸರಕಾರ ೨ ಸಾವಿರದಿಂದ ೧೦ ಸಾವಿರ ಕೊಡಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದೆ. ಅದಕ್ಕಾಗಿ ಕಾನೂನನ್ನು ತಿದ್ದುಪಡಿ ಮಾಡಿದ್ದೇವೆ. ಅವರೆಲ್ಲರಿಗೂ ಎನ್. ಎಸ್. ಸಿ. ಕೊಡುತ್ತೇವೆ. ಮತ್ತು ಅದು ಎಷ್ಟೇ ಇದ್ದರೂ ಕೂಡಾ ಜಾರಿಗೆ ಕೊಟ್ಟಿದ್ದೇವೆ. ಒಂದು ಅಪೀಲ್ ಕೂಡಾ ಮಾಡಿದ್ದೇವೆ, ಎಲ್ಲಾ ಭೂ ಮಾಲೀಕರಿಗೆ ಸೂಕ್ತ ರೀತಿಯಲ್ಲಿ ತಿಳಿವಳಿಕೆ ಕೊಟ್ಟಿದ್ದೇವೆ. They should immediately contact the Officers and take the National Saving Certificates. ಅದರ ಬಗ್ಗೆ ತಾರತಮ್ಯ ಇಲ್ಲ. ಹಣವನ್ನು ಒದಗಿಸಿದ್ದೇವೆ, ಖರ್ಚು ಮಾಡತಕ್ಕಂತಹದ್ದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಲ್ಯಾಂಡ್ ಟ್ರಿಬ್ಯುನಲ್ ಬಗ್ಗೆ ಹೇಳಿದ್ದೀರಿ, ಅದರ ಬಗ್ಗೆ ಸೂಕ್ತ ರೀತಿಯಲ್ಲಿ ಆಲೋಚನೆ ಮಾಡುತ್ತೇವೆ. ಮತ್ತು ತಾವು ಹೇಳಿದಂತೆ ಪ್ಲಾನಿಂಗ್ ವಿಚಾರದಲ್ಲಿ ಅರ್ಧಘಂಟೆ ಚರ್ಚೆಯನ್ನು ಮಾಡೋಣ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಕಡಿಮೆಯಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸೋಶಿಯಲ್ ವೆಲ್‌ಫೇರ್ ಬಗ್ಗೆ ಕೂಡಾ ಹೆಚ್ಚಿಗೆ ಖರ್ಚು ಮಾಡತಕ್ಕಂತಹದ್ದು ಕೂಡಾ ಅತ್ಯಂತ ಅವಶ್ಯ ಎನ್ನುವುದನ್ನು ಬಹುಶಃ ಎಲ್ಲಾ ರಾಜ್ಯಗಳೂ ಮನಗಂಡಿದ್ದಾರೆ. ಇದು ಆಂಧ್ರಪ್ರದೇಶದಲ್ಲಿ ೨೬.೭ ಇದ್ದರೆ, ನಮ್ಮಲ್ಲಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಕಡಿಮೆಯಾಗಿಲ್ಲ, ಸೋಶಿಯಲ್ ವೆಲ್‌ಫೇರ್‌ಗೆ ಹೆಚ್ಚು ಮಾಡಿದ್ದೇವೆ. ಇದರ ಬಗ್ಗೆ ಅಂದರೆ ಬಟ್ಟೆ ಕೊಡುವುದು, ಆಹಾರಧಾನ್ಯಗಳನ್ನು ಹಂಚುವುದು ಮುಂತಾದವುಗಳಿಗೆ ಹೆಚ್ಚು ಖರ್ಚು ಮಾಡುತ್ತಾ ಇದ್ದೇವೆ. ಆಂಧ್ರ ಪ್ರದೇಶದವರು ೨೬.೭ ಮಾಡುತ್ತಾ ಇದ್ದರೆ

ನಾವು ೨೪.೨ ಖರ್ಚು ಮಾಡುತ್ತಾ ಇದ್ದೇವೆ. ತಮಿಳು ನಾಡಿನವರು ಸೋಶಿಯಲ್ ವೆಲ್‌ಫೇರ್‌ಗೆ ೩೬. ಮಾಡುತ್ತಾ ಇದ್ದಾರೆ. ಡೆವಲಪ್‌ಮೆಂಟ್ ಕಡಿಮೆ ಮಾಡಿ ಇದಕ್ಕೆ ಹೆಚ್ಚು ಖರ್ಚು ಮಾಡುತ್ತಾ ಇದ್ದಾರೆ. ಅದೇ ರೀತಿಯಲ್ಲಿ ನಾವು ಸ್ವಲ್ಪ ಮಾಡಿದ್ದೇವೆ. On page 3 of Economic Intelligence Service, a Government of India Publication, it is said ; ' In public sector 7th Pasn outlay, industry and minerals get much ess proportionally and social service more. Much less is given to others but past experience states that the allocations being given on a residuary basis have been substantially increased afterwards." ಅಲ್ಲಿಯೂ ಕೂಡಾ ಇವರು ಹೇಳುತ್ತಾ ಇದ್ದಾರೆ, ಸೋಶಿಯಲ್ ವೆಲ್‌ಫೇರ್‌ಗೆ ಹೆಚ್ಚಿಗೆ ಕೊಡಬೇಕು ಎಂದು. ಹಾಗೆಯೇ ಪವರ್‌ಬಗ್ಗೆ ಹೇಳಿದ್ದೀರಿ. ೧೯೮೫-೮೬ ರಲ್ಲಿ ೧.೮ ಕೋಟಿ ಕೊಟ್ಟಿದ್ದೇವೆ ನೀವು ಹೇಳಿದ ವಿಚಾರದಲ್ಲಿ......

ಶ್ರೀ ಎಂ. ವೀರಪ್ಪಮೊಯ್ಲಿ.— ಜನರೇಶನ್ ಕಡಿಮೆಯಾಗಿದೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ವಿವರಗಳ ಬಗ್ಗೆ ಬೇಕಾದಲ್ಲಿ ಅರ್ಧಗಂಟೆ ಚರ್ಚೆ ಮಾಡುವ ಯಾವ ಯಾವ ವಿಷಯ ಎಂದು ಕೊಡಿ, ಅದರ ಬಗ್ಗೆ ವಿವರವಾಗಿ ಚರ್ಚೆಮಾಡೋಣ.

ಶ್ರೀ ಜೆ. ಎಚ್. ಪಟೇಲ್.—ವಿದ್ಯುಚ್ಛಕ್ತಿಯ ಉತ್ಪಾದನೆಗೆ ಪ್ಲಾನಿಂಗ್‌ನಲ್ಲಿ ಜಾಸ್ತಿ ಮಾಡಿದ್ದೇವೆ ಡಿಸ್ಟ್ರಿಬ್ಯೂಶನ್ ಮೆಂಟೈನೆನ್ಸ್‌ಗೆ ಹೋದವರ್ಷಕ್ಕೆ ಪ್ರಪೋರ್ಷನ್ ಎಷ್ಟು ಇದೆಯೋ ಅದನ್ನು ಕಡಿಮೆ ಮಾಡಿದ್ದೇವೆ. ಇದರ ಜೊತೆಗೆ ಕೆ. ಪಿ. ಸಿ. ಯವರು ೬೦ ಕೋಟಿಯಷ್ಟು ಪಬ್ಲಿಕ್ ಲೋನ್ ಪಡೆದಿದ್ದಾರೆ. ಅಲ್ಲಿಗೆ ೧೭೫ ಮತ್ತು ೬೦ ಕೋಟಿ ಸೇರಿಸಿ, ೨೩೫ ಕೋಟಿ ಆಯಿತು. Rs. 235 crores will be spent on power generation.

ಶ್ರೀ ಎಂ. ವೀರಪ್ಪಮೊಯ್ಲಿ.— ಎಕಾನಮಿಕ್ ಸರ್ವೆ ಪ್ರಕಾರ ೧೯೮೪-೮೫ರಲ್ಲಿ ೧೦೦ ಕೋಟಿ ಕೊಟ್ಟಿದ್ದೀರಿ, ೧೯೮೫-೮೬ರಲ್ಲಿ ೮೭.೦ ಕೊಟ್ಟಿದ್ದೀರಿ, ಅದು ಕಡಿಮೆಯಾಗಿದೆ.

ಶ್ರೀ ಜೆ. ಎಚ್. ಪಟೇಲ್.— ಎಕಾನಮಿಕ್ ಸರ್ವೆಯ ಪೇಜ್ ೯೪ ರಲ್ಲಿ ನೋಡಿ.

ಶ್ರೀ ಆರ್.ಎ. ನಾಯಕ್.—ಮಾನ್ಯ ಅಧ್ಯಕ್ಷರೇ ನಾನು ಮಾತನಾಡುವಾಗ ರಾಜ್ಯದ ಭೂನ್ಯಾಯ ಮಂಡಲಿಗಳಲ್ಲಿ ಕಾನೂನಿಗೆ ವಿರುದ್ಧವಾಗಿ ತೀರ್ಮಾನ ಮಾಡುತ್ತಿದ್ದಾರೆಂದು ಆಪಾದನೆ ಮಾಡಿದ್ದೆ. ಹಾಗೂ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಭೂನ್ಯಾಯ ಮಂಡಲಿಯಲ್ಲಿ ತೀರ್ಮಾನ ವಾದಂಥ ಒಂದು ಕೇಸನ್ನು ಉದಾಹರಣೆ ಸಹ ಕೊಟ್ಟು ಹೇಳಿದ್ದೆ. ಭೂನ್ಯಾಯಮಂಡಲಿಗಳಲ್ಲಿ ಆಗಿರತಕ್ಕಂಥ ಅನ್ಯಾಯವನ್ನು ತಡೆಗಟ್ಟಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ? ಮತ್ತು ಅನ್ಯಾಯ ಮಾಡಿರತಕ್ಕಂಥ ನ್ಯಾಯ ಮಂಡಲಗಳನ್ನು ವಜಾ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಬಗ್ಗೆ ವಿವರವಾದ ಒಂದು ವರದಿಯನ್ನು ಕಳುಹಿಸಿಕೊಡಿ ಎಂದು ನಾನು ಜಿಲ್ಲಾಧಿಕಾರಿಗಳಿಗೆ ಮತ್ತು ಡಿವಿಜನಲ್ ಕಮೀಷನರ್‌ಗೆ ಬರೆದಿದ್ದೇನೆ ಮತ್ತು ರಾಜ್ಯಾದ್ಯಂತ ಭೂನ್ಯಾಯಮಂಡಲಿಗಳಲ್ಲಿ ಅನ್ಯಾಯವಾಗಿದೆ ಎಂದು ನನಗೆ ಸುಮಾರು ೩-೪ ಭೂನ್ಯಾಯ ಮಂಡಲಗಳ ಮೇಲೆ ದೂರುಗಳು ಬಂದಿದ್ದು ಆ ಬಗ್ಗೆ ಎನ್‌ಕ್ವೈರಿಯನ್ನು ಮಾಡಿಸುತ್ತಿದ್ದೇನೆ, ಅವರು ತಪ್ಪುಮಾಡಿದರೆ ಕ್ರಮ ಕೂಡ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಸುತ್ತಮುತ್ತಲಿನ ಜಮೀನುಗಳ ವ್ಯಾಲ್ಯು ಜಾಸ್ತಿ ಇರುವುದರಿಂದ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಜಾಸ್ತಿ ಸ್ಟ್ಯಾಂಪ್ ಶುಲ್ಕ ಕಟ್ಟಬೇಕಾಗುತ್ತದೆಂದು ಹೇಳಿ ಜನ ಹೊರರಾಜ್ಯಗಳಾದ ತಮಿಳುನಾಡು ಆಂಧ್ರಪ್ರದೇಶಕ್ಕೆ ಹೋಗಿ ರಿಜಿಸ್ಟರ್ ಮಾಡಿಸಿಕೊಂಡು ಬರುತ್ತಿದ್ದಾರೆ ಎಂದು ನನಗೆ ಗೊತ್ತಾಗಿದೆ ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿದೆ. ಈ ಬಗ್ಗೆ ಸರ್ಕಾರಕ್ಕೆ ಏನಾದರೂ ಮಾಹಿತಿ ಬಂದಿದೆಯೇ? ಇದನ್ನು ತಡೆಗಟ್ಟುವುದಕ್ಕೆ ತಾವು ಏನಾದರು ಕ್ರಮ ಕೈಗೊಂಡಿದ್ದೀರಾ? ನಾನು ಈ ಹಿಂದೆಯೇ ಈ ಸಲಹೆ ಕೊಟ್ಟಿದ್ದೆ. ಅದೇನೆಂದರೆ ಹೆಚ್ಚಿನ ಸ್ಟ್ಯಾಂಪ್ ಬೇಕಾದವರಿಗೆ ಸಬ್

ರಿಜಿಸ್ಟ್ರಾರ್ ಕಚೇರಿಗಳಲ್ಲಿಯೇ ಸ್ಟಾಂಪ್ ಪೇಪರ್ ಒದಗಿಸಿಕೊಟ್ಟರೆ ಇದರಿಂದ ಸುಮಾರು ಎರಡು ಮೂರು ಪರ್ಸೆಂಟ್ ಕಮಿಷನ್ ಬರುತ್ತದೆ. ಎಂದು ಸರ್ಕಾರಕ್ಕೆ ಸುಮಾರು ೨ ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಈ ಬಗ್ಗೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮದ್ರಾಸ್ ರಾಜ್ಯದಲ್ಲಿ ರಿಜಿಸ್ಟ್ರೇಶನ್ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದು ಕೇಂದ್ರ ಸರ್ಕಾರದ ಕಾನೂನು. ಈ ಕಾನೂನಿಗೆ ತಿದ್ದುಪಡಿ ತರತಕ್ಕಂಥಾದ್ದು ಅವಶ್ಯಕ ಇದೆ. ಆ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತಿದೆ. ಈ ರೀತಿ ಬಹಳ ಜನ ಮೋಸ ಮಾಡುತ್ತಿದ್ದಾರೆ. ಯಾವ ರೀತಿಯ ತಿದ್ದುಪಡಿ ಮಾಡಬೇಕೆಂದು ನಾನು ಯೋಚನೆ ಮಾಡುತ್ತಿದ್ದೇನೆ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿಯೇ ಸ್ಟ್ಯಾಂಪ್ ಪೇಪರ್‌ಗಳನ್ನು ಮಾರಾಟ ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಅವರಿಗೆ ಹೆಚ್ಚಿನ ಕೆಲಸ ಇದೆ. ಈಗ ಕೊಟ್ಟಿರುವ ಕೆಲಸವನ್ನು ಸರಿಯಾಗಿ ಮಾಡಿ ಮುಗಿಸಿದರೆ ಸಾಕು.

ಶ್ರೀ ಗೋಪಾಲಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಸರ್ಕಾರ ಪರಿಶೀಲನೆ ಮಾಡೋಣವೆಂದು ಹೇಳದಿದ್ದರೆ ಸಾಕು. ಮೊನ್ನೆಯ ದಿವಸ ನಾನು ಮಾತನಾಡುವಾಗ ಮನೆ ಸುಟ್ಟು ಹೋದ ಕುಟುಂಬಕ್ಕೆ ಕೊಡುವ ೩೦೦ ರೂಪಾಯಿಗಳ ಪರಿಹಾರವನ್ನು ೧೦೦೦ ರೂಪಾಯಿಗಳಾಗಿ ಮಾಡಬೇಕೆಂದು, ಮತ್ತು ಜನತಾ ಮನೆ ಮತ್ತು ಹುಡ್ಕೋ ಮನೆ ಕಟ್ಟಿಸಿಕೊಡಬೇಕಾದರೆ ಅವರಿಗೆ ೨೦೦೦ ರೂಪಾಯಿಗಳು ಇರುವಂತ ಇನ್‌ಕಮ್ ಅನ್ನು ೪ ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಬೇಕು. ಎಂದು ಹೇಳಿದ್ದೆ ಇನ್ನು ಬಡವರ್ಗದ ಜನತೆ ಕಟ್ಟಿಕೊಳ್ಳುವ ಮನೆಗಳಿಗೆ ಸರ್ಕಾರದವರು ೫೦೦ ರೂಪಾಯಿಗಳಿಂದ ೧೦೦೦೦ರೂಪಾಯಿಗಳವರೆಗೆ ಟ್ಯಾಕ್ಸನ್ನು ಕೊಡಬೇಕೆಂದು ಹೇಳಿ ವಸೂಲಿ ಮಾಡುತ್ತಿದ್ದಾರೆ. ಇದರಿಂದ ಬಡವರಿಗೆ ಬಹಳ ಕಷ್ಟವಾಗಿದೆ. ಆದ್ದರಿಂದ ಬಡ ಜನತೆ ಕಟ್ಟಿಕೊಳ್ಳುವ ಮನೆಗಳಿಗೆ ಗುಂಟೆ ಒಂದಕ್ಕೆ ೨೫ ರೂಪಾಯಿಗಳನ್ನು ಮಾತ್ರ ಹಾಕಬೇಕೆಂದು ನಾನು ಕೇಳಿಕೊಂಡಿದ್ದೆ ಈ ಬಗ್ಗೆ ತಾವು ಸರಿಯಾದ ಉತ್ತರ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ —ಪರಿಹಾರವನ್ನು ಯಾವ ರೀತಿಯಲ್ಲಿ ಕೊಡಬೇಕು ಎನ್ನುವುದರ ಬಗ್ಗೆ ಇನ್ನು ಒಂದು ವಾರದಲ್ಲಿ ಆಜ್ಞೆ ಮಾಡಲಾಗುವುದು, ಇನ್ನು ಬೇರೆ ಬೇರೆ ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಬೇರೆ ಬೇರೆ ಇಲಾಖೆಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಹೇಳಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹಿಂದಿನ ಸಾರಿ ಈ ರೆವಿನ್ಯೂ ಇಲಾಖೆಯ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಕೆಲವಾರು ಸಲಹೆಗಳನ್ನು ಕೊಟ್ಟಿದೆ. ಆಗ ನಾನು ಏನು ಸಲಹೆ ಮಾಡಿದ್ದೆ ಎಂದರೆ ಜಿಲ್ಲಾಧಿಕಾರಿಗಳಿಗೆ ಮತ್ತು ಡಿವಿಜನಲ್‌ಕಮಿಷನರ್ಸ್‌ಗೆ ಹೆಚ್ಚು ಅಧಿಕಾರವನ್ನು ಕೊಡಿ. ಅವರ ಮೇಲೆ ಸರ್ಕಾರದ ನಿಯಂತ್ರಣ ಇರಬಾರದು. ಅವರು ಎಸ್. ಡಿ. ಸಿ. ಮತ್ತು ಎಫ್. ಡಿ. ಸಿ. ಯವರನ್ನು ವರ್ಗಾವಣೆ ಮಾಡುವಂಥ ಅಧಿಕಾರ ಕೊಡಿ ಎಂದು ಹೇಳಿದ್ದೆ. ಇಲ್ಲದಿದ್ದರೆ ನಿಮ್ಮ ಆಡಳಿತ ಯಂತ್ರ ಕುಸಿದು ಬೀಳುತ್ತದೆಂದು ಸಹ ನಾನು ಹೇಳಿದ್ದೆ. ಇನ್ನು ಪ್ರಾಹಿಬಿಶನ್ ಆಫ್ ಎಲಿನೇಟೆಡ್ ಲ್ಯಾಂಡ್ಸ್ ಬಗ್ಗೆ ಸಾಕಷ್ಟು ಕೆಲಸ ನಡೆಯುತ್ತಿಲ್ಲ. ತೋಟಿ ಮತ್ತು ತಳವಾರರಿಗೆ ಜಮೀನು ಕೊಟ್ಟಿದ್ದೀರಿ. ಆ ಬಗ್ಗೆ ಅಧಿಕಾರಿಗಳು ಸಾಕಷ್ಟು ಗಮನವಿಟ್ಟು ಕೆಲಸ ಮಾಡುತ್ತಿಲ್ಲ. ಈ ಬಗ್ಗೆ ಪರಿಶೀಲನೆ ಮಾಡಿ ಎಂದು ಸಹ ಹೇಳಿದ್ದೆ. ಆ ಜಮೀನುಗಳನ್ನು ಯಾರು ಕೊಂಡುಕೊಂಡಿದ್ದಾರೋ ಅವರು ಅಧಿಕಾರಿಗಳು ಕೆಲಸ ಮಾಡುವುದಕ್ಕೆ ಬಿಡುತ್ತಿಲ್ಲ ಮತ್ತು ನಾನು ಈ ಬಗ್ಗೆ ತಮಗೊಂದು ಕಾಗದ ಸಹ ಬರೆದಿದ್ದೇನೆ. ಈ ಬಗ್ಗೆ ನಾನು ಒಂದು ಉದಾಹರಣೆಯನ್ನು ಸಹ ಬೇಕಾದರೆ ಕೊಡುತ್ತೇನೆ. ಶಿರಹಟ್ಟಿ ತಾಲ್ಲೂಕಿನಲ್ಲಿ ಮಾಗಡಿ ಎನ್ನುವ ಒಂದು ಗ್ರಾಮ ಇದೆ. ಅಲ್ಲಿ ಒಬ್ಬ ಹರಿಜನರ ಜಮೀನನ್ನು ಮಂಜೂರು ಮಾಡುವ ಮಧ್ಯದಲ್ಲಿಯೇ ಪರಭಾರೆ ಮಾಡಿಸಿಕೊಂಡುಬಿಟ್ಟಿದ್ದಾರೆ. ಆ ಜಮೀನು ಸಬ್ ರಿಜಿಸ್ಟ್ರಾರ್‌ರವರ ಕಚೇರಿಯಲ್ಲಿ ರಿಜಿಸ್ಟರ್ ಸಹ ಆಗಿದೆ. ಆದರೆ ಸರ್ವೆ ನಂಬರು ೫೧ರಿಂದ ೫೪. ಈ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜಿಲ್ಲಾಧಿಕಾರಿಗಳಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕೆಂದು ಹೇಳಿದ್ದೀರಿ. ನಾವು ಅವರಿಗೆ ಹೆಚ್ಚು ಅಧಿಕಾರವನ್ನು ಕೊಟ್ಟಿದ್ದೇವೆ. ಗ್ರಾಮಲೆಕ್ಕಿಗರ

ವರ್ಗಾವಣೆಯನ್ನು ಮಾಡತಕ್ಕಂಥ ಅಧಿಕಾರ ಇದೆ. ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಮಾಡಬೇಕಾದರೆ ಸರ್ಕಾರಕ್ಕೆ ಬರೆಯಬೇಕಾಗುತ್ತದೆ. ಈಗ ಎಷ್ಟೋ ಕೇಸ್‌ಗಳಲ್ಲಿ ಅವರು ಪ್ರಿಮಚ್ಯೂರ ವರ್ಗಾವಣೆಯನ್ನು ಸಹ ಮಾಡಿಬಿಟ್ಟು ನಂತರ ಸರ್ಕಾರಕ್ಕೆ ಪತ್ರ ಬರೆಯುತ್ತಾರೆ. ಆಗ ಸರ್ಕಾರ ಕೂಡ ಅಪ್ಪಣೆ ಕೊಡಬೇಕಾಗುತ್ತದೆ. ಇನ್ನು ಎಸ್. ಸಿ. ಮತ್ತು ಎಸ್. ಟಿ. ಯವರ ವಿಚಾರದಲ್ಲಿ ತಾವೇನು ಹೇಳಿದ್ದೀರಿ ಆ ಬಗ್ಗೆ ಸುಪ್ರೀಂ ಕೋರ್ಟ್‌ನಿಂದ ಒಂದು ನಿರ್ಧಾರ ಬಂತು. ಆ ಬಗ್ಗೆ ನಾನು ವಿವರಣೆಯನ್ನು ಕೊಟ್ಟು ಸರ್ಕ್ಯುಲರ್ ಹೊರಡಿಸಿದ್ದೇನೆ. ಇನ್ನು ಶಿರಟ್ಟಿ ತಾಲ್ಲೂಕು ವಿಚಾರ ಹೇಳಿದ್ದೀರಿ ಆ ಬಗ್ಗೆ ಒಂದು ಪ್ರೊಸೀಜರ್ ಇದೆ. ಆ ಪ್ರೊಸೀಜರ್ ಫಾಲೋಮಾಡದಿದ್ದರೆ ಸರ್ಕಾರ ಸೂಕ್ತ ತೆಗೆದುಕೊಂಡು ತಪ್ಪಿತಸ್ಥರಾಗಿದ್ದರೆ ಕ್ಯಾನ್ಸಲ್ ಮಾಡಿ ಅವರಿಗೆ ಶಿಕ್ಷೆಯನ್ನು ಸಹ ವಿಧಿಸುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಅವರು ಎ.ಸಿ. ಮುಂದೆ ಅರ್ಜಿ ಸಹ ಹಾಕಿಕೊಂಡಿದ್ದಾರೆ.ಡಿ.ಸಿ. ಮುಂದೆ ಸಹ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಆದರೆ ಅವರು ಬಡವರಾದ್ದರಿಂದ ಅವರಿಗೆ ಇದುವರೆವಿಗೂ ನ್ಯಾಯ ಸಿಕ್ಕಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನು ಪ್ರಕಾರ ಯಾವ ಕ್ರಮ ತೆಗೆದುಕೊಳ್ಳ ಬೇಕೋ ಆ ರೀತಿ ಮಾಡುತ್ತೇನೆ, ತಾವು ಹಿಂದೆ ಮಂತ್ರಿಗಳಾಗಿದ್ದಾಗ ಒಂದು ಕಮಿಟಿಯಲ್ಲಿ ನಾನು ಸಹ ಕೆಲಸ ಮಾಡಿದ್ದೇನೆ. ಆಗ ಹಾಸನ ಜಿಲ್ಲೆಯ ಎಲ್ಲಾ ಅರ್ಜಿಗಳನ್ನು ವಿತರಣೆ ಮಾಡಿ ಮುಗಿಸಿದ್ದೇನೆ.

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳ ಉತ್ತರ ಮತ್ತು ಕ್ಲಾರಿಫಿಕೇಶನ್ಸ್ ಮುಗಿಯಿತು.

ಪ್ರಸ್ತಾವವೇನೆಂದರೆ,

"೩೧-೩-೮೬ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೪೩, ೪೯, ೫೦, ೫೧, ೫೨, ಮತ್ತು ೫೩ಕ್ಕೆ, ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರಿದ ಮೊಬಲಗನ್ನು ಮಂಜೂರು ಮಾಡಬೇಕು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಕೆಳಕಂಡ ಬೇಡಿಕೆಗಳನ್ನು ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೪೯—ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೯,೨೭,೨೮,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೦,೧೨,೮೫,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ೫೦—ಮುದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟ್ಯಾಂಪ್‌ಗಳು) ಮತ್ತು ನೊಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೦೯,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ೫೧—ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೭೦,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ೫೨—ಪುನರ್ವಸತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪುನರ್ವಸತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨,೨೬,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ೫೩—ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೭೧,೬೮,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ೪೩—ಯೋಜನಾ ಇಲಾಖೆಯ ಅಭಿಯಾಚನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೩೭,೪೯.೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಲಾಗಿದೆ.

ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಚಿಕ್ಕಬಳ್ಳಾಪುರಕ್ಕೆ ತಾಲ್ಲೂಕು ಮಟ್ಟದ ಕ್ರಿಡಾಂಗಣದ ನಿರ್ಮಾಣ

೧೭೭೪. ಶ್ರೀ ಕೆ. ಎಂ, ಮುನಿಯಪ್ಪ (ಚಿಕ್ಕಬಳ್ಳಾಪುರ).— ಮಾನ್ಯ ವಾರ್ತಾ ಯುವ ಜನಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ.

೧. ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ತಾಲ್ಲೂಕು ಮಟ್ಟದಲ್ಲಿ ಕ್ರೀಡಾಂಗಣಕ್ಕೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು? ಹಾಗೂ ಎಷ್ಟು ಅವಧಿಯಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು ?

ಶ್ರೀ. ಜೀವರಾಜ್ ಆಳ್ವ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನಸೇವಾ ರಾಜ್ಯಸಚಿವರು

೧. ಸರ್ಕಾರ ಈಗಾಗಲೇ ಚಿಕ್ಕಬಳ್ಳಾಪುರದಲ್ಲಿ ಕೀಡ್ರಾಂಗಣ ಕಟ್ಟಲು ೮,೭೩ ಲಕ್ಷ ರೂಗಳ ಅಂದಾಜುವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ೧೯೮೬ನೇ ಇಸವಿಯಲ್ಲಿ ಕೊಟ್ಟಿದೆ. ಜಿಲ್ಲಾ ಮಟ್ಟದ ಕ್ರೀಡಾಂಗಣ ಕಾರ್ಯ ಪೂರ್ಣಗೊಂಡ ನಂತರ ಚಿಕ್ಕಬಳ್ಳಾಪುರ ತಾಲ್ಲೂಕು ಕ್ರೀಡಾಂಗಣ ಕಾರ್ಯದ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು

ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರ ಒಂದು ಉಪ ವಿಭಾಗ ಕೇಂದ್ರ ಸ್ಥಳ. ಇಲ್ಲಿ ಪ್ರಖ್ಯಾತಿಯಾದ ಆಟಗಾರರು ಇದ್ದರು. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸುತ್ತಿದ್ದರು. ಇಂತಹ ಸ್ಥಳದಲ್ಲಿ ಕ್ರೀಡಾಂಗಣ ಇಷ್ಟು ದಿವಸವಾಗದಿರುವುದು ವಿಷಾದಕರ. ಇದನ್ನು ಎಷ್ಟು ದಿವಸದಲ್ಲಿ ಮಾಡಿಸಿಕೊಡುತ್ತೀರೆಂಬುದಕ್ಕೆ ಭರವಸೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೀವರಾಜ್ ಆಳ್ವ.— ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರದಲ್ಲಿ ಕ್ರೀಡಾಂಗಣ ಕಟ್ಟಲೇಬೇಕೆಂಬುದನ್ನು ಒಪ್ಪುತ್ತೇನೆ. ಕಾರಣಾಂತರದಿಂದ ಹಾಗೂ ಹಣಕಾಸಿನ ಕೊರತೆ ಇರುವುದರಿಂದ